
ಜುಲೈ 20, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1994
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಕನ್ನಡ ಚಿತ್ರರಂಗ ಬರ್ಬಾದ್ ಹೋಗಯಾ!

# ಪ್ಯಾನ್ ಇಂಡಿಯಾ ಸ್ಟಾರ್‌ಗಳಿಗೆ ನಿರ್ಮಾಪಕ ಕನಕಪುರ ಶ್ರೀನಿವಾಸ್ ವಾರ್ನಿಂಗ್!





20 ಲಕ್ಷಕ್ಕೆ ಪಂಗನಾಮ?!



## ಗಂಡನ ಕೊಂದು ಬಿದ್ದು ಸತ್ತನೆಂದು ಕತೆ ಕಟ್ಟಿದಳು!

## ಮೈಸೂರಿನಲ್ಲಿ ರಂಗೇರಿದ ಮಾಂಸ ದಂಧೆ!



## ಧರ್ಮಸ್ಥಳದ ತಲೆಬುರುಡೆ ರಹಸ್ಯ!

## ಕಲಬುರ್ಗಿ ತ್ರಿಬಲ್ ಮರ್ಡರ್!

# ಬಿಜೆಪಿ ಮುಖಂಡನ ಮಗ ಮಗು ಕೊಟ್ಟು ಕೈಕೊಟ್ಟ!



ಆರೋಪಿ ಶ್ರೀಕೃಷ್ಣರಾವ್

**ಹತ್ತೂರು ಒಡೆಯನ ಊರು ಪುತ್ತೂರು. ಈ ಹಿಂದೆ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಸುದ್ದಿಯಾಗಿತ್ತು. ರಾಜ್ಯದ ಭೂಗತ ಜಗತ್ತಿನಲ್ಲಿ ಪುತ್ತೂರಿಗೆ ಒಂದು ಹೆಸರು ಇತ್ತು. ಇಲ್ಲಿನ ಬ್ಯಾಂಕೊಂದರಲ್ಲಿ ಕ್ಲರ್ಕ್ ಆಗಿದ್ದಂತಹ ಮುತ್ತಪ್ಪರೈ ಬೆಂಗಳೂರು ಸೇರಿ ಭೂಗತ ಜಗತ್ತನ್ನು ಆಳಿದ್ದು ಇತಿಹಾಸ. ಇಂತಹ ಹಿನ್ನೆಲೆಯಿರುವ ಪುತ್ತೂರು ಸಂಘ ಪರಿವಾರದ ಪ್ರಯೋಗಶಾಲೆ ಎಂಬ ಹೆಸರನ್ನು ಪಡೆದಿದೆ. ರಾಜಕೀಯದಲ್ಲಿ ಪುತ್ತೂರು 1978ರಲ್ಲಿ ಜನತಾ ಪಕ್ಷದ ಅಭ್ಯರ್ಥಿ ಉರಿಮಜಲು ರಾಮ್‌ಭಟ್ ಅವರನ್ನು ವಿಧಾನಸಭೆಗೆ ಕಳುಹಿಸಿತ್ತು. ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದ ಸುಳ್ಯ ಮೂಲದ ವಕೀಲ ಡಿ.ವಿ. ಸದಾನಂದ ಗೌಡ ಅವರು ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದರು. ಇಲ್ಲಿನ ಪುರಾಣ ಪ್ರಸಿದ್ಧ ಮಹಾಲಿಂಗೇಶ್ವರ ದೇವಸ್ಥಾನ ಹತ್ತೂರಿಗೆ ಪ್ರಸಿದ್ಧಿ. ಮುತ್ತು ಬೆಳೆಯುವಂತಹ ದೇವರ ಕೆರೆ ಇರುವುದರಿಂದ ಈ ಊರಿಗೆ ಮುತ್ತೂರು ಎಂಬ ಹೆಸರಿತ್ತು. ಕಾಲಕ್ರಮೇಣ ಅದು ಪುತ್ತೂರು ಎಂದು ಬದಲಾಗಿತ್ತು. ಇಂತಹ ಹಿನ್ನೆಲೆ ಇರುವಂತಹ ಪುತ್ತೂರು ಇದೀಗ ಬೇಡದ ಕಾರಣಕ್ಕಾಗಿ ಸುದ್ದಿಯಾಗಿದೆ. ಹದಿಹರೆಯದ ಪ್ರೇಮ ಪ್ರಕರಣವೊಂದು ಸಮಾಜದಲ್ಲಿ ಅಶಾಂತಿಯನ್ನು ಉಂಟು ಮಾಡುವಷ್ಟರಕ್ಕೆ ಬೆಳೆದು ಪೊಲೀಸರ ಸಕಾಲಿಕ ಪ್ರಯತ್ನದ ಬಳಿಕ ತಣ್ಣಗಾಗಿದೆ. ಪ್ರಕರಣ ನ್ಯಾಯಾಲಯದ ಮೆಟ್ಟಿಲು ಏರಿದೆ.**

**ಮಂಗಳೂರು**

✍ ಮೋಹನ್ ಬೋಳಂಗಡಿ

ಪುತ್ತೂರಿನಲ್ಲಿ ಜಗನ್ನಿವಾಸರಾವ್ ಎಂದರೆ ಸಾಮಾಜಿಕವಾಗಿ ರಾಜಕೀಯವಾಗಿ ದೊಡ್ಡ ಹೆಸರು. ಸಂಘ ಪರಿವಾರದ ಕಟ್ಟಾಳು. ಪುತ್ತೂರು ನಗರ ಸಭೆಯ ಬಿಜೆಪಿ ಪಕ್ಷದ ಸದಸ್ಯ. ವಾಸ್ತು ತಜ್ಞರಾಗಿ ರಾಜ್ಯದ ವಿವಿಧೆಡೆಗಳಲ್ಲಿ ದೇವಸ್ಥಾನ, ದೈವಸ್ಥಾನ, ಮನೆ-ಮಠ-ಮಂದಿರಗಳಿಗೆ ವಾಸ್ತು ಶಾಸ್ತ್ರದನ್ವಯ ಸಲಹೆ ಸೂಚನೆಗಳನ್ನು ಕೊಡುತ್ತಿರುವಂತಹ ಆಗರ್ಭ ಶ್ರೀಮಂತ. ಪುತ್ತೂರಿನ ಬಪ್ಪಳಿಗೆಯಲ್ಲಿ ಐಷಾರಾಮಿ ಮನೆಯಲ್ಲಿ ಪತ್ನಿ ಮಕ್ಕಳೊಂದಿಗೆ ವಾಸವಿದ್ದಾರೆ. ಅವರ ಪತ್ನಿ ಪುತ್ತೂರಿನ ಶ್ರೀ ರಾಮಕೃಷ್ಣ ಪ್ರೌಢಶಾಲೆಯಲ್ಲಿ ಶಿಕ್ಷಕಿ. ಇವರ ಮಗನೇ ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ.




ಸಂತ್ರಸ್ತ ವಿದ್ಯಾರ್ಥಿನಿ

ವಯಸ್ಸು 21 ಕ್ಕೆ ಅಡಿಯಿಟ್ಟಿದ್ದಾನೆ. ಈತನ ಹೆಸರು ಶ್ರೀಕೃಷ್ಣ ಜೆ.ರಾವ್. ಹೆಸರಿಗೆ ಅನ್ವರ್ಥವಾಗಿ ಕೃಷ್ಣಲೀಲೆಯನ್ನು ನಡೆಸಲು ಹೋಗಿ ಸಿಕ್ಕಿಬಿದ್ದು ಇದೀಗ ಮಂಗಳೂರು ಸಬ್ ಜೈಲಿನಲ್ಲಿ ವಿಚಾರಣಾಧೀನ ಖೈದಿಯಾಗಿದ್ದಾನೆ. ಅದಕ್ಕೆ ಕಾರಣವಾದದ್ದು ಆತ ನಂಬಿಸಿ ಕೈಕೊಟ್ಟ ವಿದ್ಯಾರ್ಥಿನಿಯೊಬ್ಬಳು ಆತನ ವಿರುದ್ಧ ದಾಖಲಿಸಿದ್ದ ಪೊಲೀಸು ದೂರು. ಜೆ. ಶ್ರೀಕೃಷ್ಣರಾವ್ ವಿರುದ್ಧ ಯುವತಿಯೊಬ್ಬಳು ನೀಡಿದ ದೂರಿನನ್ವಯ ಪುತ್ತೂರು ಮಹಿಳಾ ಠಾಣಾ ಪೊಲೀಸರು ಅತ್ಯಾಚಾರ, ನಂಬಿಕೆದ್ರೋಹ, ವಂಚನೆ ಆರೋಪದಡಿ ಕೇಸು ದಾಖಲಿಸಿಕೊಂಡು ಪರಾರಿಯಾಗಿದ್ದಂತಹ ಜೆ. ಶ್ರೀಕೃಷ್ಣರಾವ್‌ನನ್ನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಜಗನ್ನಿವಾಸ ರಾವ್ ಅವರ ಸ್ನೇಹಿತನ ತೋಟದ ಮನೆಯಲ್ಲಿ ಪತ್ತೆ ಹಚ್ಚಿ ಕರೆದುಕೊಂಡು ಬಂದು ನ್ಯಾಯಾಲಯಕ್ಕೆ ಹಾಜರು ಪಡಿಸಿ ಜೈಲಿಗೆ ಬಿಟ್ಟುಬಂದಿದ್ದಾರೆ.



### ಏನಾಯಿತು?

ಜಗನ್ನಿವಾಸರಾವ್‌ರವರ ಮಗ ಜೆ.ಶ್ರೀಕೃಷ್ಣರಾವ್ ಮತ್ತು ಸಂತ್ರಸ್ತ ವಿದ್ಯಾರ್ಥಿನಿ ಪುತ್ತೂರಿನ ಶ್ರೀರಾಮಕೃಷ್ಣ ಹೈಸ್ಕೂಲಿನಲ್ಲಿ 9ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಸಹಪಾಠಿಗಳಾಗಿದ್ದರು. ಹೈಸ್ಕೂಲು ಮುಗಿಸಿ ಇಬ್ಬರೂ ಕಾಲೇಜು ಮೆಟ್ಟಲು ಹತ್ತಿದಾಗ ಇನ್ನಷ್ಟು ಹತ್ತಿರವಾಗಿದ್ದರು. ಪಿಯುಸಿ ಮುಗಿಯುತ್ತಿದ್ದಂತೆ ಜೆ. ಶ್ರೀಕೃಷ್ಣರಾವ್ ನೆಹರೂನಗರದಲ್ಲಿರುವ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿಗೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಸೇರ್ಪಡೆಗೊಂಡರೆ ಸಹವಿದ್ಯಾರ್ಥಿನಿಗೆ ವೈದ್ಯಕೀಯ ಶಿಕ್ಷಣ ಪಡೆಯುವ ಹಂಬಲ ಇತ್ತು. ಆದರೆ ಆರ್ಥಿಕ ಬಲ ಇಲ್ಲದ ಕಾರಣಕ್ಕಾಗಿ ಅರೆವೈದ್ಯಕೀಯ ಕೋರ್ಸ್ ಆಗಿರುವಂತಹ ವಿಧಿ ವಿಜ್ಞಾನ ತಂತ್ರಜ್ಞಾನ ಕೋರ್ಸ್ ನಡೆಸಲು ಮಂಗಳೂರಿನ ಹೊರವಲಯದ ದೇರಳಕಟ್ಟೆಯಲ್ಲಿರುವ ಏನೆಪೋಯ ಮೆಡಿಕಲ್ ಕಾಲೇಜಿಗೆ ಸೇರ್ಪಡೆಗೊಂಡಿದ್ದಳು. ಅವಳು ನಿತ್ಯ ಪುತ್ತೂರಿಗೆ ಹೋಗಿ ಬರುತ್ತಾ ವ್ಯಾಸಂಗ ಮಾಡುತ್ತಿದ್ದಳು. ಜೆ. ಶ್ರೀಕೃಷ್ಣರಾವ್ ಮತ್ತು ಆಕೆಯ ಕಾಲೇಜುಗಳು ಬೇರೆ ಬೇರೆ ಆದರೂ, ಅವರ ಸಂಪರ್ಕ ಕಡಿತವಾಗಿರಲಿಲ್ಲ. ನಿರಂತರವಾಗಿ ವೈಯಕ್ತಿಕವಾಗಿ ಅಥವಾ ದೂರವಾಣಿ ಮೂಲಕ ಮಾತನಾಡುತ್ತಿದ್ದರು. ಪುತ್ತೂರಿನ ಸಾಲ್ಮರದಲ್ಲಿ ಆಕೆಯ ಮನೆಯಿದ್ದರೆ ಅಲ್ಲಿಂದ ಕೇವಲ ಅರ್ಧ ಕಿ.ಮೀ. ದೂರದ ಬಪ್ಪಳಿಗೆಯಲ್ಲಿ ಆತನ ಮನೆಯಿತ್ತು. ಆದ್ದರಿಂದ ಅವರಿಬ್ಬರ ಸಂಪರ್ಕಕ್ಕೆ ಅಡಚಣೆಯಾಗಿರಲಿಲ್ಲ. ಈ ವಿಚಾರ ಇಬ್ಬರ ಹೆತ್ತವರ ಗಮನಕ್ಕೂ ಬಂದಿರಲಿಲ್ಲ.



ಆರೋಪಿ ತಂದೆ ಜಗನ್ನಿವಾಸರಾವ್

### ನಡೆಯಿತು ಸಂಗಮ

ಉತ್ತಮ ಸ್ನೇಹಿತರಾಗಿ ಸುಮಾರು 7ವರ್ಷಗಳಿಂದ ಅವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದರು. ಜೆ. ಶ್ರೀಕೃಷ್ಣರಾವ್ ಗೆ 20 ವರ್ಷ ಕಳೆದಿದೆ ಅಷ್ಟೆ. ಆದರೆ ಆತನ ಪ್ರೇಯಸಿಗೆ 18 ದಾಟಿತ್ತು. 2024 ಅಕ್ಟೋಬರ್ ತಿಂಗಳಲ್ಲಿ ಜೆ. ಶ್ರೀಕೃಷ್ಣರಾವ್ ಮನೆಯಲ್ಲಿ ಒಬ್ಬನೇ ಇದ್ದ. ಈ ಸಂದರ್ಭದಲ್ಲಿ ಆತ ಪ್ರೇಯಸಿಗೆ ಕರೆ ಮಾಡಿದ್ದ. ಆಕೆಯೂ ಕಾಲೇಜಿಗೆ ರಜೆಯಿದ್ದ ಕಾರಣ ಮನೆಯಲ್ಲಿದ್ದಳು. ಜೆ. ಶ್ರೀಕೃಷ್ಣರಾವ್‌ನ ಮನೆಯಲ್ಲಿ ತಾಯಿ ಹೈಸ್ಕೂಲಿಗೆ ಹೋಗಿದ್ದರೆ, ತಂದೆ ವೃತ್ತಿ ನಿಮಿತ್ತ ಹೊರಗೆ ಹೋಗಿದ್ದರು. ಇದೇ ಸುಸಂದರ್ಭದಲ್ಲಿ ಜೆ. ಶ್ರೀಕೃಷ್ಣರಾವ್ ಪ್ರೇಯಸಿಗೆ ತನ್ನ ಮನೆಗೆ ಬರುವಂತೆ ಆಹ್ವಾನ ನೀಡಿದ್ದ. ಅದರಂತೆ ಆಕೆ ಆತನ ಮನೆಗೆ ಹೋಗಿದ್ದಳು. ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ, ಇಬ್ಬರಿಗೂ ಪರಸ್ಪರ ಆಕರ್ಷಣೆ ಉಂಟಾಗಿದೆ. ಪರಿಣಾಮವಾಗಿ ಅವರಿಬ್ಬರೂ ದೈಹಿಕವಾಗಿ ಯಾವುದೇ ಮುಂಜಾಗ್ರತೆ ವಹಿಸದೆ ಒಟ್ಟಾದರು. ಹದಿಹರೆಯದಲ್ಲಿ ಮೊದಲ ತಪ್ಪು ಘಟಿಸಿತ್ತು. ಈ ತಪ್ಪುಗಳು 2-3 ತಿಂಗಳಲ್ಲಿ ಮತ್ತೇ ನಾಲ್ಕು ಬಾರಿ ಮರುಕಳಿಸಿತ್ತು. ಇಂತಹ ಸಮಯದಲ್ಲಿ ಸಂತ್ರಸ್ತೆ ಸುಮಾರು ಒಂದೂವರೆ ತಿಂಗಳು ಇಂಟರ್ನ್‌ಶಿಪ್‌ಗಾಗಿ ಉತ್ತರ ಪ್ರದೇಶಕ್ಕೆ ಹೋಗಿದ್ದಳು. ಈ ಸಂದರ್ಭದಲ್ಲೂ ಅವರಿಬ್ಬರೂ ದೂರವಾಣಿ ಮೂಲಕ ಸಂಪರ್ಕದಲ್ಲಿದ್ದರು. ಇದೇ ಸಮಯದಲ್ಲಿ ಜೆ. ಶ್ರೀಕೃಷ್ಣರಾವ್ ಅಯೋಧ್ಯೆಯ ಶ್ರೀರಾಮ ಮಂದಿರಕ್ಕೂ ಹೋಗಿದ್ದ, ತ್ರಿವೇಣಿ ಸಂಗಮದ ಕುಂಭಮೇಳಕ್ಕೂ ಹೋಗಿದ್ದ. ಆಕೆ ಇಂಟರ್ನ್‌ಶಿಪ್ ಮುಗಿಸಿ ಊರಿಗೆ ಬಂದ ಸಂದರ್ಭದಲ್ಲಿ ಆಕೆಯ ತಿಂಗಳ ಋತುಚಕ್ರದಲ್ಲಿ ಏರುಪೇರು ಉಂಟಾಗಿತ್ತು. ಇದರಿಂದ ಸಂಶಯಗೊಂಡ ಆಕೆ ತನ್ನ ಅನುಮಾನವನ್ನು ಜೆ. ಶ್ರೀಕೃಷ್ಣರಾವ್ ನೊಂದಿಗೆ ಹಂಚಿಕೊಂಡಳು. ಆತ ಮೆಡಿಕಲ್ ಶಾಪ್‌ನಲ್ಲಿ ಸಿಗುವಂತಹ ಪ್ರೆಗ್ನೆನ್ಸಿ ಕಿಟ್ ಖರೀದಿಸಿ ತಂದು ಕೊಟ್ಟಿದ್ದ. ಅದರಲ್ಲಿ ಪರೀಕ್ಷೆ ಮಾಡಿದಾಗ ಆಕೆ ಗರ್ಭಿಣಿಯಾಗಿರುವುದು ಖಚಿತವಾಯಿತು. ಈ ವಿಚಾರವನ್ನು ಆಕೆ ತನ್ನ ಪ್ರಿಯತಮನಿಗೆ ಹೇಳಿದಳು. ಅವರಿಬ್ಬರೂ ಮಂಗಳೂರಿಗೆ ಬಂದು ಫಳ್ನೀರ್‌ನಲ್ಲಿರುವ ಅಥೆನಾ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿದರು. ಆಗ ಆಕೆ ಆರು ತಿಂಗಳ ಗರ್ಭಿಣಿಯಾಗಿದ್ದಳು. ಈ ವಿಚಾರ ಸ್ಪಷ್ಟವಾಗುತ್ತಲೇ ಅವರಿಬ್ಬರೂ ಪುತ್ತೂರಿಗೆ ಹೋಗಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಂತಹ ಆಕೆಯ ತಾಯಿಗೆ ವಿಷಯ ತಿಳಿಸಿದರು. ಆ ಸಂದರ್ಭದಲ್ಲಿ ಜೆ. ಶ್ರೀಕೃಷ್ಣರಾವ್ ಆಕೆಯ ತಾಯಿಗೆ ಮದುವೆಯಾಗುವುದಾಗಿ ಭರವಸೆ ನೀಡಿದ್ದ. ಅದನ್ನು ನಂಬಿದ ಆಕೆ ಸುಮ್ಮನಾಗಿದ್ದಳು. ದಿನಕಳೆದಂತೆಯೇ ಜೆ. ಶ್ರೀಕೃಷ್ಣರಾವ್‌ನ ಸಂಪರ್ಕಗಳು ದೂರವಾಗತೊಡಗಿತ್ತು.



ಸಂತ್ರಸ್ತೆಯ ತಾಯಿ

ಇದರಿಂದ ಆತಂಕಗೊಂಡ ಆಕೆಯ ತಾಯಿ ಆತನನ್ನು ಸಂಪರ್ಕಿಸಿದಾಗ ಈ ವಿಚಾರವನ್ನು ತನ್ನ ಮನೆಯವರಿಗೆ ತಿಳಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿದ್ದ. ಇದರಿಂದ ಆತಂಕಗೊಂಡ ಆಕೆಯ ತಾಯಿ ಜೆ. ಶ್ರೀಕೃಷ್ಣರಾವ್‌ನ ತಂದೆ ಜಗನ್ನಿವಾಸರಾವ್ ಅವರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿ ದರು. ಅವರು ತಕ್ಷಣ ಅವರ ಮನೆಗೆ ಬಂದು ಮಾತುಕತೆ ನಡೆಸಿದರು. ಆಕೆಯ ಗರ್ಭದಲ್ಲಿ ಬೆಳೆಯುತ್ತಿರುವ ತನ್ನ ವಂಶದ ಕುಡಿಯನ್ನು ತೆಗೆಸುವಂತೆ ವಿನಂತಿಸಿಕೊಂಡರು. ಅವರ ಪತ್ನಿಯೂ ಅದಕ್ಕೆ ಒತ್ತಾಸೆ ನೀಡಿದರು. ಅದರಂತೆ ಆಕೆಯನ್ನು ಕರೆದುಕೊಂಡು ಮಂಗಳೂರಿನ ಫಳ್ನೀರ್‌ನಲ್ಲಿರುವ ಅಥೆನಾ ಆಸ್ಪತ್ರೆಗೆ ಬಂದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಆಕೆಯ ಗರ್ಭಕ್ಕೆ ಏಳೂವರೆ ತಿಂಗಳು ಕಳೆದಿತ್ತು. ಈ ಸಂದರ್ಭದಲ್ಲಿ ಬಲಾತ್ಕಾರವಾಗಿ ಗರ್ಭಪಾತ ನಡೆಸಿದರೆ ತಾಯಿ ಜೀವಕ್ಕೆ ಅಪಾಯ ಇದೆ ಮತ್ತು ಭ್ರೂಣ ಹತ್ಯೆ ಕ್ರಿಮಿನಲ್ ಅಪರಾಧ ಆಗಿರುವುದರಿಂದ ಆಸ್ಪತ್ರೆಯಲ್ಲಿ ಅಂತಹ ಕೃತ್ಯ ಮಾಡಲು ಸಾಧ್ಯವಿಲ್ಲ ಎಂಬಂತಹ ಸಲಹೆ ನೀಡಿದರು. ಅದರಂತೆ ಅವರು ವಾಪಾಸ್ಸು ಪುತ್ತೂರಿಗೆ ಹೋದರು ಮತ್ತು ಬೇರೆ ವೈದ್ಯರೊಂದಿಗೆ ಸಂಪರ್ಕಿಸುವ ಪ್ರಯತ್ನ ಮಾಡಿದರು. ಆಕೆಯ ತಾಯಿಯ ಮೇಲೆ ಅಬಾರ್ಷನ್ ಮಾಡಿಸುವಂತೆ ನಿರಂತರ ಒತ್ತಡ ಹೇರಿದರು. ವೈದ್ಯಕೀಯ ಖರ್ಚು ವೆಚ್ಚಗಳನ್ನು ಭರಿಸುವುದಾಗಿ ಭರವಸೆ ನೀಡಿ 10,000 ರೂ. ಫೋನ್ ಪೇ ಮೂಲಕ ಪಾವತಿಸಿದರು.

☞ 5

# ಗಂಡನ ಕೊಂದು ಬಾತ್‌ರೂಮಲ್ಲಿ ಬಿದ್ದು ಸತ್ತನೆಂದು ಕತೆ ಕಟ್ಟಿದ್ದ ಗರತಿ ಅರೆಸ್ಟ್



ಆರೋಪಿ ಶ್ರುತಿ

**ಬಾಡಿಗೆ ದುಡ್ಡನ್ನು ಮೋಜು ಮಸ್ತಿಗೆ ಹಾಕಿ, ದಿನಾಲೂ ಕುಡಿದುಕೊಂಡು ಬಂದು ಎಗರಾಡುತ್ತಿದ್ದ ಗಂಡನನ್ನು ಉಸಿರುಕಟ್ಟಿಸಿ ಕೊಂದು, ಬಾತ್‌ರೂಮಲ್ಲಿ ಹೃದಯಾಘಾತವಾಗಿ ಬಿದ್ದು ಸತ್ತಿನೆಂದು ಸುಳ್ಳಿನ ಕಥೆ ಕಟ್ಟಿದ್ದ ಮಹಿಳೆಯನ್ನು ಮರಣೋತ್ತರ ಪರೀಕ್ಷೆ ವರದಿಯ ಆಧಾರದ ಮೇಲೆ ಬೆಂಗಳೂರಿನ ಸುದ್ದಗುಂಟೆಪಾಳ್ಯ ಪೊಲೀಸರು ಬಂಧಿಸಿ ಜೈಲಿಗೆ ಮುದ್ದೆ ಮುರಿಯಲು ಬಿಟ್ಟಿದ್ದಾರೆ!**



ಕೊಲೆಯಾದ ಭಾಸ್ಕರ್

ಬ್ಲಡಿ ಭಾಸ್ಕರ್...

ಸುದ್ದುಗುಂಟೆಪಾಳ್ಯದ ಭವಾನಿ ನಗರದ ನಿವಾಸಿ ಭಾಸ್ಕರ್ (41) ಕೊಲೆಯಾದ ದುರ್ದೈವಿ. ಇವನ ಪತ್ನಿ ಶೃತಿಯೇ ಗಂಡನ ಕತೆ ಮುಗಿಸಿ ಡ್ರಾಮಾ ಆಡಿ ಸಿಕ್ಕಿಬಿದ್ದು ಜೈಲು ಪಾಲದ ಗರತಿ! ಕಳೆದ ವಾರ ಭಾಸ್ಕರ್ ಮೃತ ಪಟ್ಟಾಗ ಅವನ ಕುಟುಂಬದವರು ಅನುಮಾನ ವ್ಯಕ್ತಪಡಿಸಿ ಸೊಸೆಯನ್ನು ವಿಧ ವಿಧವಾಗಿ ಪ್ರಶ್ನಿಸಿದ್ದಾಗ ಶ್ರುತಿಯಿಂದ ಸಮರ್ಪಕ ಉತ್ತರ ಬಂದಿರಲಿಲ್ಲ, ಸ್ನಾನದ ಮನೆಯಲ್ಲಿ ಕುಸಿದು ಬಿದ್ದು ಭಾಸ್ಕರ್ ಮೃತಪಟ್ಟಿದ್ದಾರೆ, ಹಾರ್ಟ್ ಅಟ್ಯಾಕ್ ಆಗಿರಬೇಕು ಎಂದಿದ್ದಳು. ಹೀಗಾಗಿ, ಇದೇ ರೀತಿ ಸುದ್ದುಗುಂಟೆಪಾಳ್ಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.



**ಪೋಸ್ಟ್‌ಮಾರ್ಟಂ ರಿಪೋರ್ಟ್ ಬಂತಲ್ಲ!**

ಭಾಸ್ಕರ್ ಕುಟುಂಬದ ಕೆಲವರು ಅನುಮಾನ ಪಟ್ಟಿದ್ದರ ಮೇರೆಗೆ ಭಾಸ್ಕರ್ ಮೃತದೇಹದ ಪೋಸ್ಟ್‌ಮಾರ್ಟಂ ಮಾಡಿಸಲಾಯ್ತು. ಇದೀಗ ಬಂದ ಮರಣೋತ್ತರ ಪರೀಕ್ಷಾ ವರದಿಯಲ್ಲಿ, ಇದು ಹೃದಯಾಘಾತವಲ್ಲ, ಉಸಿರುಕಟ್ಟಿಸಿ ಕೊಲೆ... ಎಂಬ 'ಸತ್ಯ' ಬಯಲಾಗಿದೆ! ಭಾಸ್ಕರ್ ಮೇಲೆ ಹಲ್ಲೆ ನಡೆದು ಆಂತರಿಕ ರಕ್ತಸ್ರಾವದಿಂದ ಸಾವನ್ನಪ್ಪಿದ್ದಾನೆ ಎಂದು ವೈದ್ಯರು ಹೇಳಿದ್ದಾರೆ. ವರದಿ ಬಂದ ಬೆನ್ನಲ್ಲೇ ಅನುಮಾನದ ಮೇರೆಗೆ ಭಾಸ್ಕರ್ ಪತ್ನಿ ಶೃತಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಾನೇ ತನ್ನ ಗಂಡನ ಉಸಿರು ನಿಲ್ಲಿಸಿದ್ದಾಗಿ ತಪ್ಪೊಪ್ಪಿಕೊಂಡಿದ್ದಾಳೆ!



ಡಿಸಿಪಿ ಸಾರಾ ಫಾತಿಮಾ

**ಕುಡುಕ -ಸ್ತ್ರೀಲೋಲ!**

ಆಡುಗೋಡಿ ಕಡೆಯಲ್ಲಿ ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿದ್ದ ಭಾಸ್ಕರ್ ಈಗ್ಗೆ ಹನ್ನೆರಡು ವರ್ಷಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಶ್ರುತಿ ಜೊತೆ ವಿವಾಹವಾಗಿದ್ದ. ಇದು ಇವನಿಗೆ ಎರಡನೇ ಮದುವೆ. ಮೊದಲ ಪತ್ನಿ ಬದುಕಿದ್ದಾಳೊ ಅಥವಾ ಇವನನ್ನ ಬಿಟ್ಟು ಹೋಗಿದ್ದಾಳೋ ಗೊತ್ತಿಲ್ಲ. ಭಾಸ್ಕರ್ ಶ್ರುತಿ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.

ಭವಾನಿ ನಗರದಲ್ಲಿ ಸ್ವಂತ ವಠಾರ ವಿದ್ದು,ಒಂದಷ್ಟು ಬಾಡಿಗೆ ಕೂಡ ಬರುತ್ತಿತ್ತು. ಭಾಸ್ಕರ್ ಸಿಕ್ಕಾಪಟ್ಟೆ ಕುಡುಕನಾಗಿದ್ದ. ಜೊತೆಗೆ ಸ್ತ್ರೀಲೋಲನಾಗಿದ್ದು, ಹಲವರು ಮಹಿಳೆಯರ ಜತೆ ಸ್ನೇಹವಿತ್ತು. ಹೆಣ್ಣು ಹೆಂಡದೊಂದಿಗೆ ಮೋಜು ಮಸ್ತಿ ಮಾಡುವುದು ಆತನ ಖಯಾಲಿ ಆಗಿತ್ತು. ಇತ್ತ ಮನೆ ಕಡೆ ಆತನ ಲಕ್ಷ್ಯವಿರಲಿಲ್ಲ. ವಾರಕ್ಕೆರಡು ಮೂರು ದಿನಗಳು ಆತ ಮನೆ ಕಡೆಗೆ ಸುಳಿಯುತ್ತಿರಲಿಲ್ಲವಂತೆ. ತನ್ನ ಹೆಂಡತಿ, ಮಕ್ಕಳ ಬಗ್ಗೆ ಆತನಿಗೆ ಕಾಳಜಿ ಇರಲಿಲ್ಲವೆಂದು ಅಲ್ಲಿನ ಜನ ಹೇಳುತ್ತಾರೆ. ಹೀಗಾಗಿ, ಭಾಸ್ಕರ್ ಪತ್ನಿ ಶ್ರುತಿ ಗಂಡನ ಉಡಾಫೆ ವರ್ತನೆಗೆ ಬೇಸರಗೊಂಡಿದ್ದಳು ಎನ್ನಲಾಗಿದೆ.

**ಮನೆಗೆಲಸದವಳೊಂದಿಗೂ.. ಇತ್ತು ಮೋಜು ಮಸ್ತಿ**

ಭಾಸ್ಕರ್‌ಗೆ ಹೊರಗಡೆ ಹೆಂಗಸರ ಜೊತೆಗಿನ ಅಕ್ರಮ ಸಂಬಂಧಕ್ಕಿಂತ ಮನೆ ಕೆಲಸದ ಮಹಿಳೆ ಜೊತೆಗೂ ಜೋರಾಗಿತ್ತು, ಮೋಜು ಮಸ್ತಿ. ಇದೇ ವಿಚಾರವಾಗಿ ಗಂಡ ಹೆಂಡತಿಗೆ ಪ್ರತಿನಿತ್ಯ ವಾರ್ ನಡೆಯುತ್ತಿತ್ತು. ಮೊದಲೇ ಹೇಳಿದಂತೆ, ಭಾಸ್ಕರ್‌ಗೆ ಒಳ್ಳೆ ಆದಾಯವಿತ್ತು. ಉದ್ಯೋಗದಿಂದ ಬರುತ್ತಿದ್ದ ವೇತನ ವಲ್ಲದೆ ಮನೆಗಳ ಬಾಡಿಗೆಯಿಂದಲೇ ತಿಂಗಳಿಗೆ 1.15 ಲಕ್ಷ ಗಳಿಸುತ್ತಿದ್ದನಂತೆ. ಅದರಲ್ಲಿ ಹೆಚ್ಚಿನ ಹಣವನ್ನು ಮನೆ ಕೆಲಸದಾಳಿಗೇ ಖರ್ಚು ಮಾಡುತ್ತಿದ್ದ ಎಂದು ಶ್ರುತಿ ಆರೋಪಿಸಿದ್ದಾಳೆ. ಇದಲ್ಲದೆ ಕಳೆದ ಒಂದು ತಿಂಗಳಿನಿಂದ ಮನೆಗೆ ಬರುವುದನ್ನು ನಿಲ್ಲಿಸಿ ತನ್ನ ಸ್ನೇಹಿತರೊಂದಿಗೆ ವಾಸಿಸುತ್ತಿದ್ದ ಎನ್ನಲಾಗಿದೆ.

**ಹಿಟ್ಟಿನ ಕೋಲಿನಿಂದ ಥಾರಿಸಿದಳು**

ಕಳೆದ ಜೂನ್ 27ರಂದು, ಶೋಕಿಲಾಲ ಭಾಸ್ಕರ್ ಮದ್ಯದ ಅಮಲಿನಲ್ಲಿ ಮನೆಗೆ ಬಂದಾಗ, ಪತ್ನಿ ಶ್ರುತಿ ಎಂದಿನಂತೆ ಅವನೊಂದಿಗೆ ಜಗಳವಾಡಿದ್ದಾಳೆ. ಈ ಹಂತದಲ್ಲಿ ಮಾತಿನ ಚಕಮಕಿ ನಡೆದು ಪರಸ್ಪರ ಕೈ-ಕೈ ಮಿಲಾಯಿಸಿದ್ದಾರೆ. ಒಂದು ಹಂತದಲ್ಲಿ ಕೆರಳಿದ ಶೃತಿ, ಪತಿ ಭಾಸ್ಕರನ ಮುಖಕ್ಕೆ ಬಲವಾಗಿ ಗುದ್ದಿದ್ದಾಳೆ. ಆ ಏಟಿಗೆ ಮದ್ಯದ ಅಮಲಿನಲ್ಲಿ ತೂರಾಡುತ್ತಿದ್ದ ಭಾಸ್ಕರ್ ಕುಸಿದು ಬಿದ್ದಿದ್ದಾನೆ. ಬಳಿಕ ಅಡುಗೆ ಮನೆಗೆ ನುಗ್ಗಿರುವ ಶ್ರುತಿ ಹಿಟ್ಟಿನ ಕೋಲು ತಂದು ಗಂಡನಿಗೆ ಚನ್ನಾಗಿ ಬಾರಿಸಿದ್ದಾಳೆ. ಈ ಹೊಡೆತದಿಂದ ಭಾಸ್ಕರ್ ಸ್ಥಳದಲ್ಲಿಯೇ ಬಿದ್ದು ಒದ್ದಾಡಿ ಕೊನೆಯುಸಿರೆಳೆದಿದ್ದಾನೆ. ಆತ ಸತ್ತು ಹೋಗಿದ್ದಾನೆಂಬುದು ಖಚಿತ ವಾದ ಕೂಡಲೇ... ಐನಾತಿ ಶ್ರುತಿ ಮೃತದೇಹಕ್ಕೆ ಸ್ನಾನ ಮಾಡಿಸಿ, ಹಾಸಿಗೆ ಮೇಲೆ ಮಲಗಿಸಿದ್ದಾಳೆ! ನೆಂಟರಿಷ್ಟರೆಲ್ಲ ಮನೆಗೆ ಬಂದು ಬಾಯಿ ಬಾಯಿ ಬದುಕೊಂಡಾಗ, ಭಾಸ್ಕರ್ ಸ್ನಾನದ ಮನೆಯಲ್ಲಿ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ ಎಂದು ಸುಳ್ಳಿನ ಕತೆ ಹೆಣೆದಿದ್ದಾಳೆ.

ಆದರೆ, ಸೊಸೆ ಮೇಲೆ ಭಾಸ್ಕರ್ ಪೋಷಕರಿಗೆ ಶಂಕೆ ಬಂದಿದೆ! ಸದ್ದುಗುಂಟೆಪಾಳ್ಯ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ವಿವರಿಸಿ ದೂರು ದಾಖಲಿಸಿದ್ದರು. ಅವರು ನೀಡಿದ ದೂರಿನ ಮೇರೆಗೆ ಶಂಕಾಸ್ಪದ ಸಾವು ಪ್ರಕರಣ ದಾಖಲಾಯಿತು. ಈ ನಡುವೆ ಮರಣೋತ್ತರ ಪರೀಕ್ಷಾ ವರದಿಯಲ್ಲಿ ಕೋಲಿನಿಂದ ನಡೆದ ಹಲ್ಲೆಯಿಂದ ಭಾಸ್ಕರ್ ಮೃತಪಟ್ಟಿದ್ದಾನೆಂದು ವರದಿ ಬಂತು. ಈ ಸದರಿ ವರದಿ ಆಧರಿಸಿ ಆರೋಪಿ ಶ್ರುತಿಯನ್ನು ಬಂಧಿಸಿ ಪೊಲೀಸ್ ಭಾಷೆಯಲ್ಲಿ ವಿಚಾರಿಸಿದಾಗ ಸತ್ಯ ಬಯಲಾಯಿತು! ☯




## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,

ಬೆಂಗಳೂರು-560 079. ಮೊ : 9513892666



# ಕನ್ನಡ ನಿರ್ಮಾಪಕರಿಗೆ ಅನ್ಯಾಯ ಮಾಡ್ಬೇಡಿ! ಸ್ಟಾರ್ ನಟರಿಗೆ ಕನಕಪುರ ಶ್ರೀನಿವಾಸ್ ವಾರ್ನಿಂಗ್!!

ಸ್ಯಾಂಡಲ್‌ವುಡ್ ಸ್ಟಾರ್ ನಟರ ಬಗ್ಗೆ ಕನ್ನಡ ಚಿತ್ರರಂಗದಲ್ಲೇ ಕೆಲವರು ಅಸಮಾಧಾನಗೊಂಡಿದ್ದಾರೆ. ಆದರೆ ಯಾರು ಮಾತನಾಡುವ ಧೈರ್ಯ ಮಾಡುತ್ತಿಲ್ಲವಷ್ಟೇ! ಇದೀಗ 'ದಮ್' ನಿರ್ಮಾಪಕ ಕನಕಪುರ ಶ್ರೀನಿವಾಸ್ ಬಹಿರಂಗವಾಗಿ ತಮ್ಮ ಆಕ್ರೋಶವನ್ನ ಹೊರ ಹಾಕಿರುವುದು ಬ್ರೇಕಿಂಗ್ ನ್ಯೂಸ್!!

ಕನ್ನಡದಲ್ಲಿ ಹೆಚ್ಚುಕಮ್ಮಿ 50 ಸಿನಿಮಾ ನಿರ್ಮಿಸಿರೋ ಶ್ರೀನಿವಾಸ್ ಅವರು, ಸೋ ಕಾಲ್ಡ್ ಪ್ಯಾನ್ ಇಂಡಿಯಾ ಸ್ಟಾರ್‌ಗಳಾದ ಶಿವರಾಜ್‌ಕುಮಾರ್, ಸುದೀಪ್ ಹಾಗೂ ಶ್ರೀಮುರಳಿ, ಯಶ್ ಮುಂತಾದವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸ್ಟಾರ್ ನಟರೆಲ್ಲಾ ಈಗ ಪ್ಯಾನ್ ಇಂಡಿಯಾ ಗುಂಗಿನಲ್ಲಿದ್ದಾರೆ. ಏನ್ರೀ ಅದು ಪ್ಯಾನು... ಪ್ಯಾನ್ ಅಂದ್ರೇನು. ಇವೆಲ್ಲಾ ನೋಡಿಬಿಟ್ಟಿದ್ದೀವಿ ನಾವು... ಎಲ್ಲಾ ಬಿಗ್ ಬಜೆಟ್, ಪ್ಯಾನ್ ಇಂಡಿಯಾ ಅಂದ್ರೆ ಸಣ್ಣ ಸಿನಿಮಾಗಳನ್ನು ಮಾಡುವವರು ಯಾರು? ಯಾರೂ ಆ ಪ್ರಯತ್ನ ಮಾಡ್ತಿಲ್ಲ, ದೊಡ್ಡ ದೊಡ್ಡ ನಿರ್ಮಾಪಕರಿಗೆ ಕಾಲ್‌ಶೀಟ್ ಕೊಡುತ್ತಿದ್ದಾರೆ. ಕನ್ನಡ ಬಿಟ್ಟು ಪರಭಾಷೆಯ ನಿರ್ಮಾಪಕರು, ನಿರ್ದೇಶಕರಿಗೆ ಅವಕಾಶ ಕೊಡುತ್ತಿದ್ದಾರೆ. ನಾವು ಕನ್ನಡದ ನಿರ್ಮಾಪಕರು ಏನು ಮಾಡಬೇಕು? ಇಲ್ಲಿನ ಸಾಹಿತಿಗಳು ಬರಹಗಾರರು ಎಲ್ಲಿಗೆ ಹೋಗಬೇಕು?? ಎಂದು ನಿರ್ಮಾಪಕ ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದ್ದಾರೆ. ಶಿವರಾಜ್‌ಕುಮಾರ್ ಜೊತೆ ಯುವರಾಜ, ಶ್ರೀರಾಮ್, ಸಂತ, ಮೈಲಾರಿ, ಶಿವ, ಟಗರು (ಕೆ.ಪಿ. ಶ್ರೀಕಾಂತ್ ಪಾರ್ಟ್‌ನರ್‌ಶಿಪ್) ಮುಂತಾದ ಆರು ಸಿನಿಮಾ ಮಾಡಿದ್ದಾರೆ. ಈ ಪೈಕಿ ಒಂದು ಮಾತ್ರ ಫ್ಲಾಪ್. ಉಳಿದವೆಲ್ಲ ಸೂಪರ್ ಹಿಟ್.








ಒಂದರ್ಥದಲ್ಲಿ ಕನ್ನಡಕ್ಕೆ ಪೂರಿ ಜಗನ್ನಾಥ್‌ರನ್ನು ಕರೆತಂದಿದ್ದೆ ಕನಕಪುರ ಶ್ರೀನಿವಾಸ್! ತೆಲುಗಿನ 'ತಮ್ಮುಡು' ಚಿತ್ರವನ್ನು ಇಲ್ಲಿ ಯುವರಾಜ ಆಗಿ ರಿಮೇಕ್ ಮಾಡಲು ಬಂದ ಪೂರಿ ಮುಂದೆ ಪುನೀತ್ ರಾಜ್‌ಕುಮಾರ್ ಅವರಿಗಾಗಿ 'ಅಪ್ಪು' ಮಾಡಿದ್ದು ಗತ ವೈಭವ!! ಅದಿರಲಿ, ಕನಕಪುರ ಬಂಡೆ ಎಂದೇ ಕುಖ್ಯಾತಿವೆತ್ತ ಡಿಕೆಶಿ ಅವರ ಸಂಬಂಧಿಕರೇ ಆದ ಕನಕಪುರ ಶ್ರೀನಿವಾಸ್ ಅವರು, ಕಿಚ್ಚ ಹುಚ್ಚ ಸುದೀಪ್ ಏನೇನೂ ಇಲ್ಲದಾಗ 'ಧಮ್' ನಿರ್ಮಿಸಿದ್ದು ಕೂಡ ಜನ ಮಾನಸದಿಂದ ಮರೆಯಾಗಿಲ್ಲ, ಉಪ್ಪಿಗಾಗಿ ಓಂಕಾರ, ಟೋಪಿವಾಲಾ ಎಂಬೆರಡು ಸಿನಿಮಾ ಮಾಡಿದ್ದಾರೆ. ಧ್ರುವ ಸರ್ಜಾ ನಟನೆಯ ಬಹದ್ದೂರ್, ಭರ್ಜರಿ, ಡಾಲಿ ಧನಂಜಯ್ ನಟನೆಯ 'ಜೆಸ್ಸಿ', ನಿರ್ಮಾಣ ಕೂಡ ಅವರದ್ದೇ. ಜಗ್ಗೇಶ್ ಅಭಿನಯದ ವಿಶ್ವ ಪ್ರಸಿದ್ಧ ಚಿತ್ರ 'ಮಠ' ಕೂಡ ಶ್ರೀನಿವಾಸ್ ಅವರ ನಿರ್ಮಾಣದ್ದೆ! ಇನ್ನು, ಶ್ರೀಮುರಳಿ ಜೊತೆ ಕನ್ನಡ ಮರಾಠಿ ವಿವಾದಿತ 'ಕಂಠಿ' ಸಿನಿಮಾ ಮಾಡಿದ್ದೆ. ಆದರೆ ಈಗ ಇಬ್ಬರೂ ಫೋನ್ ತೆಗೆಯುತ್ತಿಲ್ಲ ಎಂದು ಆಕ್ರೋಶ ಹೊರ ಹಾಕಿದ್ದಾರೆ.









ನಿರ್ಮಾಪಕ ಕನಕಪುರ ಶ್ರೀನಿವಾಸ್ ಇತ್ತೀಚೆಗೆ 'ಕಾಟನ್‌ಪೇಟೆ ಗೇಟ್' ಎಂಬ ಸಿನಿಮಾ ಬಿಡುಗಡೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದು, ಈ ವೇಳೆ ಕನ್ನಡ ನಿರ್ಮಾಪಕರು, ನಿರ್ದೇಶಕರ ಬಗ್ಗೆ ಸೋ ಕಾಲ್ಡ್ ಸೂಪರ್ ಸ್ಟಾರ್ ನಟರುಗಳ ತಾತ್ಸಾರ ಮನೋಭಾವದ ಬಗ್ಗೆ ಮಾತನಾಡಿದ್ದಾರೆ. ಇದು ಹೀಗೆ ಮುಂದುವರೆದರೆ ನಾವು ದಂಗೆ ಏಳಬೇಕಾಗುತ್ತದೆ, ನಿಮ್ಮ ಮನೆಗಳ ಮುಂದೆ ಬಂದು ಧರಣಿ ಮಾಡುತ್ತೇವೆ ಎಂದು ಕನ್ನಡ ನಿರ್ಮಾಪಕರ ಪರವಾಗಿ ಸಂಕಟವನ್ನು ಹೊರಹಾಕಿದ್ದಾರೆ!

☞ 5

# ಕನ್ನಡ ಚಿತ್ರರಂಗವನ್ನ ರಿಪೇರಿ ಮಾಡ್ತೀವಿ... ಕರವೇ ನಾರಾಯಣಗೌಡ ಎಚ್ಚರಿಕೆ!

ಕೆಲ ತಿಂಗಳ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕನ್ನಡ ಚಿತ್ರರಂಗದ ನಟ್ಟು ಬೋಲ್ಟು ಟೈಟ್ ಮಾಡೋದು ಗೊತ್ತಿದೆ ಎಂದು ಹೇಳಿದ್ದು ದೊಡ್ಡ ವಿವಾದ ಸೃಷ್ಟಿಸಿತ್ತು! ಈ ಬಗ್ಗೆ ಸುದೀಪ್ ಖಾರವಾಗಿ ಉತ್ತರಿಸಿದ್ದರು ಕೂಡ. ಎಲ್ಲರ ನಟ್ಟು ಬೋಲ್ಟ್ ಟೈಟೇ ಇದೆ ಸ್ವಾಮಿ..... ಎಂದು ಕಿಚ್ಚ ಡಿಕೆ ಸಾಹೇಬರಿಗೆ ತಿರುಗೇಟು ನೀಡಿದ್ದರು! ಮೊನ್ನೆಯಷ್ಟೇ ಹಿರಿಯ ನಿರ್ಮಾಪಕ ಕನಕಪುರ ಶ್ರೀನಿವಾಸ್ ಸ್ಟಾರ್ ನಟರ ಧೋರಣೆ ಬಗ್ಗೆ ಕ್ಯಾಕರಿಸಿದ್ದಾರೆ.

ಇದೀಗ ಕನ್ನಡ ಚಿತ್ರರಂಗದ ಬಗ್ಗೆ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡರೂ ಶಾಕಿಂಗ್ ಹೇಳಿಕೆ ನೀಡಿದ್ದಾರೆ! ಕನ್ನಡ ಚಿತ್ರರಂಗವನ್ನು ರಿಪೇರಿ ಮಾಡ್ತೀನಿ ಎಂದು ಬಹಿರಂಗವಾಗಿಯೇ ಎಚ್ಚರಿಕೆ ನೀಡಿದ್ದಾರೆ, ನಾರಾಯಣ ಗೌಡ!! ಇತ್ತೀಚಿಗೆ ಅವರು ರಾಜನಿವಾಸ ಸಿನಿಮಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಕನ್ನಡ ಚಿತ್ರರಂಗದ ಕರಾಳ ಸತ್ಯಗಳನ್ನು ಬಿಚ್ಚಿಟ್ಟಿದ್ದಾರೆ. 'ಕನ್ನಡ ಚಿತ್ರರಂಗ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಅನ್ನೋದು ನನಗೆ ಈಗಲೂ ಅರ್ಥವಾಗಿಲ್ಲ, ಅನೇಕ ನಿರ್ದೇಶಕರು, ನಿರ್ಮಾಪಕರು, ಕಲಾವಿದರು ಬಂದು ಕರವೇ ಕಚೇರಿಯಲ್ಲಿ ನೋವು ಹೇಳಿಕೊಳ್ಳುತ್ತಾರೆ. ನನಗೆ ಕನ್ನಡ ಚಿತ್ರರಂಗದವರೊಂದಿಗೆ ಅಷ್ಟಾಗಿ ನಂಟಿಲ್ಲ, ಏಕೆಂದರೆ ಅವರೆಲ್ಲ ಕನ್ನಡದ ಪರವಾಗಿ ಇಲ್ಲ, ಹಾಗಾಗಿ ನಂಟು ಇಲ್ಲ, ತೆರೆಯ ಮೇಲೆ ಕನ್ನಡದ ಬಗ್ಗೆ ಉದ್ದುದ್ದ ಭಾಷಣ, ಡೈಲಾಗ್ ಹೊಡೆಯಬಹುದಷ್ಟೇ. ಕನ್ನಡದ ಬಗ್ಗೆ ಹಾಡುಗಳನ್ನ ಹಾಡಬಹುದಷ್ಟೇ' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

'ಕನ್ನಡ, ಕರ್ನಾಟಕ, ಕನ್ನಡಿಗ ಅಂತ ಬಂದಾಗ ಅವರು ಎಲ್ಲಿ ನಿಲ್ಲಬೇಕು? ಯಾರನ್ನು ಬೆಂಬಲಿಸಬೇಕು? ಎನ್ನುವ ಗೊಂದಲದಲ್ಲಿ ಕಲಾವಿದರು ಇಂದಿಗೂ ಇದ್ದಾರೆ. ಕನ್ನಡಕ್ಕೆ ಚಿತ್ರಮಂದಿರ ಸಿಗುತ್ತಿಲ್ಲ ಅಂತಾರಲ್ಲ? ನಾವು ಈ ಹಿಂದೆ ಯಾವುದೇ ಸಿನಿಮಾ ಕರ್ನಾಟಕಕ್ಕೆ ಬರಬೇಕಾದ್ರೆ, ಆ ರಾಜ್ಯದಲ್ಲಿ ಬಿಡುಗಡೆಯಾಗಿ ಏಳು ವಾರದ ನಂತರ ಇಲ್ಲಿ ರಿಲೀಸ್ ಆಗಬೇಕು ಎಂದು ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ದೊಡ್ಡ ಹೋರಾಟ ಮಾಡಿದೆವು. ಆಗ ಕಲಾವಿದರು ಕೆಜಿ ರೋಡ್‌ನಲ್ಲಿ ಸ್ವಲ್ಪ ಹೊತ್ತು ಇದ್ದು, ಮನೆ ಸೇರಿಕೊಂಡ್ರು. ಕರವೇ ಕಾರ್ಯಕರ್ತರು ಕೇಸ್ ಹಾಕಿಸಿಕೊಂಡರು. ಆಗ ಯಾವ ಕಲಾವಿದನೂ ಜೈಲಿನಲ್ಲಿದ್ದವರಿಗೆ ಜಾಮೀನು ಕೊಡಿಸಲು ಬರಲಿಲ್ಲ' ಎಂದು ಆಕ್ರೋಶ ಹೊರಹಾಕಿದ್ದಾರೆ.



'ಇವತ್ತು ಯಾರೆಲ್ಲ ದೊಡ್ಡ ಹೀರೋಗಳು ಅಂತಿದ್ದಾರಲ್ಲ? ಅವರೂ ಕೂಡ ಒಂದು ಕಾಲದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಬಳಿ ಬಂದು ಥಿಯೇಟರ್‌ಗಳು ಸಿಗಲಿಲ್ಲ ಎಂದು ಬೇಡಿಕೊಂಡವರಿದ್ದಾರೆ. ಈಗ ಅವರೆಲ್ಲ ಭಾರಿ ದೊಡ್ಡ ಹೀರೋಗಳು. ಅವರ ಹೆಸರು ಕೂಡ ಹೇಳಬಹುದು. ಯಾಕಂದ್ರೆ ನಮಗೆ ಆ ಧೈರ್ಯವೂ ಇದೆ. ಅವರಿಗೆ ಸಹಾಯ ಮಾಡಿದ ವಿಚಾರಗಳೂ ನಮ್ಮಲ್ಲಿವೆ. ಅವರೆಲ್ಲ ಇವತ್ತು ಬೆಳೆದಿದ್ದಾರೆ, ಬೆಳೆಯಲಿ. ಆದರೆ ನಿರ್ಮಾಪಕರು, ನಿರ್ದೇಶಕರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕು ಎನ್ನುವ ಮನಸ್ಥಿತಿ ಅವರಿಗೆ ಇರಬೇಕಿತ್ತು' ಎಂದು ಪರೋಕ್ಷವಾಗಿ ಬೇರೆ ಪರಭಾಷಾ ನಿರ್ದೇಶಕರು, ನಿರ್ಮಾಪಕರ ಸಿನಿಮಾಗಳಲ್ಲಿ ನಟಿಸುತ್ತಿರುವ ಸ್ಟಾರ್ ಹೀರೋಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಈಗ ಅವರೆಲ್ಲ ತಮ್ಮ ಸುತ್ತ ಒಂದು ಕೋಟೆ ಕಟ್ಟಿಕೊಂಡಿದ್ದಾರೆ. ಹಾಗಾಗಿ ಅದನ್ನು ಒಡೆದು, ಕನ್ನಡ ಚಿತ್ರರಂಗ ಯಾವತ್ತೂ ನಿಂತ ನೀರಾಗಬಾರದು. ಕೆಲವು ನಿರ್ದೇಶಕರ ಒಂದು ಸಿನಿಮಾ ಗೆದ್ದುಬಿಟ್ಟರೆ ಕೈಗೇ ಸಿಗೋದಿಲ್ಲ, ಒಂದು ಐದು ಮಂದಿ ನಟರು, ಒಂದಷ್ಟು ಮಂದಿ ನಿರ್ಮಾಪಕರು, ನಿರ್ದೇಶಕರು ಸೇರಿ ಅದೇ ಚಿತ್ರರಂಗ ಎಂದುಕೊಂಡಿದ್ದಾರೆ' ಎಂದು ಟಾಂಗ್ ನೀಡಿದ್ದಾರೆ.

'ಕನ್ನಡ ಸರಿಯಾಗಿ ಗೊತ್ತಿಲ್ಲದವರು ಕರ್ನಾಟಕ ಫಿಲ್ಮ್ ಚೇಂಬರ್ ಅಧ್ಯಕ್ಷರಾಗಿದ್ದಾರೆ. ಪ್ರಭಾಕರ್ ಮಗ ಥಿಯೇಟರ್ ಸಿಗಲಿಲ್ಲ ಅಂತಾ ಗೋಳಾಡ್ತಿದ್ದ. ಒಂದು ಕನ್ನಡ ಸಿನಿಮಾ ತೆಗೆದು ಮತ್ತೊಂದು ಕನ್ನಡ ಸಿನಿಮಾ ಹಾಕೋದು ನಡೀತಿದೆ. ಹಾಗಾಗಿ ಕನ್ನಡ ಚಿತ್ರರಂಗದಲ್ಲಿರುವ ದೊಡ್ಡ ಕೊಳಕನ್ನು ತೊಳೆದು ರಿಪೇರಿ ಮಾಡಬೇಕಾಗಿದೆ. ನಾನು ಇಲ್ಲಿವರೆಗೆ ಚಿತ್ರರಂಗದ ವಿಚಾರಕ್ಕೆ ಹೋಗಬಾರದು ಎಂದು ದೂರವಿದ್ದೆ. ಆದರೆ ಇನ್ನು ಸುಮ್ಮನೆ ಇರಬಾರದು ಎಂದು ತೀರ್ಮಾನ ಮಾಡಿದ್ದೀನಿ. ಹಾಗಾಗಿ ಕನ್ನಡ ಚಿತ್ರರಂಗವನ್ನು ರಿಪೇರಿ ಮಾಡುತ್ತೇನೆ' ಎಂದು ಎಚ್ಚರಿಕೆ ನೀಡಿದ್ದಾರೆ!

4 ☞




ಸ್ಟಾರ್ ನಟರು ಸಿನಿಮಾಗಳಲ್ಲಿ ಮಾತ್ರ ನಟಿಸಬೇಕು, ಟಿವಿ ಕಾರ್ಯ ಕ್ರಮಗಳಲ್ಲಿ ಕಾಣಿಸಿಕೊಂಡರೆ ಹೇಗೆ? ಎಲ್ಲಾರೂ ಒಂದೊಂದು ಶೋ ಗಳಿಗೆ ಜಡ್ಜ್ ಆಗಿಬಿಟ್ಟಿದ್ದಾರೆ! ಇವರು ದಿನ ಬೆಳಗಾದರೆ ಟಿವಿಯಲ್ಲಿ ಕಾಣಿಸಿಕೊಂಡರೆ ಜನ ಬಂದು ನಿಮ್ಮ ಸಿನಿಮಾವನ್ನ ತೆರೆಮೇಲೆ ನೋಡಲ್ಲ... ಎಂದು ಅವರು ಹೇಳಿದ್ದಾರೆ. ಸ್ಯಾಂಡಲ್‌ವುಡ್‌ನ ದೊಡ್ಡ ನಿರ್ಮಾಪಕರಲ್ಲಿ ಒಬ್ಬರಾದ ಕನಕಪುರ ಶ್ರೀನಿವಾಸ್ ಇತ್ತೀಚೆಗೆ ಯಾವುದೇ ಸಿನಿಮಾ ಕೈಗೆತ್ತಿಕೊಂಡಿಲ್ಲ. ಉಪೇಂದ್ರ ಹಾಗೂ ರವಿಚಂದ್ರನ್ ಅಭಿನಯದ ರವಿಚಂದ್ರ (ಈಗ ತ್ರಿಶೂಲಂ) ಚಿತ್ರವನ್ನು ನಿರ್ಮಾಣ ಮಾಡಿದ್ದು ಕಾರಣಾಂತರಗಳಿಂದ ಆ ಸಿನಿಮಾ ಇನ್ನೂ ಬಿಡುಗಡೆ ಆಗಿಲ್ಲ. ಶ್ರೀನಿವಾಸ್ ಅವರ ಮಾತುಗಳು ವೈರಲ್ ಆದ ಬಳಿಕ ಸುದೀಪ್ ಬೇರೆ ರೀತಿಯಲ್ಲಿ ಪ್ರತಿಕ್ರಿಯಿಸಿರುವುದನ್ನು ಗಮನಿಸಬಹುದು.

ನನ್ನ ತುತ್ತು ನನ್ನ ಗತ್ತು ಎಂದಿದ್ದಾರೆ ಕಿಚ್ಚ! ಹಾಗಾದರೆ, ಸುದೀಪ್ ಕನ್ನಡ ನಿರ್ಮಾಪಕರಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾರಾ? ಸಿನಿಮಾ ಮಾಡೋಣ ಅಂದ್ರೆ.



ಸುದೀಪ್ ಅವ್ರು ಕೈಗೆ ಸಿಗಲ್ಲ.. 'ಥಮ್' ಎಂಬ ಸಿನಿಮಾವನ್ನ ಅವರೊಟ್ಟಿಗೆ ಮಾಡಿದ್ದೆ. ಶ್ರೀಮುರಳಿ ನಟನೆಯ 'ಕಂಠಿ' ಚಿತ್ರ ನಿರ್ಮಿಸಿದ್ದೆ. ಆತನ ಫೋನ್ ನಂಬರ್ ಕೂಡ ಸಿಗಲ್ಲ! ನಾನು 10 ಹೊಸ ನಟರನ್ನು ಚಿತ್ರರಂಗದಲ್ಲಿ ಹುಟ್ಟು ಹಾಕಬಲ್ಲೆ.. ಆಮೇಲೆ ಕನಕಪುರ ಶ್ರೀನಿವಾಸ್ ಯಾರು ಅಂತ ತೋರಿಸ್ತೀನಿ... ಯಾರು ಇದನ್ನು ಮರೆಯಬೇಡಿ. ನೀವು ಆಡಿದ್ದೆ ಆಟ ಅಂದುಕೊಂಡಿದ್ದೀರಾ? ನಾವು ಇನ್ನು ಬದುಕಿದ್ದೇವೆ ಕಣ್ರೀ.... ಎಂದು ಸ್ಟಾರ್ ನಟರ ವಿರುದ್ಧ ಗುಡುಗಿದ್ದಾರೆ. ಈ ವಿಚಾರದಲ್ಲಿ ತುಂಬಾ ಗದ್ಗದಿತರದಂತೆ ಕಂಡು ಬಂದ ಶ್ರೀನಿವಾಸ್ ಅವರು, ಕಡೆಯದಾಗಿ....

ಕನ್ನಡದ ನಿರ್ಮಾಪಕರಿಗೆ ಸಹಾಯ ಮಾಡ್ರಿ, ಮೂವತ್ತು ವರ್ಷಗಳಿಂದ ಇಲ್ಲಿದ್ದೀವಿ. ನಿಮ್ಮ ದುಡ್ಡು ಏನಿದೆಯೋ ಅದನ್ನು ತಗೊಂಡು ಸಿನಿಮಾ ಮಾಡಿ. ಆಂಧ್ರ, ತಮಿಳುನಾಡಿನವರಿಗೆ ಡೇಟ್ಸ್ ಕೊಡ್ತೀರಾ, ಕನ್ನಡ ನಿರ್ಮಾಪಕರು ಅನ್ನ ತಿನ್ನುವುದು ಬೇಡವೇ? ನೀವು ಬುದ್ಧಿ ಕಲಿತರೆ ಸರಿ! ಇಲ್ಲದಿದ್ದರೆ ತಕ್ಕ ಪಾಠ ಕಲಿಸುತ್ತೇವೆ.... ಕೆಲ ಬರಹಗಾರರು, ನಿರ್ದೇಶಕರು ಕೆಲಸವಿಲ್ಲದೇ ಊಟಕ್ಕಾಗಿ ದೇವಸ್ಥಾನಗಳಿಗೆ ಹೋಗುವಂತಾಗಿದೆ. ಇದು ಅನ್ಯಾಯ 'ಥಮ್' ಸುದೀಪ್ ಅವರಿಗೆ ಲೈಫ್ ಕೊಟ್ಟ ಚಿತ್ರ. ಅದನ್ನೆಲ್ಲಾ ಮರೆತರೆ ಹೆಂಗೆ? ನಾನು ಹೀರೋಗಳಿಗೆ ಎಚ್ಚರಿಕೆ ಕೊಡ್ತಿದ್ದೀನಿ. ಎಚ್ಚೆತ್ತುಕೊಂಡು ಕನ್ನಡ ನಿರ್ಮಾಪಕರು, ನಿರ್ದೇಶಕರಿಗೆ ಕೆಲಸ ಕೊಡಿ... ಎಂದು ನುಡಿದಿದ್ದಾರೆ. ಅವರ ಮಾತುಗಳಲ್ಲಿ ಆಕ್ರೋಶ ದ ಜೊತೆಗೆ ಮನವಿ ಕೂಡ ಇತ್ತು ಎಂಬುದನ್ನು ಯಾರಾದರೂ ಗಮನಿಸಬಹುದು....

ಅಂದಹಾಗೆ, ದೊಡ್ಮನೆ ಮಗ ಶಿವರಾಜ್‌ಕುಮಾರ್, ಸಿನಿಮಾವೊಂದಕ್ಕಾಗಿ ಶ್ರೀನಿವಾಸ್ ಅವರಿಂದ 20 ಲಕ್ಷ ರೂ ಅಡ್ವಾನ್ಸ್ ತೆಗೆದುಕೊಂಡು ಸಿನಿಮಾ ಮಾಡದೇ, ಅಡ್ವಾನ್ಸ್ ಹಣವನ್ನೂ ವಾಪಸ್ ಕೊಡದೆ ಮೋಸ ಮಾಡಿದ್ದಾರಂತೆ! ಕೇಳಿದರೆ ಇಂದು... ನಾಳೆ... ನಾಳಿದ್ದು... ಅವರಿಲ್ಲ... ಬ್ಯುಸಿ... ಇತ್ಯಾದಿ ಉತ್ತರಗಳು ಸಿಗುತ್ತಿವೆಯಂತೆ!! ಅಣ್ಣಾವ್ರು ನಿರ್ಮಾಪಕರನ್ನು ಅನ್ನದಾತರು ಎಂದು ಕರೆದು ಕೈ ಮುಗಿಯುತ್ತಿದ್ದರು ಕಣ್ರೀ. ಅವರ ಮಗನೇ ಹೀಗೆ ಮಾಡಿದರೆ...??!

ಅಂದಹಾಗೆ, ಕನಕಪುರ ಶ್ರೀನಿವಾಸ್ ಅವರು ಪುನೀತ್ ರಾಜ್ ಕುಮಾರ್ ಜೊತೆ 'ಮಯೂರ' ಸಿನಿಮಾ ಘೋಷಣೆ ಮಾಡಿದ್ರು. ಕರಿಯ ಪ್ರೇಮ್ಸ್ ಇದರ ನಿರ್ದೇಶನದ ಹೊಣೆ ಹೊತ್ತಿದ್ರು. ನಂದ ಕಿಶೋರ್ ಜೊತೆ ಇನ್ನೊಂದು ಸಿನಿಮಾ ಕೂಡ ಘೋಷಣೆಯಾಗಿತ್ತು. ಆದರೆ, ದುರದೃಷ್ಟವಶಾತ್ ಅಪ್ಪು ಹೋಗ್ಬಿಟ್ರು. ಅವರೊಂದಿಗೆ ಶ್ರೀನಿವಾಸ್ ಮಾತ್ರವಲ್ಲ, ಕನ್ನಡ ಚಲನಚಿತ್ರಗಳನ್ನೇ ನಂಬಿಕೊಂಡಿದ್ದ ಅನೇಕ ನಿರ್ಮಾಪಕರು ಅನಾಥರಾದರು! ಇನ್ನೂ ಸ್ಪಷ್ಟವಾಗಿ ಹೇಳಬೇಕು ಅಂದ್ರೆ, ಅಪ್ಪು ಹೋದಾಗಲೇ ಕನ್ನಡ ಚಲನಚಿತ್ರರಂಗ ನೆಲ ಕಚ್ಚಿಕೊಂಡಿತು...!!!




### ಈಗ ಇವರಾಡಿದ್ದೇ ಆಟ...

ಕನ್ನಡ ಚಿತ್ರರಂಗದಲ್ಲಿ ಫ್ಯಾಮಿಲಿ ಒಟ್ಟಿಗೆ ಕುಳಿತು ನೋಡುವಂತಹ ಸಿನಿಮಾ ಕೊಡುತ್ತಿದ್ದುದೇ ಅಪ್ಪು. ಅವರು ಹೋದ ಮೇಲೆ ತಕ್ಕಮಟ್ಟಿಗೆ ರಕ್ಷಿತ್ ಶೆಟ್ಟಿ ಒಂದೆರಡು ಒಳ್ಳೆಯ ಸಿನಿಮಾ ಕೊಟ್ಟರು. ಅವರನ್ನು ಬಿಟ್ಟರೆ ಕಾಂತಾರ ರಿಷಬ್ ಶೆಟ್ಟಿ ವರ್ಷಕ್ಕೊಂದು ಸಿನಿಮಾ ಕೊಡುತ್ತಾರೆ. ಇನ್ನು ಶಿವಣ್ಣನ ಕತೆ. ಟಗರು, ಘೋಸ್ಟ್, ಕರಟಕದಮನಕ ಆದ ಮೇಲೆ ಅವರ ಸಿನಿಮಾಗಳೇ ಇಲ್ಲ. ಸುದೀಪ್ ಮ್ಯಾಕ್ಸ್ ಅಷ್ಟು ಸದ್ದು ಮಾಡಲಿಲ್ಲ. ಧ್ರುವ ಸರ್ಜಾ ಪ್ರೇಮ್ ಸಹವಾಸ ಮಾಡಿ ಅವನೂ ಪ್ಯಾನ್ ಇಂಡಿಯಾಗೆ ಜೋತು ಬಿದ್ದಿದ್ದಾನೆ. ಯಶ್ ವಿಚಾರ ನಿಮಗೇ ಗೊತ್ತಲ್ಲ. ಆತ ಹಾಲಿವುಡ್‌ಗೆ ಲಗ್ಗೆ ಇಟ್ಟಿದ್ದಾನೆ. ಈಗ ಇವರುಗಳು ಆಡಿದ್ದೇ ಆಟ ಎನ್ನುವಂತಾಗಿದೆ! ☯

## ಬಿಜೆಪಿ ಮುಖಂಡನ ಮಗ ಮಗು ಕೊಟ್ಟು ಕೈಕೊಟ್ಟ!

2 ☞

ಇದಾದ ಬಳಿಕ ಸಂತ್ರಸ್ತೆಯ ತಾಯಿ ಮತ್ತೆ ಜೆ. ಶ್ರೀಕೃಷ್ಣರಾವ್‌ನನ್ನು ಸಂಪರ್ಕ ಮಾಡಿದಾಗ ಆತ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ ಒಡ್ಡಿದ. ಆತನ ತಂದೆಯನ್ನು ಸಂಪರ್ಕಿಸಿದರೆ ಮಗ ಮನೆಯಲ್ಲಿ ಇಲ್ಲ ಎಂಬ ಉತ್ತರ ಬಂತು. ಇದರಿಂದ ಹೆದರಿದ ಸಂತ್ರಸ್ತೆಯ ತಾಯಿ ನೇರವಾಗಿ ಪುತ್ತೂರು ಮಹಿಳಾ ಠಾಣೆಗೆ ಹೋಗಿ ದೂರು ನೀಡಿದರು. ಆ ಸಂದರ್ಭದಲ್ಲಿ ಪೊಲೀಸರು ದೂರವಾಣಿ ಮೂಲಕ ಜಗನ್ನಿವಾಸರಾವ್ ಅವರನ್ನು ಸಂಪರ್ಕಿಸಿ ಠಾಣೆಗೆ ಮಗನೊಂದಿಗೆ ಬರುವಂತೆ ಸೂಚನೆ ನೀಡಿದರು. ಆದರೆ ಜಗನ್ನಿವಾಸರಾವ್ ಅವರು ಒಬ್ಬರೇ ಠಾಣೆಗೆ



ಬಂದು ಮಾತುಕತೆ ನಡೆಸಿದರು. ಸ್ವಲ್ಪ ಸಮಯದ ನಂತರ ಜೆ. ಶ್ರೀಕೃಷ್ಣರಾವ್ ಕೂಡಾ ಠಾಣೆಗೆ ಆಗಮಿಸಿದ. ಈ ಸಂದರ್ಭದಲ್ಲಿ ಸಂತ್ರಸ್ತೆಯ ತಾಯಿ ಸ್ಥಳೀಯ ಶಾಸಕ ಅಶೋಕ್ ಕುಮಾರ್ ರೈ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದರು. ಅವರು ಜಗನ್ನಿವಾಸರಾವ್‌ರೊಂದಿಗೂ ಮಾತನಾಡಿ ಪರಸ್ಪರ ಮಾತುಕತೆಯ ಮೂಲಕ ವಿವಾದವನ್ನು ಪರಿಹರಿಸಿಕೊಳ್ಳುವಂತೆ ವಿನಂತಿಸಿದರು. ಅದಕ್ಕೆ ಅವರು ಒಪ್ಪಿದರು. ಜೆ. ಶ್ರೀಕೃಷ್ಣರಾವ್‌ಗೆ 21 ವರ್ಷ ಪೂರ್ತಿಯಾಗಲು ಕೆಲವೇ ದಿನಗಳು ಇದೆ. ಜೂನ್ 23ಕ್ಕೆ ಆತ ಪ್ರಾಯ ಪ್ರಬುದ್ಧನಾಗುತ್ತಾನೆ. 24ಕ್ಕೆ ಮನೆಯಲ್ಲಿ ಹಿರಿಯರ ಕಾರ್ಯ ಇದೆ. 25ಕ್ಕೆ ಪರಸ್ಪರ ಮಾತುಕತೆ ಮಾಡುವ ಎನ್ನುವ ಭರವಸೆ ಜಗನ್ನಿವಾಸರಾವ್ ಅವರಿಂದ ಬಂತು. ಇದೇ ರೀತಿಯಾಗಿ ಮಹಿಳಾ ಠಾಣಾ ಪೊಲೀಸರು ಜಗನ್ನೀವಾಸರಾವ್ ಅವರಿಂದ ಮುಚ್ಚಳಿಕೆ ಪತ್ರ ಬರೆಯಿಸಿಕೊಂಡರು.

ತದನಂತರದ ಬೆಳವಣಿಗೆಯಲ್ಲಿ ಜಗನ್ನೀವಾಸರಾವ್ ಅವರು ತನ್ನ ವರಸೆಯನ್ನು ಬದಲಿಸಿದರು. ಮಗ ಮದುವೆಯಾಗಲು ಒಪ್ಪುವುದಿಲ್ಲ, ತರುಣಿ ಗರ್ಭವತಿಯಾಗಲು ತಾನೊಬ್ಬನೇ ಕಾರಣನಲ್ಲ, ಬೇರೆ ನಾಲ್ಕು ಮಂದಿಯೂ ಆಕೆಯೊಂದಿಗೆ ಸಂಪರ್ಕದಲ್ಲಿದ್ದರು ಎಂಬ ವಿಚಾರವನ್ನು ಹರಿಯಬಿಟ್ಟರು. ಇದರಿಂದ ಕಂಗೆಟ್ಟ ಸಂತ್ರಸ್ತೆಯ ತಾಯಿ ಪುತ್ತೂರು ಮಹಿಳಾ ಠಾಣೆಗೆ ಹೋಗಿ ಮತ್ತೇ ದೂರು ನೀಡಿದರು. ಪೊಲೀಸರು ವಿವಾದ ವಿಪರೀತಕ್ಕೆ ಹೋಗುವುದು ಬೇಡ ಎಂದು ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ಅವರ ಸೂಚನೆಯ ಮೇರೆಗೆ ಜೆ. ಶ್ರೀಕೃಷ್ಣರಾವ್ ವಿರುದ್ಧ ಅತ್ಯಾಚಾರ, ನಂಬಿಕೆದ್ರೋಹ, ವಂಚನೆ ಆರೋಪದಡಿ ಕೇಸು ದಾಖಲಿಸಿಕೊಂಡು ಆತನ ಪತ್ತೆಗೆ ಪ್ರಯತ್ನಿಸಿದಾಗ ಆತ ನಾಪತ್ತೆಯಾಗಿದ್ದ. ಈ ವಿಚಾರ ಬಹಿರಂಗವಾಗುತ್ತಿದ್ದಂತೆಯೇ ಪುತ್ತೂರಿನಾದ್ಯಂತ ಒಂದು ರೀತಿಯಲ್ಲಿ ಆಕ್ರೋಶಗಳು ಹೊರ ಹೊಮ್ಮತೊಡಗಿದವು. ಬಿಜೆಪಿ ನಾಯಕರ ಮಗನೊಬ್ಬ ಹಿಂದುಳಿದ ಸಮುದಾಯದ ಹೆಣ್ಮಗಳೊಬ್ಬಳಿಗೆ ಅನ್ಯಾಯ ಮಾಡಿದ್ದಾನೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಎಸ್‌ಡಿಪಿಐ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಇದರಲ್ಲಿ ಸ್ವತಃ ಸಂತ್ರಸ್ತೆಯ ತಾಯಿ ಭಾಗವಹಿಸಿದ್ದರು. ಅಷ್ಟರಲ್ಲಿ ಎಚ್ಚೆತ್ತುಕೊಂಡ ಹಿಂದುಪರ ಸಂಘಟನೆಗಳ ಪ್ರಮುಖರು ಸಂತ್ರಸ್ತೆಯ ಪರವಾಗಿ ನಿಂತು ಬೆಂಬಲ ವ್ಯಕ್ತಪಡಿಸಿದರು. ಸಂತ್ರಸ್ತೆಯ ಸಮುದಾಯದ ನಾಯಕರು ಪುತ್ತೂರಿಗೆ ಬಂದು ಪತ್ರಿಕಾಗೋಷ್ಠಿಯನ್ನು ನಡೆಸಿ ಹೋರಾಟದ ಕಹಳೆ ಮೊಳಗಿಸಿದರು. ಇದರಿಂದ ಪೊಲೀಸರ ಮೇಲೆ ಒತ್ತಡ ಹೆಚ್ಚಾಯಿತು. ಸ್ಥಳೀಯ ಶಾಸಕರು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಪೊಲೀಸರ ಒತ್ತಡಗಳು ಜಾಸ್ತಿಯಾದಂತೆ ಜಗನ್ನೀವಾಸರಾವ್ ಅವರಿಗೆ ಆರೋಗ್ಯ ಸಂಬಂಧಿ ಸಮಸ್ಯೆ ಉಂಟಾಗಿ ಅವರು ಆಸ್ಪತ್ರೆಗೆ ದಾಖಲಾದರು.

### ಸಿಕ್ಕಿ ಬಿದ್ದ ಶ್ರೀಕೃಷ್ಣ

ಪೊಲೀಸರು ತಂಡವೊಂದನ್ನು ರಚಿಸಿ ಆರೋಪಿ ಶ್ರೀಕೃಷ್ಣನನ್ನು ಬಂಧಿಸಲೇಬೇಕು ಎಂದು ಕಾರ್ಯತಂತ್ರ ಹೆಣೆಯತೊಡಗಿದ್ದರು. ಪುತ್ತೂರಿನಿಂದ ಆತ ಯಾವ ಕಡೆಗೆ ಪರಾರಿಯಾಗಿರಬಹುದು ಎಂಬ ಬಗ್ಗೆ ಮಾಹಿತಿ ಸಂಗ್ರಹಿಸತೊಡಗಿದರು. ಆತನ ಮತ್ತು ಆತನ ಮನೆಯವರ ಮೊಬೈಲ್‌ಗಳ ಕಾಲ್ ಡಿಟೈಲ್ಸ್ ಪಡೆಯುವ ಪ್ರಯತ್ನ ನಡೆಯಿತು. ಮೊಬೈಲ್ ಲೊಕೇಶನ್ ಪತ್ತೆ ಹಚ್ಚುವ ಕಾರ್ಯವೂ ಆಯಿತು. ಆ ಸಂದರ್ಭದಲ್ಲಿ ಅವರ ಸಂಬಂಧಿ ಯುವಕನೊಬ್ಬ ಶ್ರೀ ಕೃಷ್ಣನನ್ನು ತನ್ನ ವಾಹನದಲ್ಲಿ ಕರೆದೊಯ್ದಿದ್ದಾನೆ ಎಂಬ ಮಾಹಿತಿಯೂ ಸಿಕ್ಕಿತು. ಆತನನ್ನು ಠಾಣೆಗೆ ಕರೆಯಿಸಿ ವಿಚಾರಣೆಗೊಳಪಡಿಸಲಾಯಿತು. ಜಗನ್ನೀವಾಸರಾವ್ ಅವರ ಸಹೋದರನನ್ನು ಠಾಣೆಗೆ ಕರೆಯಿಸಿ ಕುಳ್ಳಿರಿಸಲಾಯಿತು. ಇದರಿಂದಾಗಿ ಕುಟುಂಬದ ಮೇಲೆ ಪೊಲೀಸ್ ಒತ್ತಡ ಬಿತ್ತು. ಈ ಮಧ್ಯೆ ಶ್ರೀಕೃಷ್ಣರಾವ್ ಪರ ಮಂಗಳೂರಿನ 6ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಲಾಯಿತು. ನ್ಯಾಯಾಲಯ ದೂರುದಾರರಿಗೆ ನೋಟೀಸು ನೀಡಿ ಅಭಿಪ್ರಾಯ ವ್ಯಕ್ತಪಡಿಸುವಂತೆ ಸೂಚನೆ ನೀಡಿತು. ಅದರಂತೆ ದೂರುದಾರೆಯ ತಾಯಿ ನ್ಯಾಯಾಲಯಕ್ಕೆ ಹಾಜರಾಗಿ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡದಂತೆ ಕೋರಿಕೆ ಸಲ್ಲಿಸಿದರು. ಅದರ ತೀರ್ಪನ್ನು ನ್ಯಾಯಾಲಯ ಮುಂದೂಡಿತ್ತು. ಇದೇ ಸಂದರ್ಭದಲ್ಲಿ ಪೊಲೀಸ್ ಒತ್ತಡ ತಾಳಲಾರದೆ ಆರೋಪಿಯ ಕುಟುಂಬಸ್ಥರು ಪೊಲೀಸರಿಗೆ ಮಾಹಿತಿ ನೀಡಿ ಆತ ಮೈಸೂರು ಜಿಲ್ಲೆಯ ಟಿ.ನರಸೀಪುರದ ತೋಟದ ಮನೆಯೊಂದರಲ್ಲಿ ಆಶ್ರಯ ಪಡೆದಿದ್ದಾನೆ ಎಂದು ತಿಳಿಸಿದ್ದರು. ಅದರಂತೆ ಕಾರ್ಯಾಚರಣೆ ನಡೆಸಿದ ಪುತ್ತೂರು ಮಹಿಳಾ ಠಾಣಾ ಪೊಲೀಸರ ವಿಶೇಷ ತಂಡ ಆತನನ್ನು ವಶಕ್ಕೆ ತೆಗೆದುಕೊಂಡು ಪುತ್ತೂರಿಗೆ ಕರೆ ತಂದಿತ್ತು. ಆತನ ವಿಚಾರಣೆಯ ಸಂದರ್ಭದಲ್ಲಿ ಆತ ಪರಾರಿಯಾಗಲು ಆತನ ತಂದೆ ಸಹಕರಿಸಿರುವುದು ಬೆಳಕಿಗೆ ಬಂತು. ಆ ಸಮಯದಲ್ಲಿ ಜಗನ್ನೀವಾಸರಾವ್ ಅವರು ಆಸ್ಪತ್ರೆಯಿಂದ ಬಿಡುಗಡೆಗೊಂಡು ಮನೆಯಲ್ಲಿದ್ದರು. ಪುತ್ತೂರು ಪೊಲೀಸರು ಅವರನ್ನೂ ವಶಕ್ಕೆ ತೆಗೆದುಕೊಂಡರು. ತಂದೆ-ಮಗ ಇಬ್ಬರನ್ನೂ ವೈದ್ಯಕೀಯ ತಪಾಸಣೆಗೆ ಗುರಿಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಜಗನ್ನೀವಾಸರಾವ್ ಅವರಿಗೆ ನ್ಯಾಯಾಲಯ ಜಾಮೀನು ನೀಡಿದರೆ ಆರೋಪಿ ಶ್ರೀಕೃಷ್ಣರಾವ್‌ಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಈ ಎಲ್ಲಾ ಪ್ರಹಸನ ನಡೆಯುತ್ತಿರುವಾಗಲೇ ಜೂನ್ 27ರಂದು ಸಂತ್ರಸ್ತೆ ಯುವತಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಆಸ್ಪತ್ರೆಯಲ್ಲಿ ಜನನ ಪ್ರಮಾಣ ಪತ್ರ ಪಡೆಯಲಿಕ್ಕಾಗಿ ಇರುವಂತಹ ಅರ್ಜಿ ನಮೂನೆಯಲ್ಲಿ ತಂದೆಯ ಹೆಸರನ್ನು ಖಾಲಿ ಬಿಡಲಾಗಿದೆ. ಹದಿಹರೆಯದ ಪ್ರೀತಿ ಈ ರೀತಿಯಾಗಿ ಡೋಲಾಯಮಾನ ಸ್ಥಿತಿಯಲ್ಲಿದೆ. ☯





# ಧರ್ಮಸ್ಥಳದ ತಲೆಬುರುಡೆ ರಹಸ್ಯ!

## ದಕ್ಷಿಣ ಕನ್ನಡ

ಮೋಹನ್ ಬೋಳಂಗಡಿ

ಶ್ರೀ ಕ್ಷೇತ್ರ ಧರ್ಮಸ್ಥಳ ಚತುರ್ದಾನ ಪರಂಪರೆಯ ದಿನನಿತ್ಯ ಸಾವಿರಾರು ಭಕ್ತಾಧಿಗಳು ಬಂದು ಪೂಜೆ ಪುನಸ್ಕಾರಗಳನ್ನು ನೆರವೇರಿಸುವಂತಹ ಕ್ಷೇತ್ರ. ಸುಮಾರು 800 ವರ್ಷಗಳ ಇತಿಹಾಸವಿದೆ. ಶಿವನ ಆರಾಧನ ಸ್ಥಳ. ಜೈನರ ಆಡಳಿತಕ್ಕೆ ಒಳಪಟ್ಟಂತಹ ಕ್ಷೇತ್ರ. ಬಾಹುಬಲಿ ವಿಹಾರವು ಇದೆ. ಧರ್ಮದೇವತೆಗಳ ಆರಾಧನಾ ಸ್ಥಳ. ಹತ್ತು ಹಲವು ವಿಶೇಷತೆಗಳಿರುವಂತಹ ಈ ಕ್ಷೇತ್ರದಲ್ಲಿ ಅನ್ನದಾನ, ವಿದ್ಯಾದಾನ, ಔಷಧ ದಾನ, ಅಭಯದಾನ ಎಂಬ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಈ ಕ್ಷೇತ್ರದ ಮೊದಲ ಧರ್ಮಾಧಿಕಾರಿ ಬಿರ್ಮಣ್ಣ ಪೆರ್ಗಡೆಯವರಿಂದ ಮೊದಲ್ಗೊಂಡು ಈಗಿನ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರೆಗೆ ಒಟ್ಟು 21 ಧರ್ಮಾಧಿಕಾರಿಗಳು ಈ ಕ್ಷೇತ್ರದ ಆಡಳಿತವನ್ನು ನಡೆಸಿದ್ದಾರೆ.

ಕುಡುಮ ಎಂದು ಹೆಸರಿದ್ದ ಗ್ರಾಮವು ಧರ್ಮ ಕೈಂಕರ್ಯಗಳಿಂದ ಧರ್ಮಸ್ಥಳ ಎಂಬ ಹೆಸರಿನಲ್ಲಿ ದೇಶಾದ್ಯಂತ ಪ್ರಚಲಿತದಲ್ಲಿದೆ. ಇಲ್ಲಿ ನಡೆಯುವಂತಹ ನಿತ್ಯ ಧರ್ಮಕಾರ್ಯಗಳು ಲೆಕ್ಕಕ್ಕೆ ಸಿಗದಂತವು. ಈ ಕ್ಷೇತ್ರದ ಆಡಳಿತ ವರ್ಗ ನಿರ್ವಹಿಸುವಂತಹ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ರಾಜ್ಯದ 31 ಜಿಲ್ಲೆಗಳಿಗೂ ವ್ಯಾಪಿಸಿದೆ. ಸುಮಾರು 65 ಲಕ್ಷ ಫಲಾನುಭವಿಗಳ ಗುಂಪು ಈ ಯೋಜನೆಯಡಿಯಲ್ಲಿ ಇದೆ. ಈ ಯೋಜನೆಯ ವಾರ್ಷಿಕ ವ್ಯವಹಾರ 25 ಲಕ್ಷ ಕೋಟಿ ರೂ.ಗಳಿಗಿಂತಲೂ ಅಧಿಕ. ಬಹುಮುಖ ಸೇವೆಗಾಗಿಯೇ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರಿಗೆ ಕೇಂದ್ರ ಸರಕಾರ ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೇ ರಾಜ್ಯಸಭೆಯ ಗೌರವಾನ್ವಿತ ನಾಮಕರಣ ಸದಸ್ಯರೂ ಹೌದು. ಇಂತಹ ಹಿನ್ನೆಲೆಯ ಧರ್ಮಸ್ಥಳ ಕ್ಷೇತ್ರಕ್ಕೆ ಕಳಂಕ ತರುವಂತಹ ಯೋಜಿತ ಷಡ್ಯಂತ್ರ ಹಲವು ದಶಕಗಳಿಂದ ನಡೆಯುತ್ತಾ ಬಂದಿದೆ. 70ರ ದಶಕದ ಅಂತ್ಯದಲ್ಲಿ ಧರ್ಮಸ್ಥಳ ಶಿಕ್ಷಣ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದ ಮಹಿಳೆಯೊಬ್ಬರು ತನ್ನ ಮನೆಯ ಬಚ್ಚಲು ಕೊಠಡಿಯಲ್ಲಿ ಬಾಗಿಲಿಗೆ ಚಿಲಕ ಹಾಕಿಕೊಂಡು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಹತ್ಯೆಯ ಹಿಂದೆ ಧರ್ಮಸ್ಥಳದ ಆಡಳಿತದವರ ಕೈವಾಡ ಇದೆ ಎಂದು ಎಡಪಕ್ಷಗಳ ಮುಖಂಡರು ಮತ್ತು ಧರ್ಮಸ್ಥಳವನ್ನು ನಖಶಿಖಾಂತ ವಿರೋಧಿಸುತ್ತಿದ್ದಂತಹ ವಿಚಾರವಾದಿಗಳು ಆರೋಪಿಸಿದ್ದರು. ಪೊಲೀಸರ ತನಿಖೆಯಲ್ಲಿ ಆ ಗೃಹಿಣಿ ವೈಯಕ್ತಿಕ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಸಾಕ್ಷ್ಯಾಧಾರಗಳಿಂದ ಋಜುವಾತು ಆಗಿತ್ತು. ಈ ಘಟನೆಯಾಗಿ 8 ವರ್ಷಗಳ ಬಳಿಕ ಉಜಿರೆ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿ, ಧರ್ಮಸ್ಥಳದ ಪದ್ಮಲತಾ ಎಂಬ ಹೆಣ್ಮಗಳು ನಿಗೂಢವಾಗಿ ನಾಪತ್ತೆಯಾಗಿದ್ದಳು. ಆಕೆಯ ತಂದೆ ದೇವಾನಂದ್ ಕಮ್ಯೂನಿಸ್ಟ್ ಪಕ್ಷದ ಸ್ಥಳೀಯ ಮುಖಂಡರಾಗಿದ್ದರು. ಪೊಲೀಸರಿಗೆ 3 ದಿನಗಳ ನಂತರ ದೂರು ನೀಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಶಯಿತ ಜೀಪು ಚಾಲಕನೊಬ್ಬನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸುತ್ತಿದ್ದಂತೆಯೇ ಕಮ್ಯೂನಿಸ್ಟ್ ಪಕ್ಷದ ಮುಖಂಡರು ಠಾಣೆಗೆ ನುಗ್ಗಿ ಆತನನ್ನು ಬಂಧಮುಕ್ತಗೊಳಿಸಿದ್ದರು. ಈ ಪ್ರಕರಣವನ್ನು ಸಿ.ಓ.ಡಿ. ಪೊಲೀಸರು ತನಿಖೆ ನಡೆಸಿದ್ದರು. ಪದ್ಮಲತಾಳ ಮೃತದೇಹ ಕಾಣೆಯಾಗಿ 52 ದಿನಗಳ ನಂತರ ಜೀರ್ಣಾವಸ್ಥೆಯಲ್ಲಿ ಮನೆಯಿಂದ ಸುಮಾರು 3 ಕಿ.ಮೀ. ದೂರದಲ್ಲಿ ತೋಡಿನ ಪಕ್ಕದಲ್ಲಿ ಅಸ್ಥಿಪಂಜರದ ರೂಪದಲ್ಲಿ ಪತ್ತೆಯಾಗಿತ್ತು. ತನಿಖೆ ನಡೆಸಿದಂತಹ ಸಿ.ಓ.ಡಿ. ಪೊಲೀಸರಿಗೆ ಸೂಕ್ತ ಸಾಕ್ಷ್ಯಾಧಾರಗಳು ಲಭಿಸದ ಹಿನ್ನೆಲೆಯಲ್ಲಿ ಸಿ ವರದಿ ಸಲ್ಲಿಸಲಾಗಿತ್ತು. ಭಾರೀ ಹೋರಾಟ ನಡೆಸಿದ್ದ ಕಮ್ಯೂನಿಸ್ಟ್ ಪಕ್ಷದ ಮುಖಂಡರು ಸಿ.ಓ.ಡಿ. ಪೊಲೀಸರು ಸಲ್ಲಿಸಿದ್ದ ಸಿ ವರದಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಿಲ್ಲ.





ಈ ಎರಡೂ ಘಟನೆಗಳ ನಂತರ ಸುಮಾರು 25 ವರ್ಷಗಳು ಕಳೆದ ಮೇಲೆ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಧರ್ಮಸ್ಥಳ ಗ್ರಾಮದ ಮಣ್ಣಸಂಕ ಎಂಬಲ್ಲಿ ನಡೆದಿತ್ತು. ಈ ಪ್ರಕರಣದ ಆರೋಪಿ ಕಾರ್ಕಳ ಕುಕ್ಕುಂದೂರಿನ ಸಂತೋಷ್ ರಾವ್ ಎಂಬಾತನನ್ನು ಸ್ಥಳೀಯ ಪೊಲೀಸರು ಬಂಧಿಸಿದ್ದರು. ಸಾರ್ವಜನಿಕ ಒತ್ತಡದ ಹಿನ್ನೆಯಲ್ಲಿ ಈ ಪ್ರಕರಣದ ತನಿಖೆಯನ್ನು ರಾಜ್ಯ ಸರಕಾರ ಸಿ.ಓ.ಡಿ.ಗೆ ಒಪ್ಪಿಸಿತ್ತು. ಸಿ.ಓ.ಡಿ. ಡಿವೈಎಸ್ಪಿ ರುದ್ರಮುನಿಯವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಈ ತನಿಖೆಯ ಮೇಲೆ ಸಂಶಯ ವ್ಯಕ್ತಪಡಿಸಿ ರಾಜ್ಯ ವಿಧಾನಸಭೆಯಲ್ಲಿ ಆಗಿನ ಬೆಳ್ತಂಗಡಿ ಶಾಸಕ ಕೆ. ವಸಂತ ಬಂಗೇರರವರು ಸರಕಾರಕ್ಕೆ ಒತ್ತಡ ಹೇರಿದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಸಿಬಿಐ ತನಿಖೆಗೆ ಆದೇಶ ನೀಡಿತ್ತು. ಸಿಬಿಐನ ಚೆನ್ನೈ ವಿಭಾಗದ ಡಿವೈಎಸ್ಪಿಯವರು ತನಿಖೆ ನಡೆಸಿ ಹೆಚ್ಚುವರಿ ಆರೋಪ ಪಟ್ಟಿ ಸಲ್ಲಿಸಿದ್ದರು. ಸ್ಥಳೀಯ ಪೊಲೀಸರು, ಸಿ.ಓ.ಡಿ. ಮತ್ತು ಸಿಬಿಐ ತನಿಖೆಯಲ್ಲಿ ಸಂತೋಷ್‌ರಾವ್ ಆರೋಪಿ ಎಂದು ದಾಖಲಾಗಿತ್ತು. ಆತನ ವಿರುದ್ಧ ಬೆಂಗಳೂರಿನ ಸಿಬಿಐ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಂಡಿದ್ದ. ಸಿಬಿಐ ಅಧಿಕಾರಿಗಳು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಹೈಕೋರ್ಟ್‌ನ ವಿಭಾಗೀಯ ಪೀಠವು ಕೆಳಹಂತದ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿತ್ತು. ಇಲ್ಲಿಗೆ ಸೌಜನ್ಯ ಪ್ರಕರಣಕ್ಕೆ ಎಳ್ಳುನೀರು ಬಿಡಲಾಗಿತ್ತು.

### ಬಗೆಹರಿಯದ ಗೊಂದಲ

ಸಂತೋಷ್‌ರಾವ್ ಅಪರಾಧಿ ಅಲ್ಲ ಎಂದು ಆದ

☞ 7



## ಯಾರು ಈ ಅಜ್ಞಾತ ವ್ಯಕ್ತಿ?

ಬೆಳ್ತಂಗಡಿ ನ್ಯಾಯಾಲಯಕ್ಕೆ ತಲೆಬುರುಡೆಯೊಂದಿಗೆ ಹಾಜರಾದ ಸುಮಾರು 50 ವರ್ಷದ ದೃಢಕಾಯ ವ್ಯಕ್ತಿಯ ಬಗ್ಗೆ ಸಹಜವಾಗಿಯೇ ಎಲ್ಲರಲ್ಲೂ ಕುತೂಹಲ ಇದೆ. ಆತ ನ್ಯಾಯಾಲಯಕ್ಕೆ ಹಾಜರಾಗುವ ವೇಳೆ ಸಂಪೂರ್ಣ ದೇಹವನ್ನು ಕಪ್ಪು ಬಟ್ಟೆಯಿಂದ ಮುಚ್ಚಲಾಗಿತ್ತು. ಕೇವಲ ನ್ಯಾಯಾಧೀಶರ ಎದುರು ಮಾತ್ರ ಹೇಳಿಕೆ ದಾಖಲಿಸುವಾಗ ಮುಖದ ಬಟ್ಟೆಯನ್ನು ಸರಿಸಿದ್ದ, ಪೊಲೀಸ್ ಅಧಿಕಾರಿಗಳು ಆತನನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಮಾತ್ರ ಮುಖದರ್ಶನವಾಗಿತ್ತು ಹೊರತು ಬೆಳ್ತಂಗಡಿ ಠಾಣೆಯ ಪೊಲೀಸ್ ಸಿಬ್ಬಂದಿಗಳ ಸಹಿತ ಸಾರ್ವಜನಿಕರಿಗೆ ಆತನ ಮುಖವನ್ನು ಮರೆಮಾಚಲಾಗಿತ್ತು. ಆತನೇ ಹೇಳಿಕೊಂಡಂತೆ ಆತ 1995ರಿಂದ 2014ರವರೆಗೆ ಅಂದರೆ ಸುಮಾರು 19 ವರ್ಷಗಳ ಕಾಲ ಧರ್ಮಸ್ಥಳ ಕ್ಷೇತ್ರದಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. ತದನಂತರ ಕೆಲಸ ತೊರೆದು ಹೋಗಿದ್ದ. ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಕ್ಷೇತ್ರದ ಆಡಳಿತ ವರ್ಗದ ಸೂಚನೆಯಂತೆ ನೂರಾರು ಮೃತದೇಹಗಳನ್ನು ಧರ್ಮಸ್ಥಳ ಪರಿಸರದ ಕಾಡುಗಳಲ್ಲಿ ಹೂತಿಟ್ಟಿದ್ದಾನೆ. ಆತನಿಗೆ ಇತ್ತೀಚೆಗೆ ತಾನು ಮಾಡಿದಂತಹ ಕೃತ್ಯಗಳ ಬಗ್ಗೆ ಪಾಪಪ್ರಜ್ಞೆ ಕಾಡಿದ್ದು, ಆ ಮೃತದೇಹಗಳನ್ನು ಹೊರತೆಗೆಯಲು ಮಾಹಿತಿ ನೀಡುತ್ತೇನೆಂದು ಹೇಳಿ ಬಂದಿದ್ದಾನೆ. ಆತನ ಪ್ರಾಥಮಿಕ ವಿಚಾರಣೆ ನಡೆದಿದ್ದು, ಆತ ತಂದಿರುವ ತಲೆಬುರುಡೆ ಮತ್ತು ಎಲುಬುಗಳ ಡಿಎನ್‌ಎ ಪರೀಕ್ಷೆಯ ವರದಿ ಬಂದ ಬಳಿಕ ಮತ್ತೆ ವಿಚಾರಣೆ ನಡೆಯಲಿದೆ. ಲಭ್ಯ ಮಾಹಿತಿಗಳಂತೆ 2014ರಲ್ಲಿ ಧರ್ಮಸ್ಥಳ ಸ್ನಾನಘಟ್ಟದಲ್ಲಿ ಯಾತ್ರಾರ್ಥಿಗಳ ಪರ್ಸ್ ಕದ್ದು ಸಿಕ್ಕಿಬಿದ್ದ, ಯಾತ್ರಾರ್ಥಿಯೊಬ್ಬರ ಕಾರಿನ ಗ್ಲಾಸ್ ಒಡೆದು ಕಳ್ಳತನಕ್ಕೆ ಯತ್ನಿಸಿ ಬೆಳ್ತಂಗಡಿ ಪೊಲೀಸರಿಂದ ತನಿಖೆಗೆ ಒಳಪಟ್ಟಿದ್ದಂತಹ ವ್ಯಕ್ತಿಯೇ ಈಗ ನ್ಯಾಯಾಲಯದ ಮುಂದೆ ಹಾಜರಾಗಿದ್ದಾನೆ. ಈ ಬಗ್ಗೆ ಕ್ಲಾರಿಟಿ ಇನ್ನಷ್ಟೇ ಸಿಗಬೇಕಾಗಿದೆ.

6 ☞

ಮೇಲೆ ಸೌಜನ್ಯಳನ್ನು ಅತ್ಯಾಚಾರಗೈದು ಕೊಲೆ ಮಾಡಿದಂತಹ ಅಪರಾಧಿ ಯಾರು? ಎನ್ನುವ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಶ್ರೀ ಕೇತ್ರ ಧರ್ಮಸ್ಥಳದ ವಿರುದ್ಧ ಹೋರಾಟ ನಡೆಸಲಾಯಿತು. ಆ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಂಬಂಧಪಟ್ಟವರು ಈ ಪ್ರಕರಣಕ್ಕೂ ಕ್ಷೇತ್ರಕ್ಕೂ ಸಂಬಂಧ ಇಲ್ಲ ಯಾವುದೇ ರೀತಿಯ ತನಿಖೆ ನಡೆಸುವುದಾದರೂ ಸ್ವಾಗತ ಇದೆ. ಕ್ಷೇತ್ರದ ಬಗ್ಗೆ ಅಪಪ್ರಚಾರ ನಡೆಸಬಾರದು ಎಂದು ರಾಜ್ಯ ಹೈಕೋರ್ಟ್ ನಲ್ಲಿ ರಿಟ್ ಅರ್ಜಿ ದಾಖಲಿಸಿ ಪ್ರತಿಬಂಧಕಾಜ್ಞೆಯನ್ನು ಪಡೆದುಕೊಂಡಿದ್ದರು. ಆದರೂ ಕೆಲವು ಮಂದಿ ಹೋರಾಟದ ಹೆಸರಿನಲ್ಲಿ ಕ್ಷೇತ್ರಕ್ಕೆ ಅವಮಾನ ಮಾಡಲು ತೊಡಗಿದಾಗ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಲ್ಲದೇ ನ್ಯಾಯಾಂಗ ನಿಂದನೆ ಪ್ರಕರಣವನ್ನೂ ದಾಖಲಿಸಿದ್ದರು. ಇದರಿಂದ ಇಕ್ಕಟ್ಟಿಗೆ ಸಿಲುಕಿದಂತಹ ಹೋರಾಟಗಾರರು ಇದೀಗ ಮತ್ತೊಂದು ಸುತ್ತಿನ ನಾಟಕವೊಂದನ್ನು ಆಡುತ್ತಿದ್ದಾರೆ ಅದುವೇ ತಲೆಬುರುಡೆ ರಹಸ್ಯ.



ಎಸ್ಪಿ ಕೆ. ಅರುಣ್

### ವಕೀಲರ ಪತ್ರ

ಸೌಜನ್ಯ ಹಂತಕ ಸಂತೋಷ್ ರಾವ್ ಪರ ನಡೆಯುತ್ತಿದ್ದಂತಹ ಹೋರಾಟ ನ್ಯಾಯಾಲಯಗಳ ಆದೇಶಗಳ ಹಿನ್ನೆಲೆಯಲ್ಲಿ ತಟಸ್ಥ ಸ್ಥಿತಿಗೆ ಬಂದಂತಹ ಸಂದರ್ಭದಲ್ಲಿಯೇ ಬೆಂಗಳೂರಿನ ಇಬ್ಬರು ಯುವ ವಕೀಲರು ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಿ ಪತ್ರವೊಂದನ್ನು ಹರಿಯಬಿಟ್ಟಿದ್ದಾರೆ. ಬೆಂಗಳೂರಿನ ವಕೀಲರಾದ ಓಜಸ್ವಿಗೌಡ ಮತ್ತು ಸಚಿನ್ ದೇಶಪಾಂಡೆ ಅವರು ತಮ್ಮದೇ ಲೆಟರ್‌ಹೆಡ್‌ನಲ್ಲಿ ಪತ್ರವೊಂದನ್ನು ಬರೆದು ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಮೃತದೇಹಗಳನ್ನು ಹೂಳಿದ್ದಂತಹ ವ್ಯಕ್ತಿಗೆ ಪಾಪಪ್ರಜ್ಞೆ ಕಾಡತೊಡಗಿದ್ದು, ಸೂಕ್ತ ಪೊಲೀಸ್ ರಕ್ಷಣೆ ನೀಡಿದ್ದಲ್ಲಿ ಆ ವ್ಯಕ್ತಿ ಬಂದು ಹೂತಿದ್ದ ಮೃತದೇಹಗಳನ್ನು ತೋರಿಸಿಕೊಡಲು ಬದ್ಧನಿರುವುದಾಗಿ ಹೇಳಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಧರ್ಮಸ್ಥಳ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಸಮರ್ಥ್ ಆರ್. ಗಾಣಿಗೇರ್‌ರವರು ವಕೀಲರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಹೂತಿಡಲಾದಂತಹ ಮೃತದೇಹವನ್ನು ತೋರಿಸಿಕೊಡುವಂತಹ ವ್ಯಕ್ತಿಗೆ ಸೂಕ್ತ ಭದ್ರತೆ ಒದಗಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ಆ ವಕೀಲರು ಇತರ ವಕೀಲರೊಂದಿಗೆ ಜಿಲ್ಲಾ ಎಸ್ಪಿ ಕೆ.ಅರುಣ್ ಅವರನ್ನು ಭೇಟಿಯಾಗಲು ಮಂಗಳೂರಿಗೆ ಬಂದಿದ್ದರು. ಈ ವಿಚಾರವನ್ನೂ ಸಹ ಫೇಸ್‌ಬುಕ್ ಮೂಲಕ ತಿಳಿಸಿದ್ದರು. ಅವರು ಬಂದ ದಿನದಂದು ಭೇಟಿಗೆ ಜಿಲ್ಲಾ ಎಸ್ಪಿ ಅರುಣ್ ಲಭ್ಯವಿರಲಿಲ್ಲ. ಅವರು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದಂತಹ ಐಪಿಎಸ್ ಅಧಿಕಾರಿಗಳ ರಾಜ್ಯಮಟ್ಟದ ಸಮಾವೇಶಕ್ಕೆ ಹೋಗಿದ್ದರು. ವಕೀಲರು ವಾಪಾಸು ಹೋಗಿದ್ದರು. ತದನಂತರ ಮತ್ತೇ ವಕೀಲರನ್ನು ಸಂಪರ್ಕಿಸಿದಾಗ ಅವರು ಮತ್ತೆ ಬಂದು ಜಿಲ್ಲಾ ಎಸ್ಪಿಯವರನ್ನು ಸಂಪರ್ಕಿಸಿ ಮಾಹಿತಿ ಹಂಚಿಕೊಂಡಿದ್ದರು. ಎಸ್ಪಿಯವರು ವಕೀಲರ ತಂಡವನ್ನು ಧರ್ಮಸ್ಥಳ ಪೊಲೀಸ್ ಠಾಣೆಗೆ ಕಳುಹಿಸಿ ದೂರು ನೀಡಲು ಸೂಚಿಸಿ ದ್ದರು. ಅದರಂತೆ ಧರ್ಮಸ್ಥಳ ಪೊಲೀಸ್ ಠಾಣೆಗೆ ಹೋದ ವಕೀಲರ ತಂಡ ಅಜ್ಞಾತ ವ್ಯಕ್ತಿಯ ಹೆಸರಿನಲ್ಲಿ ದೂರು ನೀಡಿದ್ದರು. ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡು ರಶೀದಿ ನೀಡಿದ್ದರು. ತದನಂತರ ನ್ಯಾಯಾಲಯದ ಅನುಮತಿ ಪಡೆದು ಬಿಎನ್‌ಎಸ್ ಸೆಕ್ಷನ್ 211/1ರ ಅಡಿಯಲ್ಲಿ ಕೇಸು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಪೊಲೀಸರ ತನಿಖೆ ನಡೆಯುತ್ತಿದ್ದಂತೆ ಮತ್ತೊಂದು ಆಶ್ಚರ್ಯದಾಯಕ ಘಟನೆ ನಡೆಯಿತು. ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಮೃತದೇಹಗಳನ್ನು ಊಳಿದ್ದೇನೆ ಎಂದು ಹೇಳಿಕೊಂಡಂತಹ ವ್ಯಕ್ತಿ ವಕೀಲರೊಂದಿಗೆ ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರಾದ. ಆತನಿಗೆ ಬೆಳ್ತಂಗಡಿ ಮತ್ತು ಧರ್ಮಸ್ಥಳ ಠಾಣೆಯ ಪೊಲೀಸರು ಸೂಕ್ತ ಭದ್ರತೆ ಒದಗಿಸಿದ್ದರು. ಬೆಳ್ತಂಗಡಿ ನ್ಯಾಯಾಧೀಶರು ಆತನ ಹೇಳಿಕೆಯನ್ನು ಸುಮಾರು ಒಂದೂವರೆ ಗಂಟೆಗಳ ಕಾಲ ದಾಖಲಿಸಿಕೊಂಡರು. ಆ ಸಂದರ್ಭದಲ್ಲಿ ಆತನ ಪರ ವಕೀಲರಿಗೂ ನ್ಯಾಯಾಲಯಕ್ಕೆ ಪ್ರವೇಶವಿರಲಿಲ್ಲ. ಬಿಎನ್‌ಎಸ್‌ಎಸ್ 183ರ ಅಡಿಯಲ್ಲಿ ಹೇಳಿಕೆ ದಾಖಲಾದ ಬಳಿಕ ಆತನನ್ನು ಬೆಳ್ತಂಗಡಿ ವೃತ್ತ ನಿರೀಕ್ಷಕರ ಕಚೇರಿಗೆ ಕರೆದೊಯ್ಯಲಾಯಿತು. ಆತ ನ್ಯಾಯಾಲಯಕ್ಕೆ ಬರುವಂತಹ ಸಂದರ್ಭದಲ್ಲಿ ಒಂದು ಚೀಲದಲ್ಲಿ ಮಾನವ ತಲೆಬುರುಡೆ ಮತ್ತು ಮೂರು ಎಲುಬು ತುಂಡುಗಳನ್ನು ತಂದಿದ್ದ. ಆದ್ದರಿಂದ ಬೆಳ್ತಂಗಡಿ ವೃತ್ತ ನಿರೀಕ್ಷಕರು ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಅವರ ತಂಡವು ಬೆಳ್ತಂಗಡಿ ಪೊಲೀಸ್ ಠಾಣೆಗೆ ಬಂದು ಮಹಜರು ಮೂಲಕ ಆ ಸೊತ್ತುಗಳನ್ನು ಸ್ವಾಧೀನಪಡಿಸಿಕೊಂಡಿತ್ತು. ತದನಂತರ ಆತನನ್ನು ಮುಂದಿನ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಕಳುಹಿಸಿಕೊಡಲಾಯಿತು. ಆತನನ್ನು ಯಾವ ವಕೀಲರು ಕರ್ಕೊಂಡು ಬಂದಿದ್ದರೋ ಅವರೇ ಕರೆದೊಯ್ದಿದ್ದಾರೆ. ಅಲ್ಲಿಗೇ ಈ ಪ್ರಕರಣ ಒಂದು ಹಂತದಲ್ಲಿ ನಿಂತಿದೆ. ಪೊಲೀಸರು ತನಿಖೆಯನ್ನು ಮುಂದುವರಿಸಿದ್ದಾರೆ. ☯

## ಸೌಜನ್ಯ ಅಜ್ಜಂದಿರೇ ಕಾಂಟ್ರಾಕ್ಟರ್‌ಗಳು

ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ದಿನನಿತ್ಯ ಸಾವಿರಾರು ಭಕ್ತಾಧಿಗಳು ಬರ್ತಾರೆ ಸಾಕಷ್ಟು ಸಂಖ್ಯೆಯಲ್ಲಿ ಶೌಚಾಲಯಗಳು ಇವೆ. ಆದರೆ ಶೌಚಾಲಯವನ್ನು ಬಳಸದಂತಹ ಉತ್ತರ ಕರ್ನಾಟಕ ಮೂಲದ ಭಕ್ತಾಧಿಗಳು ದೇವಸ್ಥಾನದ ಹೊರ ಪರಿಸರ ಮತ್ತು ನೇತ್ರಾವತಿ ಸ್ನಾನಘಟ್ಟದ ಅಕ್ಕಪಕ್ಕದಲ್ಲಿ ಶೌಚ ಕ್ರಿಯೆಗಳನ್ನು ನಡೆಸಿ ಗಲೀಜು ಮಾಡುತ್ತಿದ್ದರು. ಧರ್ಮಸ್ಥಳದ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಭಕ್ತರು ಆಗಮಿಸುತ್ತಿದ್ದರು. ಅವರು ಮಾಡಿದಂತಹ ಶೌಚ ಗಲೀಜುಗಳನ್ನು ಶುಚಿಗೊಳಿಸಲು ಧರ್ಮಸ್ಥಳದ ಆಡಳಿತ ವರ್ಗ ಸಫಾಯಿ ಕರ್ಮಚಾರಿಗಳ ಮೊರೆ ಹೋಗುತ್ತಿತ್ತು. ಸುಮಾರು ಮೂರು ದಶಕಗಳ ಹಿಂದೆ ಧರ್ಮಸ್ಥಳದ ಗ್ರಾಮದ ಪಾಂಗಾಳದ ಬಾಬುಗೌಡ ಮತ್ತು ಪೂವಣಿ ಗೌಡ ಇವರು ಧರ್ಮಸ್ಥಳದಲ್ಲಿ ಕೆಲಸ ಮಾಡುತ್ತಿದ್ದರು. ಇವರು 2012ರಲ್ಲಿ ಹತ್ಯೆಗೀಡಾದ ಸೌಜನ್ಯಳ ಅಜ್ಜಂದಿರು. ಬಾಬುಗೌಡ ಸೌಜನ್ಯಳ ತಾಯಿ ಕುಸುಮಾವತಿಯ ತಂದೆಯಾದರೆ ಪೂವಣಿ ಗೌಡ ಸೌಜನ್ಯಳ ತಂದೆ ಚಂದಪ್ಪ ಗೌಡರ ತಂದೆ. ಇವರಿಬ್ಬರೂ ಸೇರಿಕೊಂಡು ಚಾಮನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕೊರಚರಹಟ್ಟಿ ಎಂಬಲ್ಲಿನ ನೈರ್ಮಲ್ಯ ಕಾರ್ಮಿಕರನ್ನು ಧರ್ಮಸ್ಥಳಕ್ಕೆ ಕರೆಸುತ್ತಿದ್ದರು. ಸುಮಾರು ಒಂದು ತಿಂಗಳ ಕಾಲ ಅವರು ಕೆಲಸ ಮಾಡಿ ವಾಪಾಸು ಹೋಗುತ್ತಿದ್ದರು. ಹೀಗೆ ಬಂದಂತಹ ಕೆಲಸಗಾರರಲ್ಲಿ ಚೆನ್ನಯಾನೆ ಚೆನ್ನಯ್ಯ, ರಾಜ, ಕಾಂಜ, ತಾನಾಸಿ, ಮಾರ ಆತನ ಪತ್ನಿ ರತ್ನ. 1995ರಲ್ಲಿ ಧರ್ಮಸ್ಥಳದಲ್ಲೇ ಉಳಕೊಂಡರು ಮತ್ತು ಕ್ಷೇತ್ರದಲ್ಲಿ ನೈರ್ಮಲ್ಯ ಕೆಲಸಕ್ಕೆ ಸೇರಿದ್ದರು. ಇವರ ಪೈಕಿ ಚೆನ್ನ ಎಂಬಾತನ ಮೇಲೆ ಹಲವು ಆರೋಪಗಳು ಬಂದ ಹಿನ್ನೆಲೆಯಲ್ಲಿ 2014ರಲ್ಲಿ ಕೆಲಸದಿಂದ ತೆಗೆಯಲಾಗಿತ್ತು. ರಾಜ ಎಂಬಾತ ತನ್ನ ಅಪ್ರಾಪ್ತ ವಯಸ್ಸಿನ ಮಗಳ ಮೇಲೆಯೇ ಅತ್ಯಾಚಾರ ಗೈದು ಫೋಸ್ಕೋ ಕಾಯ್ದೆಯಡಿಯಲ್ಲಿ ಜೈಲಿಗೆ ಹೋಗಿದ್ದ. ಕಾಂಜ ಅನಾರೋಗ್ಯದಿಂದ ಮೃತಪಟ್ಟರೆ ತಾನಾಸಿ ಸದ್ಯ ಉಜಿರೆ ಪಂಚಾಯತ್‌ನಲ್ಲಿ ನೈರ್ಮಲ್ಯ ಕೆಲಸಗಾರನಾಗಿದ್ದಾನೆ. ನೇತ್ರಾವತಿ ನದಿಯಲ್ಲಿ ಯಾರಾದರೂ ಯಾತ್ರಾರ್ಥಿಗಳು ಮುಳುಗಿದರೆ ಅವರನ್ನು ರಕ್ಷಿಸುತ್ತಿದ್ದದ್ದೇ ಮಾರ. ಈತ ಕೂಡಾ ಮೃತಪಟ್ಟಿದ್ದಾನೆ. ಆತನ ಪತ್ನಿ ರತ್ನ ಊರಿಗೆ ಹೋಗಿದ್ದಾಳೆ. ಈ ತಂಡ ಧರ್ಮಸ್ಥಳದಲ್ಲಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಅಪರಿಚಿತ ಶವಗಳು ನದಿಯಲ್ಲಿ ಪತ್ತೆ ಆದರೆ ಅದರ ಅಂತ್ಯ ಸಂಸ್ಕಾರವನ್ನು ನಡೆಸುತ್ತಿತ್ತು. ಪೊಲೀಸರು ಕೇಸು ದಾಖಲಿಸಿಕೊಂಡು ನೆಲ್ಯಾಡಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಿಂದ ಮರಣೋತ್ತರ ಪರೀಕ್ಷೆ ನಡೆಸಿ ಸುಮಾರು 10 ದಿನಗಳವರೆಗೆ ಬೆಳ್ತಂಗಡಿ ಸರಕಾರಿ ಆಸ್ಪತ್ರೆಯಲ್ಲಿ ಮೃತದೇಹವನ್ನು ಕಾದಿರಿಸಿ ಪತ್ರಿಕಾ ಪ್ರಕಟಣೆ ನೀಡಿ ವಾರೀಸುದಾರರು ಬಾರದೇ ಇದ್ದಂತಹ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಪಂಚಾಯತ್‌ಗೆ ಮಾಹಿತಿ ನೀಡಿ ಅಂತ್ಯ ಸಂಸ್ಕಾರ ನಡೆಸುವಂತೆ ಕೋರಿಕೆ ಸಲ್ಲಿಸುತ್ತಿದ್ದರು. ಗ್ರಾಮ ಪಂಚಾಯತ್ ಅಧಿಕಾರಿಗಳು ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿ ತಮ್ಮಲ್ಲಿ ನೈರ್ಮಲ್ಯ ಕಾರ್ಮಿಕರು ಇಲ್ಲದೇ ಇದ್ದುದನ್ನು ಧರ್ಮಸ್ಥಳ ಕ್ಷೇತ್ರದ ಕಚೇರಿಗೆ ಮಾಹಿತಿ ನೀಡಿ ನೈರ್ಮಲ್ಯ ಕಾರ್ಮಿಕರನ್ನು ಕಳುಹಿಸಿಕೊಡುವಂತೆ ಕೇಳಿಕೊಳ್ಳುತ್ತಿದ್ದರು. ಅದರಂತೆ ಈ ತಂಡ ಹೋಗಿ ಮೃತದೇಹವನ್ನು ತಂದು ಅಲ್ಲಿನ ಕಾಡುಗಳಲ್ಲಿ ಹೂತು ಹಾಕುತ್ತಿದ್ದರು. ಈ ರೀತಿಯ ಹೂತು ಹಾಕಿದಂತಹ ಸುಮಾರು ಮೃತದೇಹಗಳು ಆ ಪರಿಸರದ ಕಾಡುಗಳಲ್ಲಿ ಇದೆ. ಇದೇ ವಿಚಾರವನ್ನು ಇದೀಗ ಪಾಪಪ್ರಜ್ಞೆ ಕಾಡುತ್ತಿರುವಂತಹ ವ್ಯಕ್ತಿ ಬಯಲು ಮಾಡಿರುವಂತಹದ್ದು. ಧರ್ಮಸ್ಥಳ ಗ್ರಾಮ ಪಂಚಾಯತ್‌ನಲ್ಲಿ 1980ರಿಂದ ಈತನಕ ಎಷ್ಟು ಮೃತದೇಹಗಳನ್ನು ಹೂಳಲಾಗಿದೆ ಮತ್ತು ಅದಕ್ಕೆ ಈ ನೈರ್ಮಲ್ಯ ಕಾರ್ಮಿಕರಿಗೆ ಎಷ್ಟು ಹಣವನ್ನು ಪಾವತಿ ಮಾಡಲಾಗಿದೆ ಎಂಬ ದಾಖಲೆಗಳಿವೆ. ಯಾರಾದರೂ ಮಾಹಿತಿ ಹಕ್ಕಿನ ಅಡಿಯಲ್ಲಿ ಕೇಳಿದರೆ ಪಂಚಾಯತ್ ಈ ದಾಖಲೆಗಳನ್ನು ಒದಗಿಸುತ್ತದೆ. ಇದು ಸಧ್ಯಕ್ಕೆ ಬಯಲಾಗಿರುವಂತಹ ಬುರುಡೆಯ ಕಥೆ. ☯



## ಪದ್ಮಶ್ರೀ ಬಿ. ಸರೋಜಾದೇವಿ ಅವರ ದಿವ್ಯಾತ್ಮಕ್ಕೆ ಶಾಂತಿ ಸಿಗಲಿ

ಪಂಚ ಭಾಷಾ ತಾರೆ 'ಪದ್ಮಶ್ರೀ' ಬಿ. ಸರೋಜಾದೇವಿ ಅವರು 14-07-2025 ಸೋಮವಾರ ಬೆಳಗ್ಗೆ 8.00 ಗಂಟೆಗೆ ನಿಧನರಾಗಿದ್ದಾರೆ. ಸರೋಜಾದೇವಿ ಅವರು ವಯೋಸಹಜ ಕಾಯಿಲೆಯಿಂದ 87 ವರ್ಷಕ್ಕೆ ವಿಧಿವಶರಾಗಿದ್ದಾರೆ. ಕನ್ನಡ ಭಾಷೆ ಮಾತ್ರವಲ್ಲದೆ ತಮಿಳು, ತೆಲುಗು, ಹಿಂದಿ ಮತ್ತು ಮಲಯಾಳಂ ಭಾಷೆಗಳಲ್ಲೂ ನಟಿಸಿ ಪಂಚ ಭಾಷಾ ತಾರೆಯಾಗಿ ಮಿಂಚಿದ್ದವರು. ಅಂದಿನ ಕಾಲದ ಮೊದಲ ಲೇಡಿ ಸೂಪರ್‌ಸ್ಟಾರ್ ಆಗಿದ್ದವರು. 1962ರಲ್ಲಿ ಬಂದಿದ್ದ ಕಿತ್ತೂರ ಚೆನ್ನಮ್ಮ ಅವರಿಗೆ ಭಾರಿ ಖ್ಯಾತಿ ತಂದುಕೊಟ್ಟಿತ್ತು.



ಭಾಗ್ಯವಂತರು, ಅಮರ ಶಿಲ್ಪಿ ಜಕಣಾಚಾರಿ, ಅಣ್ಣ ತಂಗಿ, ಯಾರಿವನು... ಮುಂತಾದ ಸಿನಿಮಾಗಳಲ್ಲಿ ಅವರ ಅಭಿನಯ ವರ್ಣಿಸಲಸದಳ. ರಾಜ್‌ಕುಮಾರ್, ಎಂಜಿಆರ್, ಎನ್‌ಟಿಆರ್, ನಾಗೇಶ್ವರ ರಾವ್, ಶಿವಾಜಿ ಗಣೇಶನ್ ಸೇರಿದಂತೆ ಅಂದಿನ ಎಲ್ಲಾ ಸಿನಿ ದಿಗ್ಗಜರೊಡನೆ ನಾಯಕಿಯಾಗಿ ನಟಿಸಿದ ಖ್ಯಾತಿ ಇವರಿಗಿದೆ.

ಅಂದಹಾಗೆ, ಜನವರಿ 7,1938ರಂದು ಬೆಂಗಳೂರಿನಲ್ಲಿ ಜನಿಸಿದ್ದ ಬಿ. ಸರೋಜಾದೇವಿ ಮೂಲತಃ ಚನ್ನಪಟ್ಟಣ ತಾಲೂಕಿನವರು. ಅವರ ತಂದೆ ಭೈರಪ್ಪ ಪೊಲೀಸ್ ಇಲಾಖೆಯಲ್ಲಿ ಸೇವೆಗೈದವರು.

ಬಿ. ಸರೋಜಾದೇವಿ ಅವರು ತಮ್ಮ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಅವರು ತಮ್ಮ ಕಣ್ಣುಗಳನ್ನು ದಾನ ಮಾಡಿಯೇ ಉಸಿರು ಚಲ್ಲಿದ್ದಾರೆ. ಅವರ ಆಸೆಯಂತೆ ಇದೀಗ ಅವರ ಮಕ್ಕಳು ನೇತ್ರದಾನ ಮಾಡುವ ಮೂಲಕ ಇಬ್ಬರು ಅಂಧರ ಬಾಳಿಗೆ ಬೆಳಕಾಗಿದ್ದಾರೆ.

ಕತ್ತಲೆಯಲ್ಲಿ ಜೀವನ ನಡೆಸುತ್ತಿರೋ ಅಂಧರಿಗೆ ನೇತ್ರದಾನ ಮಾಡುವುದು ಪುಣ್ಯದ ಕೆಲಸ. ನೇತ್ರದಾನ ಮಾಡುವಂತೆ ವರನಟ ಡಾ. ರಾಜ್‌ಕುಮಾರ್ ಕೂಡ ಕರೆ ಕೊಟ್ಟಿದ್ದರಲ್ಲದೆ ತಮ್ಮ ಕಣ್ಣುಗಳನ್ನು ದಾನ ಮಾಡಿದ್ದರು. ಡಾ. ರಾಜ್‌ಕುಮಾರ್ ಹಾದಿಯನ್ನು ಅನುಸರಿಸಿ ಮಂದಿ ನೇತ್ರದಾನ ಮಾಡಿದ್ದಾರೆ, ಮಾಡುತ್ತಿದ್ದಾರೆ. ಅಣ್ಣಾವ್ರ ಹಾದಿಯಲ್ಲೇ ಸಾಗಿ ಬಂದ ಸರೋಜಮ್ಮನವರುಇಂದು ತಮ್ಮ ಕಣ್ಣುಗಳನ್ನು ದಾನ ಮಾಡಿ ಹೋಗಿದ್ದಾರೆ.




ಅಂದ ಹಾಗೆ, ಸರೋಜಾದೇವಿ ಅವರ ಅಂತ್ಯ ಸಂಸ್ಕಾರ ನಾಳೆ ಚನ್ನಪಟ್ಟಣ ತಾಲೂಕಿನ ಕಣ್ವ ಡ್ಯಾಮಿನ ಪಕ್ಕದಲ್ಲೇ ಇರೋ ದಶಾವರದಲ್ಲಿ ನಡೆಯಲಿದ್ದು, ಒಕ್ಕಲಿಗ ಸಂಪ್ರದಾಯದಂತೆ ಅವರ ಕುಟುಂಬಸ್ಥರು ಕಾರ್ಯ ನೆರವೇರಿಸಲಿದ್ದಾರೆ. ☯



ಸಿದ್ದಾರೂಢ, ಜಗದೀಶ ಹಾಗೂ ರಾಮಣ್ಣ ಅಲಿಯಾಸ್ ರಾಮಚಂದ್ರರ ಡೆಡ್‌ಬಾಡಿಗಳು

# ಕಲಬುರಗಿ ತ್ರಿಬಲ್ ಮರ್ಡರ್ ಗಂಡನ ಕೊಲೆಗೆ ರಿವೇಂಜ್ ಕಿಲ್ಲಿಂಗ್!

**ಕಲಬುರಗಿ**
✎ಬಿ.ವಿ. ಕುಲಕರ್ಣಿ

**ಇಸವಿ 2024ರಲ್ಲಿ ಕಲಬುರಗಿಯಲ್ಲಿ ರೌಡಿ ಸೋಮನಾಥನ ಕಗ್ಗೊಲೆಯಾಗಿತ್ತು. ಆವತ್ತು ಆತನ ಶವದ ಎದಿರು ರೋಷತಪ್ತಳಾಗಿ ನಿಂತಿದ್ದ ಪತ್ನಿ ಭಾಗ್ಯಶ್ರೀ- "ನನ್ನ ಗಂಡನ ಕೊಂದವರ ಕತೆ ಮುಗಿಸೋ ತನಕ ನಾನು ತಾಳಿ ಬಿಚ್ಚುವುದಿಲ್ಲ, ಮುಡಿ ಕಟ್ಟುವುದಿಲ್ಲ..." ಎಂದು ಶಪಥ ಮಾಡಿದ್ದಳಂತೆ! ಇದಿಗ ಕಲಬುರಗಿಯಲ್ಲಿ ಮೂರು ಹೆಣ ಬಿದ್ದು ಹೋಗಿವೆ!!**



ಭೀಕರವಾಗಿ ಹತ್ಯೆಯಾದ ಸಿದ್ದಾರೂಢ, ಜಗದೀಶ ಹಾಗೂ ರಾಮಣ್ಣ ಅಲಿಯಾಸ್ ರಾಮಚಂದ್ರ

ಗಂಡನ ಹತ್ಯೆ ಮಾಡಿದ ಹಂತಕರನ್ನು ಮುಗಿಸಿ ಮುಡಿ ಕಟ್ಟಿದ, ತಾಳಿ ಬಿಚ್ಚಿದ ಗರತಿ ಭಾಗ್ಯಶ್ರೀ ಕತೆಯಿದು!

ಕಳೆದ 2024ರಲ್ಲಿ ನವೆಂಬರ್ 11ನೇ ತಾರೀಖು ಕಲಬುರಗಿಯಲ್ಲಿ ಸೋಮನಾಥ ಅಲಿಯಾಸ್ ಸೋಮಶೇಖರ ಎಂಬ ರೌಡಿಶೀಟರ್ ಕಗ್ಗೊಲೆ ನಡೆದಿತ್ತು. ಆವತ್ತು ಶವಸಂಸ್ಕಾರ ಕಾರ್ಯ ನಡೆವಾಗ, ಅವನ ಪತ್ನಿ ಭಾಗ್ಯಶ್ರೀ, ತನ್ನ ಗಂಡನ ಕೊಂದವರನ್ನು ಮುಗಿಸುವತನಕ ತನ್ನ ಕೊರಳಲ್ಲಿರುವ ತಾಳಿಯನ್ನು ತೆಗೆಯುವುದಿಲ್ಲ! ಬಿಚ್ಚಿದ ಮುಡಿಯನ್ನು ಕಟ್ಟುವುದಿಲ್ಲ...!! ಎಂಬುದಾಗಿ ಶಪಥ ಮಾಡಿದ್ದಳಂತೆ. ಇದು ಅಂದು ಬ್ರೇಕಿಂಗ್ ನ್ಯೂಸ್ ಆಗಿತ್ತು. ಆದರೆ ರೌಡಿ ಸೋಮನಾಥನ ಕೊಂದು ಜೈಲಿಗೆ ಹೋಗಿದ್ದರಲ್ಲಾ, ಅವರಿಗೆ 'ಭಯ' ತರಿಸಿರಲಿಲ್ಲ. ಹೀಗಾಗಿ; ಜಾಮೀನಿನ ಮೇಲೆ ಹೊರಗಡೆ ಬಂದ ನಂತರವೂ ಅವರು 'ಎಚ್ಚರಿಕೆ'ಯಿಂದ ಇರದೆ ಆರಾಮವಾಗಿ ಓಡಾಡಿಕೊಂಡಿದ್ರು!



ಕಮೀಷನರ್ ಶರಣಪ್ಪ ಎಸ್. ಢಗೆ



ಪಿಐ ಸಂತೋಷ್ ಎಲ್. ತಟ್ಟೇಹಳ್ಳಿ

ಶಪಥಗೈದು ಕುಳಿತಿದ್ದ ರೌಡಿ ಸೋಮನಾಥನ ಪತ್ನಿ ಭಾಗ್ಯಶ್ರೀ ಈಗ ಒಂದೇ ದಿವಸ ಮೂವರ ಹೆಣ ಕೆಡವಿ ಗಹಗಹಿಸಿ ನಕ್ಕಿದ್ದಾಳೆ! ಈ ಕೊಲೆಗಳ ಇತಿಹಾಸವನ್ನು ಕೆದಕುವ ಮುನ್ನ ಭಾಗ್ಯಶ್ರೀ ಗಂಡ ಸೋಮನಾಥನ ಬಗ್ಗೆ ಸ್ವಲ್ಪ ಹೇಳಬಾಕಿದೆ.

**ಡಾಬಾ ದರೋಡೆ ಕೇಸ್!**

ಕಲಬುರಗಿ ಜಿಲ್ಲೆ ಹಾಗೂ ತಾಲ್ಲೂಕಿನ ಸಬ್ ಅರ್ಬನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಪಟ್ಟಣ ಗ್ರಾಮದ ಸಿದ್ಧಾರೂಢ ತಂದೆ ಶರಣಬಸಪ್ಪ ತುಗದಿ ಎಂಬಾತನು ದಿನಾಂಕ 25-04-2024ರ ರಾತ್ರಿ ತನ್ನ ಡಾಬಾದಲ್ಲಿ ವ್ಯಾಪಾರ ಮಾಡ್ತಾ ಕುಂತಿದ್ದಾಗ, ರೌಡಿ ಸೋಮನಾಥ ಅಲಿಯಾಸ್ ಸೋಮಶೇಖರ ಮತ್ತು ಅವನ ಸಹಚರರು ಎಂಟು ಮಂದಿ ಸದರಿ ಡಾಬಾಗೆ ನುಗ್ಗಿ ಮಾರಕಾಸ್ತ್ರತೋರಿಸಿ ಹೆದರಿಸಿ 2,25,000 ರೂ.ಗಳನ್ನು ದರೋಡೆ ಮಾಡಿಕೊಂಡು ಹೋಗಿದ್ದರು. ಸಿದ್ಧಾರೂಡನು ಈ ಬಗ್ಗೆ ಸಬ್ ಅರ್ಬನ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಅಲ್ಲಿನ ಪೊಲೀಸರು ಕ್ರೈಂ ನಂ. 79/2024, ಕಲಂ 109, 116, 120(ಬಿ) 395 ಐಪಿಸಿ ರೀತ್ಯಾ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸಿ ಸೋಮನಾಥ, ಅವತಾರ್ ಸಿಂಗ್, ರವಿಕುಮಾರ ಅಟ್ಟೂರ್ಕರ, ಸಾಗರ ಅಲಿಯಾಸ್ ಕೆಂಚ ರಾಠೋಡ, ಗುರುರಾಜ, ಶಿವಕುಮಾರ, ಸಂಗಮೇಶ್ವರ, ರಾಚಣ್ಣ, ಪ್ರಭುಲಿಂಗ, ಮಹೇಶ ಮುಂತಾದ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ತದನಂತರ ಇವರುಗಳು ಜಾಮೀನಿನ ಮೇಲೆ ಹೊರಗಡೆ ಬಂದು ಅಡ್ಡಾಡಿಕೊಂಡಿದ್ದು ಕೋರ್ಟ್‌ಗೆ ಅಲೆಯುತ್ತಿದ್ದರು.

**ಸೋಮನಾಥನ ಕಗ್ಗೊಲೆ!**

ಪರಿಸ್ಥಿತಿ ಹೀಗಿರುವಾಗ ದಿನಾಂಕ 11-11-2024ರಂದು ರೌಡಿಶೀಟರ್ ಸೋಮನಾಥ ಅಲಿಯಾಸ್ ಸೋಮ ಶೇಖರನು ತನ್ನ ಸ್ನೇಹಿತ ಶಂಕರ ಪರಸ್ತಿ ಎಂಬುವನ ಹೊಸ ಅಂಗಡಿಯ ಪೂಜೆಗೆಂದು ಹೋಗಿದ್ದು, ತಡರಾತ್ರಿವರೆಗೂ ಅಲ್ಲೇ ಪಾನಕಗೋಷ್ಠಿ ಮಾಡಿಕೊಂಡು ಕುಳಿತಿದ್ದಾಗ ರಾತ್ರಿ 2.30 ಗಂಟೆ ಸುಮಾರಿಗೆ ಸಿದ್ದಪ್ಪ ಅಲಿಯಾಸ್ ಸಿದ್ದಾರೂಢ ತನ್ನ ಸಹಚರರನ್ನು ಗುಂಪು ಕಟ್ಟಿಕೊಂಡು ಅಲ್ಲಿಗೆ ದಾಂಗುಡಿ ಇಟ್ಟು ಸೋಮನಾಥನನ್ನು ಮಾರಕಾಸ್ತ್ರಗಳಿಂದ ಕತ್ತರಿಸಿ ಕೊಂದಿದ್ದರು! ಈ ಸಂಬಂಧ ಕೊಲೆಯಾದ ರೌಡಿ ಸೋಮನಾಥನ ಪತ್ನಿ ಭಾಗ್ಯಶ್ರೀ ಕಲಬುರಗಿ ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಳು. ಕ್ರೈಂ ನಂ. 240/2024, ಕಲಂ 103(1), 189(2), 191(3), 190, 191(2) ಬಿಎನ್‌ಎಸ್ ಕಾಯ್ದೆ ಅಡಿಯಲ್ಲಿ ದೂರನ್ನು ದಾಖಲಿಸಿಕೊಂಡಿದ್ದ ಪೊಲೀಸರು ದಿನಾಂಕ 14-11-2024ರಂದು ಆರೋಪಿಗಳಾದ ಸಿದ್ದಾರೂಢ ತಂದೆ ಶರಣಪ್ಪ ತುಗದಿ, ಲಕ್ಷ್ಮಿಪುತ್ರ ತುಗದಿ, ಶರಣಪ್ಪ ತುಗದಿ, ಅಣ್ಣಾರಾಯ ತುಗದಿ, ಸಿದ್ದು ತುಗದಿ ಮುಂತಾದವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ರೌಡಿ ಸೋಮನಾಥನ ಭಾಗ್ಯಶ್ರೀ 'ಶಪಥ' ಮಾಡಿದ್ದು ಪೊಲೀಸರ ಗಮನಕ್ಕೆ ಬಂದಿತ್ತಲ್ಲಾ! ಅವರು ಹಿರಿಯ ಅಧಿಕಾರಿಗಳಿಗೆ ತಿಳಿಸಿ, ಎರಡೂ ಕಡೆಯವರನ್ನು ಠಾಣೆಗೆ ಕರೆಯಿಸಿ ಚರ್ಚಿಸಿ ಬುದ್ಧಿ ಹೇಳಿದ್ದರು. ಮುಂದೆ ಸೋಮನಾಥನ ಕೊಲೆ ಆರೋಪಿಗಳೆಲ್ಲಾ ಜಾಮೀನಿನ ಮೇಲೆ ಹೊರಗಡೆ ಬಂದ ಮೇಲೂ ಸಹ ಹಿರಿಯ ಅಧಿಕಾರಿಗಳು ಎರಡೂ ಕಡೆಯ ಪಾರ್ಟಿಗಳನ್ನು ಕರೆಯಿಸಿ ಮತ್ತೆ ಚರ್ಚಿಸಿ ಎಚ್ಚರಿಕೆ ನೀಡಿದ್ದರು. ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ದಿನಾಂಕ 15-02-2025ರಂದು ಈ ಮೀಟಿಂಗ್ ನಡೆದಿದ್ದು, (ಪಿಎಆರ್ ನಂ. 07/2025, ಕಲಂ 126 ಬಿಎನ್‌ಎಸ್) ಸಿದ್ದಾರೂಡ, ಅಣ್ಣಾರಾಯ ತುಗದಿ, ಶರಣಪ್ಪ ತುಗದಿ, ಜಗದೀಶ ತಂದೆ ಗೋಗಾಂವ ಮುಂತಾದವರಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಳ್ಳಲಾಗಿತ್ತು. ಆದರೆ ಸೋಮನಾಥನ ಪಾರ್ಟಿಯ ರಾಚಣ್ಣ ತಂದೆ ಶಿವಪುತ್ರಪ್ಪ ತಾಳಿಕೋಟಿ, ಈರಣ್ಣ ತಾಳಿಕೋಟಿ, ಕಾಂತು ತಾಳಿಕೋಟಿ, ನಾಗರಾಜ ತಾಳಿಕೋಟಿ ಮುಂತಾದವರಿಗೆ ಪೊಲೀಸ್ ನೋಟಿಸ್ ನೀಡಲಾಗಿದ್ದರೂ, ಅವರ್ಯಾರೂ ಠಾಣೆಗೆ ಬಂದು ಮುಚ್ಚಳಿಕೆ ಪತ್ರ ಬರೆದು ಕೊಟ್ಟಿರಲಿಲ್ಲವೆನ್ನಲಾಗಿದೆ!



ಆರೋಪಿ ಭಾಗ್ಯಶ್ರೀ



ಎ ವನ್ ಆರೋಪಿ ರಾಚಣ್ಣಾ



ರೈಟರ್ ಮಹಾಂತೇಶ್

**ತ್ರಿಬಲ್ ಮರ್ಡರ್**

ದಿನಾಂಕ 25-06-2025ರ ರಾತ್ರಿ ಸಿದ್ದಾರೂಢನ ಡಾಬಾದಲ್ಲಿ ಅವನೊಂದು ಆರು ಜನರಿದ್ದು ಪಾರ್ಟಿ ಮಾಡುತ್ತಾ ಇರುವಾಗ, ಮಧ್ಯರಾತ್ರಿ ಸುಮಾರು 12.30 ಗಂಟೆಗೆ ಭಾಗ್ಯಶ್ರೀಯ ಸೋದರರಾದ ರಾಚಣ್ಣ ತಾಳಿಕೋಟಿ, ಕಾಂತು ತಾಳಿಕೋಟಿ, ನಾಗರಾಜ ತಾಳಿಕೋಟಿ, ಈರಣ್ಣ ತಾಳಿಕೋಟಿ, ಬೀರಪ್ಪ ಪೂಜಾರಿ, ಯಲ್ಲಾಲಿಂಗ ಪೂಜಾರಿ, ಪ್ರಭುಲಿಂಗ, ಮಲ್ಲನಗೌಡ ಪಾಟೀಲ, ಬೋಸಗಾ ಮುಂತಾದವರೆಲ್ಲಾ ಡಾಬಾಗೆ ನುಗ್ಗಿ ಬಂದು ಮೊದಲಿಗೆ ಸಿದ್ದಾರೂಡನನ್ನು ಕತ್ತರಿಸಿದ್ದಾರೆ! ನಂತರ ಜಗದೀಶನ ಮೇಲೆ ಮುಗಿಬಿದ್ದು ಕತ್ತರಿಸಿ ಕೊಂದಿದ್ದಾರೆ! ಇವರಿಬ್ಬರ ಕೊಲೆಯಾಗುವಷ್ಟರಲ್ಲಿ ಇವರ ಸೋದರ ಅಣ್ಣಾರಾಯ ಕತ್ತಲೆಯಲ್ಲಿ ಓಡ ಕಿತ್ತಿದ್ದಾನೆ. ಉಳಿದವರೂ ಕೂಡ ಸಿಕ್ಕ ಸಿಕ್ಕ ಕಡೆಗೆ ಓಡಿ ಹೋಗಿದ್ದಾರೆ. ಸಿದ್ದಾರೂಡನ ಕಿರಿಯ ಸೋದರ ಅಣ್ಣಾರಾಯನ ಬೆನ್ನುಹಟ್ಟಿದ್ದ ಹಂತಕರು, ಆ ಕತ್ತಲೆಯಲ್ಲಿ ಸಿಕ್ಕಿಬಿದ್ದ ರಾಮಚಂದ್ರನನ್ನೇ ಅಣ್ಣಾರಾಯ ಅಂದುಕೊಂಡು ಬರ್ಬರವಾಗಿ ಕತ್ತರಿಸಿ ಕೊಂದಿದ್ದಾರೆ! ಡಾಬಾದ ಬಳಿ ಅಟ್ಯಾಕ್ ಮಾಡಿದ್ದು ಕೊಲೆಗಳಾಗಿದ್ದ ಬಗ್ಗೆ ಅಲ್ಲೇ ಹತ್ತಿರದಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿದ್ದ ಮಾಂತಯ್ಯಸ್ವಾಮಿ ಫೋನ್ ಮೂಲಕ ಸಿದ್ದಾರೂಡನ ತಂದೆ ಶರಣಬಸಪ್ಪನಿಗೆ ವಿವರಿಸಿದ್ದಾನೆ! ಅಲ್ಲದೆ, ಕತ್ತಲೆಯಲ್ಲಿ ತಪ್ಪಿಸಿಕೊಂಡು ಓಡಿದ್ದ ಅಣ್ಣಾರಾಯ ತನ್ನ ತಂದೆಗೆ ಮಾಹಿತಿ ನೀಡಿದ್ದನು. ತದನಂತರ, ಅಪ್ಪ ಮಗ ಎಲ್ಲರೂ ಪೊಲೀಸರ ಬಳಿ ತೆರಳಿ ಸುದ್ದಿ ಮುಟ್ಟಿಸಿರುತ್ತಾರೆ. ಘಟನಾ ಸ್ಥಳಕ್ಕೆ ಬಂದ ಪೊಲೀಸರು ಆ ಡಾಬಾ ಬಳಿ ಬಿದ್ದಿದ್ದ ಎರಡು ಹೆಣಗಳ ನೋಡಿ ಡಬಲ್ ಮರ್ಡರ್ ಆಗಿದೆ ಅಂತಲೇ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರಂತೆ. ಆನಂತರ ಅಲ್ಲಿಗೆ ಬಂದ ಡಾಗ್ ಸ್ಕ್ವಾಡ್ ಚಲ್ಲಿದ ರಕ್ತದ ಜಾಡು ಹಿಡಿದು ಹೊರಟಾಗ ದೂರದಲ್ಲಿ ಕೊಲೆಯಾಗಿ ಬಿದ್ದಿದ್ದ ಅಮಾಯಕ ರಾಮನ (ರಾಮಚಂದ್ರ) ಹೆಣ ಸಿಕ್ಕಿತ್ತು! ಅಲ್ಲಿಗೆ ತ್ರಿಬಲ್ ಮರ್ಡರ್ ಆಗಿರುವುದು ಖಚಿತವಾಗಿತ್ತು!

ಕಲಬುರಗಿ ನಗರದ ದಕ್ಷ ಪೊಲೀಸ್ ಕಮೀಷನರ್ ಡಾ. ಎಸ್.ಡಿ. ಶರಣಪ್ಪನವರ ಮಾರ್ಗದರ್ಶನದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಸಂತೋಷ್ ಎಲ್. ತಟ್ಟೇಪಳ್ಳಿ ಈ ಪ್ರಕರಣದ ತನಿಖೆ ಕೈಗೊಂಡು ಆರೋಪಿತರಾದ ರಾಚಣ್ಣ, ಈರಣ್ಣ, ನಾಗರಾಜ, ಲಕ್ಷ್ಮಿಕಾಂತ, ಸಿದ್ದು, ಭೀರಣ್ಣ ಪೂಜಾರಿ, ಪೀರೇಶ, ನಾಗರಾಜ, ವಿದ್ಯಾರ್ಥಿ, ಖಂಡೇರಾಯ, ಸಾಗರ, ರಾಚಣ್ಣ ಅಲಿಯಾಸ್ ಗಿಲ್ಲಿಗೌಡ, ಚಂದ್ರಕಾಂತ, ಪ್ರಭುಲಿಂಗ, ಯಲ್ಲಾಲಿಂಗ ಹಾಗೂ ಈ ಕೊಲೆಯ ಸೂತ್ರಧಾರಿಣಿ ಭಾಗ್ಯಶ್ರೀ ಸೇರಿದಂತೆ ಒಟ್ಟು 15 ಮಂದಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿರುತ್ತಾರೆ.

ಆರೋಪಿಗಳ ಪತ್ತೆ ಕಾರ್ಯದಲ್ಲಿ ಪಿಎಸ್‌ಐ ಬಸವರಾಜು, ರೈಟರ್ ಮಹಾಂತೇಶ್, ಪಿಸಿ ಮಂಜುನಾಥ, ಫಿರೋಜ, ಶಶಿಆಂತ, ಬಸವರಾಜ, ಶಿವರಾಜ ದೇವರಗುಡಿ, ಮಲ್ಲಿಕಾರ್ಜುನ ಹಾಗೂ ಮಹಿಳಾ ಪೇದೆ ವಿಟಾಬಾಯಿ ಮುಂತಾದವರು ಶ್ರಮಿಸಿದ್ದು, ಕಮೀಷನರ್ ಶರಣಪ್ಪ ಢಗೆ ಎಲ್ಲರನ್ನೂ ಪ್ರಶಂಸಿಸಿರುತ್ತಾರೆ. ☯

ಕಲಬುರಗಿ ಪಟ್ಟಣ ಕ್ರಾಸ್‌ನಲ್ಲಿರುವ 'ಡ್ರೈವರ್ ಡಾಬಾ' ಈಗ ಸೂತಕದ ಮನೆಯಂತಾಗಿ ಹೋಗಿದೆ. ರೌಡಿ ಸೋಮನಾಥ ಈ ಡಾಬಾಗೆ ನುಗ್ಗಿ ದರೋಡೆ ಮಾಡಿದ್ದರಿಂದಲೇ ಕೊಲೆಯಾದ! ಅವನನ್ನು ಕೊಂದ ತಪ್ಪಿಗೆ ಡಾಬಾ ಓನರ್ ಸಿದ್ದಾರೂಡ ಇವತ್ತು ಕೊಲೆಯಾಗಿದ್ದಾನೆ! ಗಂಡ ಮಾಡಿದ್ದು ಸರಿಯೋ ತಪ್ಪೋ ಎಂದು ಯೋಚಿಸದೆ ಜಿದ್ದಿಗೆ ಬಿದ್ದ ಗರತಿ ಭಾಗ್ಯಶ್ರೀ ಇಂದು ತನ್ನ ಸೋದರರ ಸಹಕಾರದಿಂದ ಸಿದ್ದಾರೂಡನ ಜೊತೆ ಅವನ ಸೋದರರನ್ನೂ ಆಹುತಿ ತೆಗೆದುಕೊಂಡಿದ್ದಾಳೆ! ಮೂರು ಮೂರು ಮಕ್ಕಳನ್ನು ಕಳೆದುಕೊಂಡ ಶರಣಬಸಪ್ಪ ತುಗದಿ ಈಗ ದ್ವೇಷದ ಜ್ವಾಲೆಯೊಳಗೆ ಕೊತಕೊತನೆ ಕುದಿಯುತ್ತಾ ಕುಳಿತಿದ್ದಾರೆ!

## ಈ ಕೊಲೆಗಳಿಗೆಲ್ಲಾ ಕೇಂದ್ರ ಬಿಂದು ಪಟ್ಟಣ ಕ್ರಾಸ್ ಡ್ರೈವರ್ ಡಾಬಾ!

ಕಿರಿಯ ಮಗ ಅಣ್ಣಾರಾಯ ಆ ಕತ್ತಲೆಯೊಳಗೆ ತಪ್ಪಿಸಿಕೊಂಡು ಓಡಿ ಊರು ಸೇರಿಕೊಳ್ಳದಿದ್ದರೆ, ಅವರ ವಂಶವೇ ಸರ್ವನಾಶವಾಗ್ತಿತ್ತು! ಈಗ ಅಪ್ಪ-ಮಗ ಇಬ್ಬರೂ ಸೇಡಿಗಾಗಿ ತಹತಹಿಸತೊಡಗಿದ್ದಾರೆ! ಮುಂದೇನೋ??! ಅಂದಹಾಗೆ; ಶರಣಬಸಪ್ಪ ತುಗದಿಯ ಮೂರು ಗಂಡು ಮಕ್ಕಳಿಗೂ ಮದುವೆ ಆಗಿತ್ತು. ಹಿರೇ ಮಗ ಸಿದ್ದಪ್ಪ ತುಗದಿ ಅಲಿಯಾಸ್ ಸಿದ್ದಾರೂಡನಿಗೆ ಬೆಳಮಗಿ ಗ್ರಾಮದಿಂದ ಶಿವಲೀಲಾ ಎಂಬ ಹೆಣ್ಣು ಮಗಳನ್ನು ತಂದು ಮದುವೆ ಮಾಡಲಾಗಿತ್ತು. ಇವರಿಗೆ ಎರಡು ಗಂಡು, ಒಂದು ಹೆಣ್ಣು ಮಗುವಿದೆ. ಎರಡನೇ ಮಗ ಲಕ್ಷ್ಮಿಪುತ್ರನಿಗೆ ಜಂಬಗಾ ಗ್ರಾಮದಿಂದ ವಿಜಯಲಕ್ಷ್ಮಿ ಎಂಬಾಕೆಯನ್ನು ತಂದು ಮದುವೆ ಮಾಡಲಾಗಿತ್ತು. ಇವರಿಗೆ ಮೂರು ಹೆಣ್ಣು ಮಕ್ಕಳಿವೆ. ಕಿರೀಮಗ ಅಣ್ಣಾರಾಯನಿಗೆ ಹಿರೇಮೂಳಕುಂದಾ ಗ್ರಾಮದಿಂದ ಸುಜಾತಳನ್ನು ತಂದು ಮದುವೆ ಮಾಡಲಾಗಿದೆ. ಇವರಿಗೆ ಸದ್ಯ ಒಂದು ಹೆಣ್ಣು ಮಗುವಿದೆ.

ಶರಣಬಸಪ್ಪನಿಗೆ ಹತ್ತು ಎಕರೆ ಜಮೀನಿದ್ದು ಎಲ್ಲರೂ ಅಲ್ಲಿ ಕೃಷಿ ಮಾಡಿಕೊಂಡು ಬದುಕು ಸವೆಸುತ್ತಿದ್ದಾರೆ. ಹಿರೇ ಮಗ ಸಿದ್ದಾರೂಡ ಪಟ್ಟಣ ಕ್ರಾಸ್‌ನಲ್ಲಿ 'ಡ್ರೈವರ್ ಡಾಬಾ' ಇಟ್ಟುಕೊಂಡು ಸ್ವಲ್ಪ ರೌಡಿಸಂ ಮಾಡ್ತಾಯಿದ್ದ! ಅಲ್ಲಿಗೆ ನುಗ್ಗಿ ರಾಬರಿ ಮಾಡಿದ್ದ ರೌಡಿ ಸೋಮನಾಥ ಮುಂದೆ ಸಿದ್ದಾರೂಡನಿಂದಲೇ ಹತ್ಯೆಯಾಗಿದ್ದ! ಈಗ ಸೋಮನಾಥನ ಪತ್ನಿ ಭಾಗ್ಯಶ್ರೀ ಶಪಥಕ್ಕೆ ತಾನೂ ಬಲಿಯಾಗಿ ಹೋಗಿದ್ದಾನೆ! ಅಂತೂ ಹೆಣಕ್ಕೆ ಹೆಣವೇ ಪ್ರತೀಕಾರ ಎಂಬುದು ಉತ್ತರ ಕರ್ನಾಟಕ ಭಾಗದಲ್ಲಿ ಮತ್ತೆ ಮತ್ತೆ ಪ್ರೂವ್ ಆಗ್ತಾನೇ ಇದೆ! ದುಃಖಕರ ಸಂಗತಿ ಏನೆಂದರೆ; ಇವರುಗಳ ಜಿದ್ದು-ದ್ವೇಷದ ದಳ್ಳುರಿಯಲ್ಲಿ ಸಂಬಂಧವೇ ಇಲ್ಲದ ರಾಮ ಅಲಿಯಾಸ್ ರಾಮಚಂದ್ರನ ಕೊಲೆಯಾಗಿದ್ದು... ☯




ಆರೋಪಿಗಳಾದ ಈರಣ್ಣ, ನಾಗರಾಜ್, ಲಕ್ಷ್ಮಿಕಾಂತ, ಸಿದ್ದಾರೂಡ, ಬೀರಣ್ಣಾ ಪೀರೇಶ, ನಾಗರಾಜ, ಖಂಡೇರಾಯ, ಸಾಗರ, ರಾಚಣ್ಣಾ, ಚಂದ್ರಕಾಂತ, ಪ್ರಭುಲಿಂಗ, ಯಲ್ಲಾಲಿಂಗ

# ಪತ್ನಿ ತೀರಿಕೊಂಡ ದಿನವೇ ತಾನೂ ಗುಂಡು ಹಾರಿಸಿಕೊಂಡು ಒಂದೇ ಚಿತೆಯಲ್ಲಿ ಭಸ್ಮವಾದ ನಿವೃತ್ತ ಕರ್ನಲ್!

ಇದು ಒಂದು ವಾರದ ಹಿಂದಿನ ಘಟನೆ.ಉತ್ತರ ಪ್ರದೇಶದ ಲಕ್ನೋದ ಒಂದು ಊರಿನಲ್ಲಿ ಉತ್ತಮ ಹಿನ್ನೆಲೆಯುಳ್ಳ ವೃದ್ಧ ತಂದೆಯೊಬ್ಬರು ತನ್ನ ಇಬ್ಬರು ಪುತ್ರರಿಗೆ ಪತ್ರವೊಂದನ್ನು ಬರೆದು.....ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು! ಪತ್ರವನ್ನು ಯಾಕೆ ಬರೆದರು.. ಮತ್ತು ಅದರಲ್ಲಿ ಏನು ಬರೆದರು... ಎಂಬುದನ್ನು ತಿಳಿದುಕೊಳ್ಳುವ ಮೊದಲು.....ಅವರ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳುವುದು ಮುಖ್ಯ.

ಗುಂಡು ಹಾರಿಸಿಕೊಂಡರಲ್ಲ ತಂದೆ, ಅವರು ಇಂಡಿಯನ್ ಆರ್ಮಿಯಲ್ಲಿ ಕರ್ನಲ್ ಹುದ್ದೆ ನಿಭಾಯಿಸಿ, ಸೈನ್ಯದಿಂದ ನಿವೃತ್ತರಾದವರು...!! ಅವರು ಲಕ್ನೋದ ಐಷಾರಾಮಿ ಕಾಲೋನಿಯಲ್ಲಿ ತಮ್ಮ ಪತ್ನಿಯೊಂದಿಗೆ ವಾಸಿಸುತ್ತಿದ್ದರು... ಅವರಿಗೆ ಇಬ್ಬರು ಗಂಡು ಮಕ್ಕಳಿದ್ದರು.



ಅವರಿಬ್ಬರೂ ದೂರದ ಅಮೆರಿಕದಲ್ಲಿ ವಾಸಿಸುತ್ತಿದ್ದರು. ಆ ತಂದೆ ತಾಯಿ ತಮ್ಮ ಮಕ್ಕಳನ್ನು ಬೆಳೆಸುವಲ್ಲಿ ಯಾವುದೇ ವಿಷಯದಲ್ಲೂ ಎಳ್ಳಿನಷ್ಟು ಕಡಿಮೆ ಮಾಡಲಿಲ್ಲ ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು ನಾನು....

ಆ ಮಕ್ಕಳು ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತಲೇ ಇದ್ದರು.ಓದಿದ ನಂತರ ಅವರು ಎಷ್ಟು ಸಮರ್ಥರಾದರು ಅಂದ್ರೆ, ಅವರಿಗೆ ವಿಶ್ವದ ಅತ್ಯಂತ ಪ್ರಸಿದ್ಧ ಕಾರ್ಪೊರೇಟ್ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು... ಒಳ್ಳೆಯ ಸಂಬಂಧ ನೋಡಿ ಮದುವೆಯನ್ನೂ ಮಾಡಿಸಿದರು. ಕಾಕತಾಳೀಯವಾಗಿ, ಇಬ್ಬರೂ ಸಹೋದರರು ಒಂದೇ ದೇಶದಲ್ಲಿ ವಾಸಿಸುತ್ತಿದ್ದರು, ಸಂಸಾರ ಸಮೇತ. ಪ್ರತ್ಯೇಕವಾಗಿ ಅವರವರ ಕುಟುಂಬದೊಂದಿಗೆ... (ಇಲ್ಲಿ ಹಿರಿಯ ಮಗನ ಹೆಸರು ಮನೋಜ್ ಕಿರಿಯ ಮಗನ ಹೆಸರು ಚೇತನ್. ಪ್ರೀತಿಯಿಂದ ಮುನ್ನ.. ಚಿಂಟು ಎನ್ನಲಾಗುತ್ತಿತ್ತು)

ಒಂದು ದಿನ ಇದ್ದಕ್ಕಿದ್ದಂತೆ ತಂದೆ ತನ್ನ ಇಬ್ಬರು ಮಕ್ಕಳಿಗೆ ಒಂದು ದುಃಖದ ಸುದ್ದಿಯನ್ನು ಕಣ್ಣೀರು ಬಂದರು ಅಳಲಾಗದ ಸ್ಥಿತಿಯಲ್ಲಿ ತಿಳಿಸಿದರು. ಮುನ್ನ..ಚಿಂಟು... ನಿಮ್ ತಾಯಿ ಈ ಭೂಮಿ ಬಿಟ್ಟು ಹೊರಟಳು (ತೀರಿಕೊಂಡಳು) ಅಂತ ಹೇಳಿದರು.

ತನ್ನ ಪತ್ನಿಯನ್ನು ಅಂದ್ರೆ, ಅವರ ತಾಯಿಯನ್ನು ಮಣ್ಣಿನಲ್ಲಿ ವಿಲೀನ ಮಾಡಲು ತನ್ನ ಮಕ್ಕಳು ಬರುತ್ತಾರೆ ಎಂದು ಆ ತಂದೆ ಕಾಯುತ್ತಿದ್ದರು... ಒಂದು ದಿನದ ನಂತರ ಕಿರಿಯ ಮಗ ಚೇತನ್ ಬಂದನು, ಅವನ ಕುಟುಂಬ ಸಮೇತ.

ಆ ವೃದ್ಧ ತಂದೆ ಚಿಂಟುಗೆ ಕೇಳಿದ...ಮುನ್ನಾ ಏಕೆ ಬರಲಿಲ್ಲ ಇನ್ನು? ನಿಮ್ ಕರೆ ಬಂತು ಅಂತ ಮೊದಲ ವಿಮಾನದಲ್ಲಿ ನಾವುಗಳು ಹತ್ತಿ ಬಂದೆವು.... ಮನೋಜಣ್ಣ ಬರ್ತನೊ ಇಲ್ವೋ ಗೊತ್ತಿಲ್ಲ ಅಂದ...

ಹಿಂದೂ ಧರ್ಮದ ಪ್ರಕಾರ ಹಿರಿಯ ಮಗನ ಆಗಮನವೇ ಮುಖ್ಯವಾಗಿರುತ್ತೆ,ಅಂತಿಮ ಕಾರ್ಯ ಮಾಡಲು. ಈ ಬಗ್ಗೆ ತಂದೆ ಯೋಚಿಸುತ್ತಿರುವಗಲೇ.. ಕಿರಿಯ ಮಗನ ಬಾಯಿಂದ ಸತ್ಯವೊಂದು ಹೊರಬಿತ್ತು... ತಾಯಿ ಸತ್ತಾಗ ನೀನು ಹೋಗು, ತಂದೆ ಸತ್ತರೆ ನಾನು ಹೋಗುತ್ತೇನೆ ಎಂದು ಮನೋಜಣ್ಣ ಹೇಳಿದ್ದ... ಅದಕ್ಕೆ ಅವನು ಬರೋಲ್ಲ ಅನಿಸುತ್ತೆ...ಅಂತ ತನ್ನ ತಂದೆಗೆ ಹೇಳಿದನು!! ತಕ್ಷಣವೇ ಕರ್ನಲ್ ಸಾಹೇಬ್ರು (ತಂದೆ) ಕೋಣೆಯೊಳಗೆ ಹೋದರು.... ಅವರು ಹಲವಾರು ಬಾರಿ ತನ್ನನ್ನು ತಾನು ಪ್ರಶ್ನೆ ಮಾಡುತ್ತ ... ಯಾವುದೋ ಒಂದು ನಿರ್ಧಾರ ಮಾಡಿ... ಕೆಲವು ಸಾಲುಗಳ ಪತ್ರವನ್ನು ಬರೆದರು..

**ಪತ್ರ ಹೀಗಿತ್ತು...**

ಪ್ರೀತಿಯ ಮಗನೆ ಚೇತನ್, ನಿಮ್ಮ ತಾಯಿ ಮತ್ತು ನಾನು ನಿಮ್ಮನ್ನು ಸಾಕಷ್ಟು ಆಸೆ ನಿರೀಕ್ಷೆಗಳೊಂದಿಗೆ ಬೆಳೆಸಿದ್ದೇವೆ.... ಪ್ರಪಂಚದ ಎಲ್ಲಾ ಸಂತೋಷವನ್ನು ನೀಡಿದ್ದೇವೆ... ದೇಶ ಮತ್ತು ವಿದೇಶದ ಅತ್ಯುತ್ತಮ ಸ್ಥಳದಲ್ಲಿ ಶಿಕ್ಷಣವನ್ನು ನೀಡಿದ್ದೇವೆ... ನಿನ್ನ ತಾಯಿ ಕೊನೆಯುಸಿರೆಳೆದಾಗ ನಾನು ಅವಳ ಹತ್ತಿರ ಇದ್ದೆ.... ಸಾಯುತ್ತಿರುವಾಗ ನಿಮ್ಮಿಬ್ಬರ ಮುಖವನ್ನು ಒಮ್ಮೆ ನೋಡಬೇಕೆಂದು ಆಸೆಪಟ್ಟು ನಿಮ್ಮಿಬ್ಬರನ್ನು ತನ್ನ ತೋಳುಗಳಲ್ಲಿ ಹಿಡಿದು ಮುದ್ದಾಡಬೇಕೆಂದುಕೊಂಡಿದ್ದಳು... ನೀವು ಇನ್ನು ಚಿಕ್ಕ ಮಕ್ಕಳೇ ಅವಳಿಗೆ...ಅದೇ ಮುಗ್ಧ ಮನಸ್ಸಿನ ಮುನ್ನಾ ಮತ್ತು ಚಿಂಟು....ಅವಳು ಸತ್ತಾಗ, ಅವಳ ಮೃತದೇಹದ ಬಳಿ ನೀವು ಬರೋತನಕ ಕಾಯಲು ನಾನಿದ್ದೆ.... ನನಗೆ ಸಾಂತ್ವನ ಹೇಳಲು ನನ್ನ ಮಕ್ಕಳು ನೀವ್ ಇದ್ದೀರಿ ಅಂತ ಅನಿಸಿತು.... ಆದ್ರೆ..ಈಗ ವಾಸ್ತವ ಅರಿವಾಗಿದೆ...ನಾನು ಒಂಟಿಯಾದೆ ನನ್ನ ನೋಡಿಕೊಳ್ಳೋರು ಯಾರು ಇಲ್ಲ...ನನ್ನ ಸಾವಿನ ನಂತರ, ನನ್ನ ಶವವನ್ನು ನಿಮಗಾಗಿ ಕಾಯಲು ಯಾರೂ ಇರುವುದಿಲ್ಲ ಅಂತ....

ಅದರಿಂದ ಅತ್ಯಂತ ಮುಖ್ಯವಾದ ವಿಷಯವೆ ಮಗನೇ ಚೇತನ್ ನಿನಗೆ.... ನನ್ನ ಮೃತ ದೇಹವನ್ನು ವಿಲೇವಾರಿ ಮಾಡಲು ನಿಮ್ಮ ಅಣ್ಣ ಬರುವುದು ನನಗೆ ಇಷ್ಟವಿಲ್ಲ... ಆದುದರಿಂದ ನೀನು ನಿನ್ನ ತಾಯಿಯ ಶವದ ಪಕ್ಕದಲ್ಲೇ ನನ್ನ ಶವವನ್ನು ಪಂಚ ಭೂತಗಳಲ್ಲಿ ವಿಲೀನ... ಮಾಡಿ... ವಾಪಸ್ ಹೋಗುವುದು ಉತ್ತಮ. ಶ್ರಾದ್ಧಾ ಕಾರ್ಯ ಮಾಡದೆ ಇದ್ರು ಚಿಂತೆ ಇಲ್ಲ.. ಯಾವತ್ತು ಪ್ರೇತವಾಗಿ ಕಾಡೊಲ್ಲ ನಿಮ್ಮನ್ನ ನಾವುಗಳು.... ನನ್ನ ಜೀವನದುದ್ದಕ್ಕೂ ಸಂಪತ್ತಿನ ಜೊತೆಗೆ ಗೌರವ ಸಂಪಾದಿಸಿದೆ.... ಆದರೆ,ಸಮಾಜಕ್ಕೆ ಅಸಂಸ್ಕೃತ...ಅಸಭ್ಯ.. ಅನಾಗರಿಕ.. ಪ್ರಜೆಗಳನ್ನ ನನ್ನ ಮಕ್ಕಳ ರೂಪದಲ್ಲಿ ನೀಡಿದ್ದರಿಂದ ನನಗೆ ಬದುಕುವ ಹಕ್ಕಿಲ್ಲ...!!! ಹೌದು,ನೀವು ಅಮೇರಿಕಾಕ್ಕೆ ಹೋಗಿ ನೆಲೆಸದೇ ಇದ್ದಿದ್ದರೆ ಒಳ್ಳೇದಿತ್ತು..... ಈ ತಪ್ಪಿಗೆ ಪ್ರಾಯಶ್ಚಿತ್ತವಾಗಿ... ಈ ಕೆಳಗಿನ ನಿರ್ಧಾರ ಮಾಡಿರುವೆ.

ನನ್ನ ಪದಕಗಳು... ಪಾರಿತೋಷಕಗಳು ಮತ್ತು ಸರ್ಕಾರ ನೀಡಿದ ಭೂಮಿಯನ್ನು ಮತ್ತು ಸೇನೆಗೆ ಸಂಬಂಧಿಸಿದ ಎಲ್ಲ ವಸ್ತುಗಳನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕು ಮತ್ತು ಮನೆಯಲ್ಲಿರುವ ಹಣವನ್ನು ಕೆಲಸದವರಿಗೆ ಹಂಚಬೇಕು ಎಂಬುದು ನನ್ನ ಕೊನೆಯ ಆಸೆ... ಮತ್ತು ಬ್ಯಾಂಕ್ ಠೇವಣಿ ಇಟ್ಟಿರುವ ಹಣದ ಅರ್ಧ ಭಾಗವನ್ನು ವೃದ್ಧಾಪ್ಯ ಸೇವಾ ಕೇಂದ್ರಕ್ಕೆ ಮತ್ತು ಅರ್ಧವನ್ನು ಸೈನಿಕ ಕಲ್ಯಾಣ ನಿಧಿಗೆ ನೀಡಬೇಕು.

ಇಂತಿ ನಿಮ್ಮ ತಂದೆ

(ಕೋಣೆಯಿಂದ ಢಂ ಸದ್ದು ಕೇಳಿಸಿತು.... ಕರ್ನಲ್ ಸಾಹೇಬರು ಗುಂಡು ಹಾರಿಸಿಕೊಂಡರು)

ಪ್ರಿಯ ಓದುಗರೇ... ಈ ಘಟನೆ ಏಕೆ ಸಂಭವಿಸಿತು, ಅದಕ್ಕೆ ಕಾರಣವೇನು? ಯಾರಾದರೂ ತಪ್ಪಿ ತಸ್ಥರೋ ಇಲ್ಲವೋ? ಅದರ ಬಗ್ಗೆ ನಾನು ಏನನ್ನು ಹೇಳಲಾರೆ... ಇದು ಕಾಲ್ಪನಿಕ ಕಥೆಯಲ್ಲ, ಇದು ಸಂಪೂರ್ಣ ಸತ್ಯ ಘಟನೆ... ☯

# ಚನ್ನಪಟ್ಟಣದ ಕೆರೆಗಳ ಸ್ಥಿತಿ-ಅಧೋಗತಿ.... ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ರೌಂಡ್ಸ್

ರಾಮನಗರ

✍ ಶಾಂತರಾಜು ಜಿ. ಕಲ್ಲಹಳ್ಳಿ



ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ

ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ಕೆರೆಗಳ ಸ್ಥಿತಿ-ಗತಿಗಳು, ಇದರಿಂದ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿಯಲು ಭೇಟಿ ನೀಡಿದ್ದು, ಈ ಹಿಂದೆ ರಾಮನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ ಅಹವಾಲುಗಳು ಸಲ್ಲಿಕೆಯಾಗಿದ್ದವು ಮತ್ತು ಪತ್ರಿಕಾ ಮಾಧ್ಯಮದಲ್ಲಿ ವರದಿ ಪ್ರಕಟವಾಗಿದ್ದವು. ಕೆಲವೊಂದು ಕೆರೆಗಳಲ್ಲಿ ಮೀನುಗಳು ಮರಣ ಹೊಂದಿದ್ದ ಬಗ್ಗೆಯೂ ಲೋಕಾಯುಕ್ತಕ್ಕೆ ಕಂಡು ಬಂದಿತ್ತು. ಈ ಎಲ್ಲಾ ಆಧಾರಗಳ ಮೇಲೆ ಸ್ವಯಂ ಪ್ರೇರಿತ ದೂರುಗಳನ್ನು ದಾಖಲಿಸಿಕೊಳ್ಳಲಾಗಿತ್ತು. ಅವುಗಳನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಭೇಟಿ ನೀಡಿರುವುದಾಗಿ ತಿಳಿಸಿದ ರಾಜ್ಯ ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ, ಕೊಡ್ಲೂರು ಕೆರೆ ಸೂಕ್ತ ರೀಕಿಯಲ್ಲಿ ನಿರ್ವಹಣೆಯಾಗಿಲ್ಲ. ಮೇಲ್ನೋಟಕ್ಕೆ ಸಾಕಷ್ಟು ಒತ್ತುವರಿ


ಅಧಿಕಾರಿಗಳ ಜೊತೆ ಕೆರೆಗಳ ವೀಕ್ಷಣೆ ಮಾಡುತ್ತಿರುವ ಉಪ ಲೋಕಾಯುಕ್ತ ಫಣೀಂದ್ರ

ಯಾಗಿರುವುದು ಕಂಡು ಬಂದಿದೆ. ಊರಿನಿಂದ ಚರಂಡಿ ನೀರು ಕೆರೆಗೆ ಬಿಡುತ್ತಿರುವುದರಿಂದ ಕೆರೆಯ ನೀರು ಕಲುಷಿತವಾಗಿದೆ. ಇದೇ ರೀತಿ ಮುಂದುವರೆದಲ್ಲಿ ಈ ಕೆರೆಯ ನೀರು ಯಾವುದಕ್ಕೂ ಉಪಯೋಗ ಬಾರದಂತೆ ತ್ಯಾಜ್ಯದ ನೀರಾಗಲಿದೆ. ಈ ಬಗ್ಗೆ ಪರಿಶೀಲಿಸಲಾಗಿ 94 ಕೋಟಿ ರೂ.ಗಳ ಅನುಧಾನ ಈಗಾಗಲೇ ಈ ಕೆರೆಗೆ ಮಂಜೂರಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಊರಿನಿಂದ ಬರುವ ಚರಂಡಿ ನೀರು ಸ್ಥಾಪಿಸಲಾಗಿರುವ ವೆಟ್ ವೆಲ್‌ನಲ್ಲಿ ಶೋಧನೆಯಾಗಿ, ಸಂಸ್ಕರಣೆಯಾಗಿ ಆನಂತರ ಕೆರೆಗೆ ನೀರು ಬಿಟ್ಟಲ್ಲಿ ಶುದ್ಧಿಗೊಂಡ ನೀರು ಕೆರೆಗೆ ಹೋಗುತ್ತದೆ. ಆ ನೀರು ಇತರೆ ಉಪಯೋಗಕ್ಕೆ ಬಳಸಬಹುದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೊದಲು ಅಧಿಕಾರಿಗಳು ಕೆರೆಯನ್ನು ಅಳತೆ ಮಾಡಬೇಕು. ಎಲ್ಲೆಲ್ಲಿ ಒತ್ತುವರಿಯಾಗಿದೆ ಅದನ್ನು ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಕೆರೆಯಲ್ಲಿ ಬಹಳಷ್ಟು ಹೂಳು ತುಂಬಿದೆ, ಗಿಡಗಂಟೆಗಳು ಬೆಳೆದು ನಿಂತಿದೆ. ಇದರಿಂದ ಕೆರೆ ಹರಡಲು ಸಾಧ್ಯವಾಗುವುದಿಲ್ಲ.


ಡಿಸಿ ಮತ್ತು ಎಂಐ ಕೊಟ್ರೇಶ್ ಎಇಇ ಜೊತೆ ಚರ್ಚೆ


ಇದೆಲ್ಲವನ್ನು ಸ್ವಚ್ಛ ಮಾಡಿ ಕೆರೆಯನ್ನು ಅಭಿವೃದ್ಧಿಪಡಿಸಲು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿಕೊಂಡು ಶೀಘ್ರವಾಗಿ ಈ ಸಮಸ್ಯೆಯನ್ನು ಪರಿಹರಿಸುವಂತೆ ಸಂಬಂಧಿಸಿದ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ಕಾರದಿಂದ ಕೆರೆಗಳ ಅಭಿವೃದ್ಧಿಗೆ ಅನುಧಾನ ಮಂಜೂರು ಮಾಡಲು ಶಿಫಾರಸ್ಸು ಮಾಡಲಾಗುವುದು. ಕೂಡ್ಲೂರಿನ ಶ್ರೀರಾಮ ದೇವಸ್ಥಾನದ ಅಭಿವೃದ್ಧಿಗಾಗಿ ಹಣ ಮಂಜೂರು ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಈವರೆಗೂ ಅನುಧಾನ ಮಂಜೂರಾಗಿರುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲಿಸಿ, ದೇವಸ್ಥಾನ ಜೀರ್ಣೋದ್ಧಾರ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ ಎಂದ ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರರವರು ಈಗಾಗಲೇ ಚನ್ನಪಟ್ಟಣ ತಾಲ್ಲೂಕಿನಲ್ಲಿ ಏಳು ಕೆರೆಗಳ ಒತ್ತುವರಿ ಸಂಬಂಧಿಸಿದಂತೆ, ಲೋಕಾಯುಕ್ತದಿಂದ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದು, ಒತ್ತುವರಿ ತೆರವುಗೊಳಿಸುವವರೆಗೂ ನಾನು ಸುಮ್ಮನಿರುವುದಿಲ್ಲ ಎಂದರು. ನಗರ ವ್ಯಾಪ್ತಿಯಲ್ಲಿರುವ ರಾಮಮ್ಮನ ಕೆರೆ, ಶೆಟ್ಟಿಹಳ್ಳಿ ಕೆರೆ, ಕುಡಿ ನೀರು ಕಟ್ಟೆ ಕೆರೆಗಳಿಗೆ ತ್ಯಾಜ್ಯ ನೀರು ಹೋಗಿ ಮಲಿನವಾಗಿದೆ. ರೋಗಗಳು ಹರಡು ಪ್ರಶಸ್ತ ತಾಣಗಳಾಗಿ ಪರಿವರ್ತನೆಯಾಗಿವೆ. ನಗರಸಭೆ, ಅಧಿಕಾರಿಗಳು ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲದಿರುವುದು ಗಮನಕ್ಕೆ ಬಂದಿದೆ. ಎರಡು ತಿಂಗಳು ಸಮಯದ ಅವಕಾಶ ಕೊಟ್ಟಿದ್ದೇನೆ. ಅಷ್ಟರಲ್ಲಿ ತ್ಯಾಜ್ಯ ತೆರವುಗೊಳಿಸುವಂತೆ ಸೂಚಿಸಿದ್ದೇನೆ, ಶೆಟ್ಟಿಹಳ್ಳಿ ಕೆರೆ ಸುಮಾರು 2.5 ಎಕರೆ ಒತ್ತುವರಿಯಾಗಿದೆ. ಇಲ್ಲಿ ನಗರಸಭೆಯವರು ಕಟ್ಟಡ ತ್ಯಾಜ್ಯವನ್ನು ಸಹ ತಂದು ಸುರಿದು ಮುಚ್ಚುತ್ತಿರುವ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಕೆಲವರು ನ್ಯಾಯಾಲಯದಲ್ಲಿ ಪ್ರಕರಣ ಸಹ ದಾಖಲಿಸಿ ತಡೆಯಾಜ್ಞೆ ತಂದಿರುವ ಮಾಹಿತಿ ಇದೆ. ಆ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಧಿಕಾರಿಗಳು ಮುಂದಾಗಿಲ್ಲ. ಶೀಘ್ರವಾಗಿ ತಡೆಯಾಜ್ಞೆ ತೆರವುಗೊಳಿಸಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ನಗರದ ವ್ಯಾಪ್ತಿಯಲ್ಲಿ ಯುಜಿಡಿ ಕಾಮಗಾರಿಕೆಯೇ ನಡೆದಿಲ್ಲ. ಇದು ಕೆರೆಗಳ ಕೊಳಕಾಗಲು ಪ್ರಮುಖ ಕಾರಣ, ಒಳ ಚರಂಡಿ ಕಾಮಗಾರಿಗಾಗಿ ಈಗ ಅನುದಾನಕ್ಕಾಗಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿರುವುದಾಗಿ ಅಧಿಕಾರಿಗಳು ಹೇಳುತ್ತಾರೆ. ಏತಕ್ಕೆ ಅನುದಾನ ಬಿಡುಗಡೆಯಾಗಿಲ್ಲ ಎಂಬ ಬಗ್ಗೆ ಮಾಹಿತಿ ಕೇಳಿದ್ದೇನೆ. ಈ ಸಂಬಂಧ ನಾನು ಸಹ ಸರ್ಕಾರಕ್ಕೆ ವರದಿ ನೀಡುತ್ತೇನೆ. ಹಾಗೆಯೇ ಕುಡಿ ನೀರು ಕಟ್ಟೆ, ರಾಮಮ್ಮನ ಕೆರೆಗಳೂ ಸಹ ತ್ಯಾಜ್ಯದಿಂದ ಮಲಿನವಾಗಿವೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಹದಿನೈದು ದಿನಗಳಲ್ಲಿ ತ್ಯಾಜ್ಯ ತೆರವುಗೊಳಿಸಲು ಮುಂದಾಗಬೇಕು. ತೆಗೆದುಕೊಂಡಿರುವ ಕ್ರಮದ ಬಗ್ಗೆ ನನಗೆ ಮಾಹಿತಿ ನೀಡಬೇಕು. ಸಂಬಂಧಿಸಿದ ಯೋಜನಾ ನಿರ್ದೇಶಕರು ಇದರ ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚನೆ ನೀಡಿದ್ದೇನೆ. ದಾಖಲಿಸಿಕೊಂಡಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಮತ್ತೊಂದು ಕಣ್ವ ನದಿ ಪಾತ್ರವೂ ಸಹ ತನ್ನ ಅಸ್ತಿತ್ವ ಕಳೆದುಕೊಂಡಿದೆ. ಕಸವನ್ನು ನದಿ ಪಾತ್ರದಲ್ಲಿ ಹಾಕುತ್ತಿರುವುದನ್ನು ಗಮನಿಸಿದ್ದೇನೆ. ಹಾಗೆಯೇ ನದಿ ಪಾತ್ರದಲ್ಲಿ ಗಿಡಗಂಟೆಗಳು ಬೆಳೆದುಕೊಂಡು ನದಿಯೇ ಇಲ್ಲದಂತಾಗಿದೆ. ಚೆಕ್‌ಡ್ಯಾಂ ಕೆಳಗಿರುವ ಪೈಪುಗಳು ಕಸದಿಂದ ತುಂಬಿಕೊಂಡಿವೆ. ಅವುಗಳನ್ನು ತೆರವುಗೊಳಿಸಲು ಸೂಚನೆ ನೀಡಿದ್ದೇನೆ. ನಗರ ಪ್ರದೇಶದ ವ್ಯಾಪ್ತಿಯಲ್ಲಿರುವ ಕೆರೆಗಳು ಮಲಿನವಾಗಿರುವುದರಿಂದ ಅಲ್ಲಿ ಮೀನು ಸಾಕಾಣಿಕೆಗೆ ಅವಕಾಶ ನೀಡದಿರಲು ಸೂಚಿಸಿದ್ದೇನೆ. ಇದು ಮೀನುಗಳು ಸೇರಿದಂತೆ ಅವುಗಳನ್ನು ಸೇವಿಸುವವರ ಆರೋಗ್ಯದ ಮೇಲೆಯೂ ವ್ಯತಿರಿಕ್ತ ಪರಿಣಾಮು ಬೀರುತ್ತದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಒಂದು ಸಮಿತಿ ರಚನೆ ಮಾಡಲಾಗುವುದು, ಈ ರೀತಿ ಸಮಿತಿ ಒತ್ತುವರಿಯಾಗಿರುವ ಹಾಗೂ ನಂತರ ತೆಗೆದುಕೊಂಡ ಕ್ರಮಗಳ ಬಗ್ಗೆ ನಿಗಾ ವಹಿಸಲಿದೆ. ನಾನೂ ಸಹ ಪ್ರತಿ ಹದಿನೈದು ದಿನಗಳಿಗೊಮ್ಮೆ ವಿವರ ಪಡೆಯುತ್ತೇನೆ. ಈ ತಾಲ್ಲೂಕಿನಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಎಲ್ಲಿ ಕೆರೆಗಳು ಒತ್ತುವರಿ

☞ 14


ಕೊಡ್ಲೂರು ಕೆರೆಯಲ್ಲಿ ಗಿಡ ಗಂಟೆಗಳು ಬೆಳೆದಿರುವುದು


ಪಟ್ಟಣದ ಶೆಟ್ಟಿಹಳ್ಳಿ ಕೆರೆ


ಚನ್ನಪಟ್ಟಣ ಶಾಸಕ ಸಿ.ಪಿ. ಯೋಗೇಶ್ವರ್



ಡಿಸಿ ಮತ್ತು ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿರುವುದು


ಎಂಐಸಿಎಪಿಎ ಅಧ್ಯಕ್ಷ ರಘುನಂದನ್ ರಾಮಣ್ಣ ಬಿ.

## ಕೆರೆಯ ಅಭಿವೃದ್ಧಿ ಯಾವಾಗ...?

"ಚನ್ನಪಟ್ಟಣದ ಶೆಟ್ಟಿಹಳ್ಳಿ ಕೆರೆಯ ಒತ್ತುವರಿ ತೆರವು ಮಾಡುವ ಜೊತೆಗೆ ಕೆರೆಯನ್ನು ಸ್ವಚ್ಛತೆ ಮಾಡಿ ಕೆರೆಗೆ ಬರುವ ತ್ಯಾಜ್ಯದ ನೀರನ್ನು ಸಂಪರ್ಕ ಕೊಟ್ಟು ಕೆರೆಗೆ ಹೊಸ ನೀರನ್ನು ತುಂಬಿಸಿ ಬೋಟಿಂಗ್ ವ್ಯವಸ್ಥೆ, ವಾಕಿಂಗ್ ಪಾರ್ಕ್ ನಿರ್ಮಾಣ ಮಾಡಲು ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ ಎಂದು ಬಿಎಂಐಸಿಎಪಿಎ ನಿಗಮದ ಅಧ್ಯಕ್ಷ ರಘುನಂದನ್ ರಾಮಣ್ಣ ಉಪ ಚುನಾವಣೆ ಸಂದರ್ಭದಲ್ಲಿ ಹೇಳಿದ್ದರು. ಈ ಯೋಜನೆಗಾಗಿ ಬಿಎಂಐಸಿಎಪಿಎ ಯಿಂದ 9 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್‌ರವರು ಸಹ ಹೇಳಿದ್ದರು. ಆದರೆ ಉಪ ಚುನಾವಣೆ ಮುಗಿದು ಏಳೆಂಟು ತಿಂಗಳು ಕಳೆದರೂ ಈ ಕೆರೆಯ ಅಭಿವೃದ್ಧಿ ಬಗ್ಗೆ ಯಾರೊಬ್ಬರೂ ಕ್ರಮಕ್ಕೆ ಮುಂದಾಗಿಲ್ಲ ಎಂದು ಚನ್ನಪಟ್ಟಣದ ಪಟ್ಟಣದ ಜನತೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಚನ್ನಪಟ್ಟಣದ ಶೆಟ್ಟಿಹಳ್ಳಿ ಕೆರೆಯ ಒತ್ತುವರಿ ಸ್ಥಿತಿ


ಚನ್ನಪಟ್ಟಣದ ಕೂಡ್ಲೂರು ಕೆರೆ

**ವೇಶ್ಯಾವಾಟಿಕೆ ದಂಧೆ ಮೂಲಕವೇ ಹೈಫೈ ಜೀವನ ಕಟ್ಟಿಕೊಂಡಿರುವ ಕೆಲವರು ಅದನ್ನು ಬೇರೆ, ಬೇರೆ ರೀತಿಯಲ್ಲಿ ನಡೆಸುತ್ತಾ ಕೈತುಂಬಾ ಹಣ ಸಂಪಾದಿಸಿಕೊಂಡು ಜಾಲಿಯಾಗಿದ್ದಾರೆ. ಯಾವುದೋ ಅಮಾಯಕ ಹೆಣ್ಣು ಮಕ್ಕಳಿಗೆ ಹಣದ ಆಮಿಷವೊಡ್ಡಿ ಈ ದಂಧೆಗೆ ಬಳಸಿಕೊಳ್ಳುತ್ತಿದ್ದು ಅವರ ಮೂಲಕವೇ ಇವರು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ಮೈಸೂರಿನ ಹೊರವಲಯದಲ್ಲಿ ಹೊಸ ಬಡಾವಣೆಗಳನ್ನೇ ಟಾರ್ಗೆಟ್ ಮಾಡಿದ್ದು ಅಲ್ಲಿನ ಹೊಸ ಮನೆಗಳನ್ನು ಬಾಡಿಗೆಗೆ ಪಡೆದುಕೊಂಡು ಅಲ್ಲಿ ತಮ್ಮ ದಂಧೆ ನಡೆಸುತ್ತಾರೆ. ಜನರಿಗೆ ಈ ಬಗ್ಗೆ ಸುಳಿವು ಸಿಗುತ್ತಿದ್ದಂತೆಯೇ ಅಲ್ಲಿಂದ ಎಸ್ಕೇಪ್ ಆಗಿಬಿಡುತ್ತಾರೆ.**





# ಮೈಸೂರಿನ ಹೊರವಲಯದ ಮನೆಯಲ್ಲಿ ಮಾಂಸ ದಂಧೆ!

## ಮೈಸೂರು

✍ ಬಿ.ಎಂ. ಲವಕುಮಾರ್

ಮೈಸೂರಿನಲ್ಲಿ ವೇಶ್ಯಾವಾಟಿಕೆಯನ್ನು ತಡೆಯಬೇಕೆಂದು ಹಲವು ರೀತಿಯ ಕ್ರಮಗಳನ್ನು ಕೈಗೊಂಡಿದ್ದರೂ ಅದನ್ನು ಹತ್ತಿಕ್ಕುವುದು ಇಲ್ಲಿವರೆಗೆ ಸಾಧ್ಯವಾಗಿಲ್ಲ, ಏಕೆಂದರೆ ಈ ದಂಧೆ ನಡೆಸುವವರು ತಮ್ಮದೇ ಆದ ಬೇರೆ, ಬೇರೆ ಮಾರ್ಗಗಳನ್ನು ಬಳಸಿಕೊಂಡು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಎಲ್ಲವೂ ಹಣದಲ್ಲಿಯೇ ನಡೆಯುವುದರಿಂದ ಮತ್ತು ಗಿರಾಕಿಗಳು ಕೂಡ ಯಾವುದೇ ಸ್ಥಳವಾದರೂ ಅಲ್ಲಿಗೆ ಬರಲು ತಯಾರು ಇರುವುದರಿಂದ ಯಾವುದೇ ತೊಂದರೆಯಿಲ್ಲದೆ ಈ ವ್ಯವಹಾರಗಳನ್ನು ಕೆಲವು ದಂಧೆಕೋರರು ನಡೆಸಿಕೊಂಡು ಹೋಗುತ್ತಿದ್ದಾರೆ.




ಸೋಷಿಯಲ್ ಮೀಡಿಯಾ ಬಂದ ನಂತರವಂತೂ ಈ ವ್ಯವಹಾರಗಳು ಸುಲಭವಾಗಿವೆ. ಯಾರಿಗೂ ಗೊತ್ತೇ ಆಗದಂತೆ ವ್ಯವಹಾರ ನಡೆಸುತ್ತಿದ್ದಾರೆ. ಹೀಗಾಗಿ ಮೈಸೂರು ನಗರ ಸುತ್ತಮುತ್ತ ಮಾತ್ರವಲ್ಲದೆ ಹಳ್ಳಿ ಪ್ರದೇಶಕ್ಕೂ ದಂಧೆಕೋರರು ಕಾಲಿಟ್ಟಿರುವುದು ಗುಟ್ಟಾಗಿ ಉಳಿದಿಲ್ಲ. ಈ ದಂಧೆಯಲ್ಲಿ, ಪುರುಷರು, ಮಹಿಳೆಯರು ಎಲ್ಲರೂ ತೊಡಗಿಸಿಕೊಂಡಿದ್ದು, ಅಮಾಯಕ ಹೆಣ್ಣು ಮಕ್ಕಳನ್ನು ಮುಂದಿಟ್ಟುಕೊಂಡು ತಮ್ಮ ತಿಜೋರಿ ತುಂಬಿಸಿಕೊಳ್ಳುತ್ತಿದ್ದಾರೆ. ಇವರೆಲ್ಲರೂ ಆಗಾಗ್ಗೆ ತಮ್ಮ ವಾಸ್ತವ್ಯವನ್ನು ಬದಲಿಸುವುದು, ಹಾಗೆಯೇ ಹೆಸರುಗಳನ್ನು ಬದಲಾಯಿಸುವುದರಿಂದ ಜನರಿಗೆ ಇವರ ಮುಖ ಪರಿಚಯವೇ ಆಗುವುದಿಲ್ಲ.

ಮಾಲೀಕರು ಕೇಳಿದಷ್ಟು ಮನೆಗೆ ಬಾಡಿಗೆ ಕೊಡಲು ಇವರು ತಯಾರು ಇರುವುದರಿಂದ ಅದಕ್ಕಿಂತ ಹೆಚ್ಚಾಗಿ ನಗರದ ಹೊರವಲಯದ ಗ್ರಾಮೀಣ ಪ್ರದೇಶಗಳಲ್ಲಿರುವ ಮನೆಗಳಿಗೆ ಬಾಡಿಗೆದಾರರು ಕೂಡ ಹೆಚ್ಚಾಗಿ ಬಾರದೆ ಇರುವುದರಿಂದ ಸಿಕ್ಕವರಿಗೆ ಕೊಟ್ಟರೆ ಆದಾಯ ಬರುತ್ತದೆ ಎಂಬ ಕಾರಣಕ್ಕೆ ಮಾಲೀಕರು ಕೂಡ ಹಿಂದೂ ಮುಂದು ನೋಡದೆ ಇಂತಹವರಿಗೆ ಮನೆ ನೀಡಿಬಿಡುತ್ತಾರೆ. ಇಂಥ ಮನೆಗಳಲ್ಲಿ ಯಾವುದೇ ಅಡ್ಡಿಯಿಲ್ಲದೆ ದಂಧೆ ನಡೆಸಲಾಗುತ್ತದೆ. ಸುತ್ತಲಿನವರಿಗೆ ಅನುಮಾನ ಬರುವ ತನಕ ಯಾವುದೇ ಅಡೆತಡೆಯಿಲ್ಲದೆ ನಡೆದುಕೊಂಡು ಹೋಗುತ್ತಿರುತ್ತದೆ.



ಮೈಸೂರಿನ ಪ್ರತಿಷ್ಟಿತ ಬಡಾವಣೆಗಳಲ್ಲಿ ಈ ವ್ಯವಹಾರಗಳು ನಡೆಯುತ್ತಿದ್ದರೆ ಅಲ್ಲಿಗೆ ಬರುವ ಗಿರಾಕಿಗಳು ಹೆಚ್ಚು ಹಣ ತೆರಬೇಕಾಗುತ್ತದೆ. ಅದಕ್ಕೂ ಗಿರಾಕಿಗಳು ತಯಾರು ಇರುವುದರಿಂದ ದಂಧೆ ನಡೆಸುವವರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಇದೀಗ ಮೈಸೂರು ನಗರದ ಹೊರವಲಯದ ಜಯಪುರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ದಾಸನಕೊಪ್ಪಲಿನ ಬಡಾವಣೆಯೊಂದರಲ್ಲಿ ಮನೆಯಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ದಂಧೆ ಬಯಲಾಗಿದೆ. ಇಲ್ಲೊಂದು ಮನೆಯಲ್ಲಿ ರಾಜಾರೋಷವಾಗಿ ದಂಧೆ ನಡೆಯುತ್ತಿದೆ ಎಂಬುದು ಸ್ಥಳೀಯರಿಗೆ ಗೊತ್ತಾಗಿರಲಿಲ್ಲ. ಅಷ್ಟು ಗುಟ್ಟಾಗಿ ಇದನ್ನು ನಡೆಸಲಾಗುತ್ತಿತ್ತು.

ಈ ದಂಧೆಯನ್ನು ಮಂಜು ಎಂಬಾತ ತನ್ನ ಗೆಳೆಯನೊಂದಿಗೆ ಸೇರಿ ನಡೆಸುತ್ತಿದ್ದನು. ಗಿರಾಕಿಗಳು ಸಿಕ್ಕಾಗ ಮನೆಗೆ ಹೆಣ್ಣು ಮಕ್ಕಳನ್ನು ಕರೆಯಿಸಿಕೊಂಡು ದಂಧೆ ನಡೆಸುತ್ತಿದ್ದನು. ಈತನಿಗೆ ಗಿರಾಕಿಗಳ ವ್ಯವಸ್ಥೆ ಮಾಡಲು ಒಂದಷ್ಟು ಪರ್ಮನೆಂಟ್ ಪಿಂಪ್‌ಗಳಿದ್ದು, ಹೀಗಾಗಿ ಆತ ಎಲ್ಲಿಯೇ ದಂಧೆ ನಡೆಸಿದರೂ ತೊಂದರೆಯಾಗುತ್ತಿರಲಿಲ್ಲ. ಈ ದಂಧೆಯಲ್ಲಿ ಪಳಗಿದ್ದ ಮಂಜು ನಗರದ ಹೊರವಲಯದಲ್ಲಿರುವ ಆಫೀಷಿಯಲ್ ಏರಿಯಾಗಳನ್ನೇ ಆಯ್ಕೆ ಮಾಡಿಕೊಂಡು ಅಲ್ಲಿ ಮನೆಗಳನ್ನು ಬಾಡಿಗೆ ಪಡೆದುಕೊಳ್ಳುತ್ತಿದ್ದನು. ಅಷ್ಟೇ ಅಲ್ಲದೆ ಅಲ್ಲಿ ಒಂದಷ್ಟು ವ್ಯವಹಾರಗಳನ್ನು ಮಾಡಿಕೊಂಡು ಒಂದೇ ತಿಂಗಳಲ್ಲಿ ಆ ಮನೆ ಖಾಲಿ ಮಾಡಿಕೊಂಡು ಮತ್ತೊಂದು ಮನೆಗೆ ಹೋಗುತ್ತಿದ್ದನು. ಹೀಗಾಗಿ ಸುತ್ತಮುತ್ತಲಿನವರಿಗೆ ಅನುಮಾನ ಬರುತ್ತಿರಲಿಲ್ಲ, ಒಂದು ವೇಳೆ ಅನುಮಾನ ಬಂದರೂ ಅಷ್ಟು ಹೊತ್ತಿಗೆ ಮನೆ ಖಾಲಿಯಾಗಿರುತ್ತಿತ್ತು. ಹೀಗೆ ಮಾಡುತ್ತಿದ್ದರಿಂದ ಈತನ ವ್ಯವಹಾರಕ್ಕೆ ಯಾವುದೇ ತೊಂದರೆಯಾಗುತ್ತಿರಲಿಲ್ಲ.



ಆದರೆ ಈತನ ಪಾಪದ ಕೊಡ ತುಂಬಿತ್ತು. ಹೀಗಾಗಿ ಇತ್ತೀಚೆಗೆ ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಕೊಪ್ಪಲಿನ ಬಡಾವಣೆಯಲ್ಲಿ ಮನೆ ಬಾಡಿಗೆಗೆ ಪಡೆದುಕೊಂಡಿದ್ದನು. ಈ ಮನೆ ಮೇಲೆ ಚಾಮುಂಡೇಶ್ವರಿ ಏಜೆನ್ಸೀಸ್ ಎಂದು ಬೋರ್ಡ್ ತಗಲಿಸಿ ಯಾರೋ ವ್ಯವಹಾರ ನಡೆಸುತ್ತಿದ್ದರು. ಮನ ಮೇಲೆ ಏಜೆನ್ಸಿಯನ್ನು ನಡೆಸುತ್ತಿದ್ದರೆ, ಕೆಳಗಡೆ ಮನೆಯನ್ನು ಬಾಡಿಗೆ ಪಡೆದಿದ್ದ ಮಂಜು ಅದನ್ನು ದಂಧೆಗೆ ಬಳಸಿಕೊಂಡಿದ್ದನು. ಹೊರಗಿನವರು ಈ ಮನೆಗೆ ಬಂದು ಹೋದರೆ ಸುತ್ತಲಿನವರು ಏಜೆನ್ಸಿಗೆ ಬಂದು ಹೋಗಿದ್ದಾರೆ ಎಂದು ತಿಳಿದುಕೊಳ್ಳುತ್ತಾರೆ. ಆಗ ತನ್ನ ಅಕ್ರಮ ಚಟುವಟಿಕೆ ಬೆಳಕಿಗೆ ಬರಲ್ಲ ಎನ್ನುವುದು ಅವನ ಆಲೋಚನೆಯಾಗಿತ್ತು.



ಅದರಂತೆ ನಡೆಯುತ್ತಿತ್ತು.

ಏನೇ ಮಾಡಿದರೂ ಅದಕ್ಕೊಂದು ವ್ಯಾಲಿಡಿಟಿ ಅಂಥ ಇದ್ದೇ ಇರುತ್ತದೆ. ನಾವು ಮಾಡುವ ಅಕ್ರಮ ತಕ್ಷಣಕ್ಕೆ ಕೈತುಂಬಾ ಹಣ ತಂದುಕೊಡಬಹುದು ಆದರೆ ಕರ್ಮ ಅನ್ನೊದು ಯಾವತ್ತಿದ್ದರೂ ತಿರುಗಿ ಬಂದೇ ಬರುತ್ತದೆ. ಅದರಂತೆ ಮಂಜು ಅಂಡ್ ಟೀಮ್ ನಸೀಬು ಕೆಟ್ಟಿತ್ತು. ಇವನ ಮನೆಗೆ ಹುಡುಗಿಯರು, ಮಹಿಳೆಯರು, ಗಂಡಸರು, ಹುಡುಗರು ಆಗಾಗ್ಗೆ ಕಾರು, ಬೈಕ್, ಆಟೋಗಳಲ್ಲಿ ಬಂದು ಹೋಗುವುದು, ಕಿಲಕಿಲ ನಗು ಎಲ್ಲವೂ ಅನುಮಾನವನ್ನುಂಟು ಮಾಡಿತ್ತು. ಈ ಬಗೆಗಿನ ಮಾಹಿತಿ ಒಡನಾಡಿ ಸಂಸ್ಥೆಯನ್ನು ತಲುಪಿತ್ತು. ಅವರು ಇದರ ಹಿಂದೆ ಬಿದ್ದು ಪರಿಶೀಲನೆ ನಡೆಸಿದಾಗ ಅವರಿಗೆ ಇಲ್ಲಿ ದಂಧೆ ನಡೆಯುತ್ತಿರುವುದು ಮನದಟ್ಟಾಗಿತ್ತು.

ಮಂಜುವಿನ ಬಗ್ಗೆ ಮಾಹಿತಿ ಕಲೆಹಾಕಿದಾಗ ಹೊರವಲಯದ ಒಂದೊಳ್ಳೆಯ ಮನೆಯನ್ನೇ ಅನೈತಿಕ ಚಟುವಟಿಕೆಗಳಿಗೆ ಈತ ಬಳಸಿಕೊಳ್ಳುತ್ತಿದ್ದ. ಇದಕ್ಕಾಗಿ ಅಮಾಯಕ ಹೆಣ್ಣು ಮಕ್ಕಳನ್ನು ಹಣದ ಆಮಿಷವೊಡ್ಡಿ ಕರೆತರುತ್ತಿದ್ದನು. ಈತನಿಗೆ ಮತ್ತೊಬ್ಬ ಸಹಾಯ ಮಾಡುತ್ತಿದ್ದನು. ಈತ ಬಹಳಷ್ಟು ವರ್ಷಗಳಿಂದ ದಂಧೆ ನಡೆಸುತ್ತಿದ್ದು, ಬೇರೆ, ಬೇರೆ ಮೂಲಗಳಿಂದ ಅಮಾಯಕ ಹೆಣ್ಣು ಮಕ್ಕಳನ್ನು ಕರೆಯಿಸಿ ದಂಧೆ ನಡೆಸುತ್ತಿದ್ದನು ಅಷ್ಟೇ ಅಲ್ಲದೆ 20 ದಿನ ಅಥವಾ 30 ದಿನಗಳಲ್ಲಿ ಆ ಮನೆಯನ್ನು ಬದಲಾಯಿಸುತ್ತಿದ್ದ, ಈ ರೀತಿಯಾಗಿ ಆತ ತನ್ನ ತಂತ್ರಗಾರಿಕೆಯನ್ನು ಬಳಸಿಕೊಂಡು ತುಂಬಾ ಚಾಣಾಕ್ಷತನದಿಂದ ದಂಧೆಯನ್ನು ನಡೆಸುತ್ತಿದ್ದಾನೆ ಎನ್ನುವುದು ಗೊತ್ತಾಗಿತ್ತು.

ಈ ಬಗ್ಗೆ ಸಂಪೂರ್ಣ ಮಾಹಿತಿ ಅರಿತ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಮತ್ತು ಪರಶು ಅವರು ತಕ್ಷಣ ಮೈಸೂರಿನ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್‌ಅವರ ಗಮನಕ್ಕೆ ತಂದಿದ್ದರು. ಕೂಡಲೇ ಅವರು ಅವರು ಸೆನ್ (CEN : Cyber, Economic and Narcotics Crime)ನ ಇನ್ಸ್‌ಪೆಕ್ಟರ್ ಸುನೀಲ್ ರವರಿಗೆ ತಿಳಿಸಿ ಒಂದು ತಂಡವನ್ನು ರಚನೆ ಮಾಡಿ ಕಾರ್ಯಾಚರಣೆ ನಡೆಸುವಂತೆ ಸೂಚನೆ ನೀಡಿದ್ದರು. ಅದರಂತೆ ಸೆನ್ ಇನ್ಸ್‌ಪೆಕ್ಟರ್ ಸುನಿಲ್ ಮತ್ತು ಸಿಬ್ಬಂದಿ ಒಡನಾಡಿ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ ಪರಶು ಹಾಗೂ ಒಡನಾಡಿ ಸಂಸ್ಥೆಯ ಸಿಬ್ಬಂದಿಗಳಾದ ಪ್ರದೀಪ್.ಕೆ, ಬಾಲುಕುಮಾರ್, ಸಚಿನ್, ಮಣಿ, ಸುಮಾ, ಶಶಾಂಕ್, ನಾಝಿಯಾ ಬಾನು ಅವರು

☞ 14

# ಚೀನಾ ಕುತಂತ್ರ ಸಮರ!

**ಭಾರತದ ವಿರುದ್ಧ ಈ ಹಿಂದೆ ಗಡಿಯಲ್ಲಿ ಕಿರಿಕಿರಿ ಮಾಡಿದ್ದ ಚೀನಾ ಈಗ ವ್ಯಾಪಾರ ಸಮರ ಆರಂಭಿಸಿದೆ! ಫಾಕ್ಸ್‌ಕಾನ್ ಚೀನಾದ ಒತ್ತಡಕ್ಕೆ ಮಣಿದು ಭಾರತದಲ್ಲಿರುವ ತನ್ನ ಘಟಕಗಳಿಂದ ಸುಮಾರು 300ಕ್ಕೂ ಹೆಚ್ಚು ಚೀನಾ ಮೂಲದ ಎಂಜಿನಿಯರ್‌ಗಳು ಮತ್ತು ತಂತ್ರಜ್ಞರನ್ನು ವಾಪಸ್ ಕರೆಸಿಕೊಂಡಿದೆ!!**


ಭಾರತದ ವಿರುದ್ಧ ಈ ಹಿಂದೆ ಗಡಿಯಲ್ಲಿ ಕಿರಿಕಿರಿ ಮಾಡಿದ್ದ ಚೀನಾ ಈಗ ವ್ಯಾಪಾರ ಸಮರ ಆರಂಭಿಸಿದೆ. ಆ್ಯಪಲ್ ಸಂಸ್ಥೆಯ ಐಫೋನ್‌ಗಳ ಅತಿದೊಡ್ಡ ಉತ್ಪಾದಕ ಕಂಪನಿಯಾದ ತೈವಾನ್ ಮೂಲದ ಫಾಕ್ಸ್‌ಕಾನ್ ಚೀನಾದ ಒತ್ತಡಕ್ಕೆ ಮಣಿದು ಕರ್ನಾಟಕ ಹಾಗೂ ತಮಿಳುನಾಡು ಸೇರಿದಂತೆ ಭಾರತದಲ್ಲಿರುವ ತನ್ನ ಘಟಕಗಳಿಂದ ಸುಮಾರು 300ಕ್ಕೂ ಹೆಚ್ಚು ಚೀನಾ ಮೂಲದ ಎಂಜಿನಿಯರ್‌ಗಳು ಮತ್ತು ತಂತ್ರಜ್ಞರನ್ನು ವಾಪಸ್ ಕರೆಸಿಕೊಂಡಿದೆ.



ಇದಲ್ಲದೆ, ಆಟೋಮೊಬೈಲ್ ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕೆಯಲ್ಲಿ ಬಳಸುವ ಆಯಸ್ಕಾಂತಗಳ (ರೇರ್ ಅರ್ತ್ ಮ್ಯಾಗ್ನೆಟ್) ರಫ್ತಿಗೂ ಚೀನಾ ನಿರ್ಬಂಧ ಹೇರಿದೆ. ಮುಂದಿನ ಸೆಪ್ಟೆಂಬರ್‌ನಲ್ಲಿ ಆ್ಯಪಲ್ ಕಂಪನಿಯು ಐಫೋನ್ 17ರ ಬಿಡುಗಡೆಗೆ ಸಿದ್ಧವಾಗಿರುವ ಹೊತ್ತಿನಲ್ಲೇ ಫಾಕ್ಸ್‌ಕಾನ್ ಇಂಥ ನಿರ್ಧಾರ ತೆಗೆದುಕೊಂಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಚೀನಾದ ಹೊರಗೆ ಐಫೋನ್ 17ರ ಉತ್ಪಾದನೆಗೆ ಅಡ್ಡಿ ಮಾಡಲೆಂದೇ ಈ ರೀತಿ ಮಾಡಲಾಗುತ್ತಿದೆ. ಚೀನಾ ಚಿತಾವಣೆಯಿಂದ ಫಾಕ್ಸ್‌ಕಾನ್ ಈ ನಡೆ ಅನುಸರಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

### ಸಂಖ್ಯೆ ಕಮ್ಮಿ ಇದ್ದರೂ ನುರಿತ ತಂತ್ರಜ್ಞರು

ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದಲ್ಲಿ ಫಾಕ್ಸ್‌ಕಾನ್ ಕಂಪನಿಯ ಐಫೋನ್ ಉತ್ಪಾದನಾ ಘಟಕಗಳಿದ್ದು, ಇಲ್ಲಿ ಚೀನಾ ಮೂಲದ ನೌಕರರ ಸಂಖ್ಯೆ ಶೇ.1ಕ್ಕಿಂತ ಕಡಿಮೆ ಇದೆ. ಆದರೆ ಚೀನಿ ಮ್ಯಾನೇಜರ್‌ಗಳು, ತಜ್ಞರು ಮತ್ತು ಎಂಜಿನಿಯರ್‌ಗಳ ಪಾತ್ರ ಮಹತ್ವದ್ದಾಗಿದೆ. ಈ ಎಲ್ಲರೂ ನುರಿತ ತಂತ್ರಜ್ಞರಾಗಿದ್ದಾರೆ. ಕಳೆದೆರಡು ತಿಂಗಳಿಂದ ಫಾಕ್ಸ್‌ಕಾನ್ ಕಂಪನಿ ಭಾರತದ ಉತ್ಪಾದನಾ ಘಟಕಗಳಿಂದ ಅವರನ್ನು ವಾಪಸ್ ಕರೆಸಿಕೊಳ್ಳುತ್ತಿದೆ. ದಕ್ಷಿಣ ಭಾರತದಲ್ಲಿರುವ ಫಾಕ್ಸ್‌ಕಾನ್ ಉತ್ಪಾದನಾ ಘಟಕಗಳಲ್ಲಿ ಇದೀಗ ತೈವಾನ್ ಮೂಲದ ಸಿಬ್ಬಂದಿಯಷ್ಟೇ ಉಳಿದುಕೊಂಡಿದ್ದಾರೆ ಎಂದು ಮಾಧ್ಯಮ ವರದಿಯೊಂದು ಹೇಳಿದೆ.



### ಚೀನಾ ಚಿತಾವಣೆ ಕಾರಣ

ಚೀನಾ ಸಿಬ್ಬಂದಿಯ ದಿಢೀರ್ ವಾಪಸಾತಿಗೆ ಈವರೆಗೆ ಕಾರಣ ಸ್ಪಷ್ಟವಾಗಿಲ್ಲ, ಆದರೆ, ಭಾರತ ಮತ್ತು ದಕ್ಷಿಣ ಏಷ್ಯಾದ ಇತರೆ ದೇಶಗಳಿಗೆ ತಂತ್ರಜ್ಞಾನ ವರ್ಗಾವಣೆ, ಪ್ರಮುಖ ಉಪಕರಣಗಳ ರಫ್ತು ತಡೆಯಲು ಚೀನಾ ಸರ್ಕಾರ ಮೌಖಿಕವಾಗಿ ಸಲಹೆ ನೀಡಿದೆ ಎಂದು ಈ ವರ್ಷದ ಆರಂಭದಲ್ಲೇ ಬ್ಲೂಮ್‌ಬರ್ಗ್ ಸುದ್ದಿಸಂಸ್ಥೆ ವರದಿ ಮಾಡಿತ್ತು.

ಈ ನಡುವೆ, ಚೀನಾದ ಮೇಲಿನ ಅವಲಂಬನೆ ಕಡಿತಗೊಳಿಸುವ ಆ್ಯಪಲ್ ಕಂಪನಿಯ ಪ್ರಯತ್ನದ ಭಾಗವಾಗಿ ಫಾಕ್ಸ್‌ಕಾನ್ ಕೂಡ ದಕ್ಷಿಣ ಭಾರತದಲ್ಲಿ ಐಫೋನ್ ಜೋಡಣೆ ಘಟಕಗಳನ್ನು ವಿಸ್ತರಿಸಲು ಮುಂದಾಗಿತ್ತು. ಈ ಹೊತ್ತಿನಲ್ಲೇ ಇದೀಗ ಅದು ಆ್ಯಪಲ್ ಕಂಪನಿಗೆ ಶಾಕ್ ನೀಡಿದೆ. ಚೀನಾ ನೌಕರರ ವಾಪಸಾತಿಯಿಂದ ಐಫೋನ್ ಗುಣಮಟ್ಟದ ಮೇಲೆ ಸದ್ಯ ಯಾವುದೇ ಪರಿಣಾಮ ಬೀರಲ್ಲ, ಆದರೆ ಮುಂದಿನ ತಲೆಮಾರಿನ ಐಫೋನ್ ಉತ್ಪಾದನೆ ಮೇಲೆ ಅಡ್ಡ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ವಿಶ್ವಾದ್ಯಂತ ಮಾರಾಟವಾಗುವ ಐಫೋನ್‌ಗಳಲ್ಲಿ ಶೇ.20ರಷ್ಟು ಸದ್ಯ ಭಾರತದಲ್ಲೇ ಉತ್ಪಾದನೆಯಾಗುತ್ತಿವೆ. 2026ರ ದ್ವಿತೀಯಾರ್ಧದಲ್ಲಿ ಅಮೆರಿಕದಲ್ಲಿ ಮಾರಾಟವಾಗುವ ಹೆಚ್ಚಿನ ಐಫೋನ್‌ಗಳನ್ನು ಭಾರತದಲ್ಲೇ ಉತ್ಪಾದಿಸುವ ಗುರಿಯನ್ನು ಆ್ಯಪಲ್ ಹೊಂದಿದೆ.

### ಖರ್ಗೆ ಕಿಡಿ, ಸರ್ಕಾರ ಸ್ಪಷ್ಟನೆ

ಫಾಕ್ಸ್‌ಕಾನ್‌ನಲ್ಲಿನ ಚೀನಾ ಎಂಜಿನಿಯರ್‌ಗಳ ವಾಪಸಾತಿ ಬಗ್ಗೆ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಇದು ಮೇಕ್ ಇನ್ ಇಂಡಿಯಾ ವೈಫಲ್ಯವಲ್ಲವೆ? ಎಂದಿದ್ದಾರೆ. ಆದರೆ ಇದಕ್ಕೆ ಕೇಂದ್ರ ಸರ್ಕಾರ ಹಾಗೂ ಫಾಕ್ಸ್‌ಕಾನ್ ಸ್ಪಷ್ಟನೆ ನೀಡಿ, ಚೀನಿ ಎಂಜಿನಿಯರ್‌ಗಳ ಬದಲು ಭಾರತೀಯ ಎಂಜಿನಿಯರ್‌ಗಳನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ನಡೆದಿದೆ ಎಂದಿದೆ.

### ಏನಿದು ಕಳ್ಳಾಟ?

ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ತೈವಾನ್ ಮೂಲದ ಫಾಕ್ಸ್‌ಕಾನ್ ಕಂಪನಿ ಐಫೋನ್‌ಗಳನ್ನು ಉತ್ಪಾದಿಸುತ್ತದೆ. ಈ ಕಂಪನಿಗಳ ಒಟ್ಟು ನೌಕರರಲ್ಲಿ ಶೇ.1ರಷ್ಟು ಚೀನಿಯರು ಇದ್ದಾರೆ. ಸಂಖ್ಯೆ ಕಡಿಮೆ ಇದ್ದರೂ ಅವರೆಲ್ಲಾ ಅತಿ ಮುಖ್ಯ..ಚೀನಾ ಕಳ್ಳಾಟದ ಬಗ್ಗೆ ಪ್ರಮುಖವಾಗಿ ಉಲ್ಲೇಖ ಮಾಡಬಹುದಾದರೆ,

★ ಸೆಪ್ಟೆಂಬರ್‌ನಲ್ಲಿ ಐಫೋನ್ 17 ಬಿಡುಗಡೆಗೆ ತಯಾರಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲೇ ಚೀನಾದ ಹೊಸ ಆಟ....

★ ಫಾಕ್ಸ್‌ಕಾನ್‌ನಲ್ಲಿರುವ ಚೀನಿ ಉದ್ಯೋಗಿಗಳನ್ನು ವಾಪಸ್ ಕರೆಸಿಕೊಳ್ಳಲು ಒತ್ತಡ. ಮಣಿದ ಫಾಕ್ಸ್‌ಕಾನ್ ಕಂಪನಿ

★ ಇದೇ ವೇಳೆ, ಭಾರತದ ಆಟೋಮೊಬೈಲ್, ಎಲೆಕ್ಟ್ರಾನಿಕ್ಸ್ ಪೂರೈಕೆಗೆ ಬೇಕಾದ ಆಯಸ್ಕಾಂತ ಪೂರೈಕೆಗೂ ತಡೆ

★ ಭಾರತ ಜಾಗತಿಕ ಉತ್ಪಾದನಾ ಹಬ್ ಆದರೆ ತನಗೆ ತೊಂದರೆಯಾಗಲಿದೆ ಎಂಬ ಸಿಟ್ಟಿನಿಂದ ಈ ಕೃತ್ಯದ ಶಂಕೆ. ☯

# ಸೇನಾ ಜನರಲ್, ನೌಕಾಪಡೆ ಚೀಫ್, ಪರಮಾಣು ವಿಜ್ಞಾನಿಗಳನ್ನು ಉಚ್ಛಾಟನೆ ಮಾಡಿದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್!!

**ಚೀನಾ ಸೇನೆಯಲ್ಲಿ ದಂಗೆ ಎದ್ದಿರುವ ಸುದ್ದಿ ಸ್ಫೋಟಗೊಂಡಿದೆ! ಹಿರಿಯ ಸೇನಾ ಜನರಲ್ ಮತ್ತಿತರರು ಕುತಂತ್ರ ಮಾಡಿದ್ದಾರೆಂದು ಕೆರಳಿದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಹಿರಿಯ ಜನರಲ್, ನೌಕಾಪಡೆಯ ಮುಖ್ಯಸ್ಥ ಮತ್ತು ಉನ್ನತ ಪರಮಾಣು ವಿಜ್ಞಾನಿ ಮೂವರನ್ನು ಅವರ ಹುದ್ದೆಗಳಿಂದ ಉಚ್ಛಾಟಿಸಿದ್ದಾರೆ ಎನ್ನಲಾಗಿದೆ. ಇದು ಇತರ ಪಿಎಲ್‌ಎ ಅಧಿಕಾರಿಗಳಲ್ಲಿ ಕೋಲಾಹಲವನ್ನು ಸೃಷ್ಟಿಸಿದೆ.**







ಚೀನಾ ಸೇನೆಯ ಉನ್ನತ ಅಧಿಕಾರಿಗಳನ್ನು ತೆಗೆದುಹಾಕುವ ಪ್ರಕ್ರಿಯೆಯು ಕೆಲವು ತಿಂಗಳುಗಳಿಂದ ಚೀನಾದಲ್ಲಿ ನಡೆಯುತ್ತಿದೆ. ಭ್ರಷ್ಟಾಚಾರ, ಅಪನಂಬಿಕೆ, ನಂಬಿಕೆ ದ್ರೋಹ ಮತ್ತು ದುಷ್ಕೃತ್ಯಗಳು ಸೇರಿದಂತೆ ಕೆಲವು ಆರೋಪಗಳನ್ನು ಉಚ್ಛಾಟಿತರ ಮೇಲೆ ಹೊರಿಸಿ ತಮ್ಮ ಸೇನೆಯ ಉನ್ನತ ಮಿಲಿಟರಿ ಅಧಿಕಾರಿಗಳನ್ನು ತೆಗೆದುಹಾಕಿದ್ದಾರೆ, ಅಧ್ಯಕ್ಷ ಕ್ಸಿ ಜಿನ್ ಪಿಂಗ್!

### ಸೌತ್ ಚೀನಾ ಮಾರ್ನಿಂಗ್ ಪೋಸ್ಟ್

ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿರುವ ಸುದ್ದಿಯ ಪ್ರಕಾರ, ಅಧ್ಯಕ್ಷ ಜಿನ್‌ಪಿಂಗ್ ಚೀನಾ ನೌಕಾಪಡೆಯ ಮುಖ್ಯಸ್ಥ ಮತ್ತು ಪರಮಾಣು ವಿಜ್ಞಾನಿಯನ್ನು ಉನ್ನತ ಶಾಸಕಾಂಗ ಸ್ಥಾನದಿಂದ ತೆಗೆದುಹಾಕಿದ್ದಾರೆ. ಅಲ್ಲದೆ, ಅನೇಕ ಪಿಎಲ್‌ಎ ಜನರಲ್‌ಗಳು ಮಿಲಿಟರಿ ಶಿಸ್ತು ಕ್ರಮಕ್ಕೆ ಒಳಗಾಗಿದ್ದಾರೆ.



ಈಗ ಕ್ಸಿ ಜಿನ್‌ಪಿಂಗ್ ಚೀನಾದ ನೌಕಾಪಡೆಯ ಮುಖ್ಯಸ್ಥ ವೈಸ್ ಅಡ್ಮಿರಲ್ ಲಿ ಹಂಜುನ್ ಮತ್ತು ಹಿರಿಯ ಪರಮಾಣು ವಿಜ್ಞಾನಿ ಲಿಯು ಶಿಪೆಂಗ್ ಅವರನ್ನು ದೇಶದ ಉನ್ನತ ಶಾಸಕಾಂಗವಾದ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್ (NPC) ನಿಂದ ಹೊರಹಾಕಿದ್ದಾರೆ.

ಈ ಕ್ರಮವು ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ (PLA) ಮತ್ತು ರಕ್ಷಣಾ ಉದ್ಯಮದಲ್ಲಿ ನಡೆಯುತ್ತಿರುವ ಸಮಗ್ರ ಶಿಸ್ತಿನ ಅಭಿಯಾನದ ಭಾಗವಾಗಿದೆ. ಎನ್‌ಪಿಸಿಯ ಸ್ಥಾಯಿ ಸಮಿತಿಯು ಹೇಳಿಕೆಯಲ್ಲಿ ನೇವಿ ಸರ್ವೀಸ್‌ಮನ್ ಕಾಂಗ್ರೆಸ್ 14ನೇ ರಾಷ್ಟ್ರೀಯ ಪೀಪಲ್ಸ್ ಕಾಂಗ್ರೆಸ್‌ನ ಪ್ರತಿನಿಧಿ ಹುದ್ದೆಯಿಂದ ಲಿ ಹಂಜುನ್ ಅವರನ್ನು ತೆಗೆದುಹಾಕಿದೆ ಎಂದು ತಿಳಿಸಿದೆ. ಅದೇ ಸಮಯದಲ್ಲಿ, ಚೀನಾದ ಗನ್ಸು ಪ್ರಾಂತ್ಯದ ಪೀಪಲ್ಸ್ ಕಾಂಗ್ರೆಸ್ ಲಿಯು ಶಿಪೆಂಗ್ ಅವರನ್ನು ಎನ್‌ಪಿಸಿಯ ಉಪ ಪ್ರತಿನಿಧಿ ಹುದ್ದೆಯಿಂದ ತೆಗೆದುಹಾಕಿದೆ.

ಇದಲ್ಲದೆ, ಪಿಎಲ್‌ಎಯಲ್ಲಿ ಸೈದ್ಧಾಂತಿಕ ಕೆಲಸವನ್ನು ನೋಡಿಕೊಳ್ಳುವ ಮಾಜಿ ಉನ್ನತ ಜನರಲ್ ಮಿಯಾವೊ ಹುವಾ ಅವರನ್ನು ಕೇಂದ್ರ ಮಿಲಿಟರಿ ಆಯೋಗದಿಂದ (CMC) ತೆಗೆದುಹಾಕಲಾಗಿದೆ. ಈ ಆಯೋಗವು ಅಧ್ಯಕ್ಷ ಕ್ಸಿ ಜಿನ್ಪಿಂಗ್ ನೇತೃತ್ವದ ಚೀನಾದ ಅತ್ಯುನ್ನತ ಮಿಲಿಟರಿ ಕಮಾಂಡ್ ಆಗಿದೆ. ಎನ್‌ಪಿಸಿ ಸದಸ್ಯತ್ವದಿಂದ ತೆಗೆದುಹಾಕುವುದು ಎಂದರೆ ಲಿ ಮತ್ತು ಲಿ ಯು ವಿರುದ್ಧ ಗಂಭೀರ ಶಿಸ್ತು ಕ್ರಮ ತೆಗೆದುಕೊಳ್ಳಬಹುದು.

ಚೀನಾ, ಸಾಮಾನ್ಯವಾಗಿ ತನ್ನ ಸೈನ್ಯದಲ್ಲಿ ನಡೆಯುತ್ತಿರುವ ಆಂತರಿಕ ಕ್ರಮಗಳ ಬಗ್ಗೆ ಸಾರ್ವಜನಿಕವಾಗಿ ಹೆಚ್ಚಿನ ಮಾಹಿತಿಯನ್ನು ನೀಡುವುದಿಲ್ಲ, ಆದರೆ ಎನ್‌ಪಿಸಿಯ ಪ್ರಕಟಣೆಗಳು ಈ ಕ್ರಮಗಳ ಸೂಚನೆಯೆಂದು ಪರಿಗಣಿಸಲಾಗುತ್ತದೆ.

### ನೌಕಾ ಪಡೆ ಮುಖ್ಯಸ್ಥ ಹಂಜುನ್ ಬಗ್ಗೆ

60 ವರ್ಷ ವಯಸ್ಸಿನ ಲಿ ಹಂಜುನ್ ಬಗ್ಗೆ ಸಾರ್ವಜನಿಕ ಮಾಹಿತಿ ಬಹಳ ಸೀಮಿತವಾಗಿದೆ. ಅವರು ನೌಕಾಪಡೆಯ ಮುಖ್ಯಸ್ಥರಾಗುವ ಮೊದಲು, CMC ಯ ತರಬೇತಿ ಮತ್ತು ಆಡಳಿತ ವಿಭಾಗದ ಉಪ ನಿರ್ದೇಶಕರಾಗಿದ್ದರು. ಅವರು ಸುಧಾರಣೆ ಮತ್ತು ಸಾಂಸ್ಥಿಕ ರಚನೆ ಕಚೇರಿಯಲ್ಲಿ ಒಂದು ವರ್ಷ ಕೆಲಸ ಮಾಡಿದರು. 2014ರಲ್ಲಿ ಅವರನ್ನು ಫ್ಯೂಜಿಯಾನ್ ಪ್ರಾಂತ್ಯದ ನೌಕಾ ನೆಲೆಯ ಕಮಾಂಡರ್ ಆಗಿ ನೇಮಿಸಲಾಯಿತು. ಮತ್ತು ಅದೇ ಸಮಯದಲ್ಲಿ ಅವರಿಗೆ ವೈಸ್ ಅಡ್ಮಿರಲ್ ಹುದ್ದೆಯನ್ನು ನೀಡಲಾಯಿತು. ಆ ದಿನಗಳಲ್ಲಿ, ಲಿ ಚೀನಾದ ನೌಕಾ ಕಮಾಂಡ್ ಕಾಲೇಜಿನಲ್ಲಿ ತರಬೇತಿ ನಿರ್ದೇಶಕರಾಗಿದ್ದರು. ಅನಂತರ ಸಂಸ್ಥೆಯ ಅಧ್ಯಕ್ಷರಾದರು. ಫ್ಯೂಜಿಯಾನ್‌ನಲ್ಲಿ

☞13



# ಯುದ್ಧಗ್ರಸ್ಥ ಇರಾನ್ ಸರ್ವಾಧಿಕಾರಿ ಖಮೇನಿ ಮೂಲ ಬೇರು ಉತ್ತರ ಪ್ರದೇಶ!

**ಇರಾನ್ ಇಸ್ರೇಲ್ ಮಧ್ಯೆ ಯುದ್ಧ ನಡೆಯುತ್ತಿದೆ. ಈ ಮಧ್ಯೆ ಅಮೇರಿಕಾ ಅಧ್ಯಕ್ಷ ಟ್ರಂಪ್ ಇದ್ದೇಶಗಳ ಮದ್ಯೆ ಪ್ರವೇಶಿಸಿ ಬುದ್ಧಿ ಹೇಳಲು ಹೋಗಿ ಮುಖಭಂಗ ಅನುಭವಿಸಿ, ಅಂತಿಮವಾಗಿ ಇಸ್ರೇಲ್ ಪರ ನಿಂತದ್ದು ಗೊತ್ತೇ ಇದೆ. ಇದೀಗ ಬಂದ ಶುಭ ವಾರ್ತೆ ಏನೆಂದರೆ, ಇರಾನ್ ಕದನ ವಿರಾಮ ಘೋಷಿಸಿದೆ! ಇನ್ನೊಂದು ಮುಖ್ಯ ವಾರ್ತೆ ಏನೆಂದರೆ, ಇರಾನ್ ಅಧ್ಯಕ್ಷ ಖಮೇನಿ ಮೂಲ ಭಾರತ ದೇಶದವರು ಎಂಬುದು!!**





ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಮಧ್ಯೆ, ಉತ್ತರ ಪ್ರದೇಶದ ಒಂದು ಅಸ್ಪಷ್ಟ ಗ್ರಾಮ ಇರಾನ್ನ ಇತ್ತೀಚಿನ ರಾಜಕೀಯ ಇತಿಹಾಸದ ಅತಿದೊಡ್ಡ ವ್ಯಕ್ತಿಯೊಂದಿಗಿನ ಸಂಪರ್ಕಕ್ಕಾಗಿ ಗಮನ ಸೆಳೆಯುತ್ತಿದೆ! ಗ್ರಾಮದಲ್ಲಿ ವಾಸಿಸುತ್ತಿರುವ ಐದು ಶಿಯಾ ಕುಟುಂಬಗಳಲ್ಲಿ, ಕಾಜ್ಮಿಗಳು ಮುಸಾವಿಯೊಂದಿಗೆ ದೂರದ ರಕ್ತ ಸಂಬಂಧವನ್ನು ಹೊಂದಿದ್ದಾರೆ ಎಂದು ಹೇಳಿಕೊಳ್ಳುತ್ತಾರೆ!!


1979ರ ಇಸ್ಲಾಮಿಕ್ ಕ್ರಾಂತಿಯನ್ನು ಹುಟ್ಟುಹಾಕಿದ ಮತ್ತು ಅದರ ಮೊದಲ ಸರ್ವೋಚ್ಚ ನಾಯಕರಾದ ಉಗ್ರ ಧರ್ಮಗುರು ಅಯತೊಲ್ಲಾ ರುಹೊಲ್ಲಾ ಮುಸಾವಿ ಖೊಮೇನಿಯ ಮೂಲ ಉತ್ತರ ಪ್ರದೇಶದ ಲಕ್ನೋದಿಂದ ಸುಮಾರು 50 ಕಿ.ಮೀ. ದೂರದಲ್ಲಿರುವ ಬಾರಾಬಂಕಿ ಜಿಲ್ಲೆಯ ಕಿಂಟೂರಿನದ್ದಾಗಿದೆ.

ಒಂದು ಕಾಲದಲ್ಲಿ ಶಿಯಾಗಳು ಪ್ರಾಬಲ್ಯ ಹೊಂದಿದ್ದ ಈ ಗ್ರಾಮ ಈಗ 13,000 ಜನಸಂಖ್ಯೆಯನ್ನು ಹೊಂದಿದ್ದು, ಕೇವಲ ಐದು ಶಿಯಾ ಕುಟುಂಬಗಳು ಇಲ್ಲಿ ಉಳಿದಿವೆ. ಕಿಂಟೂರಿನಿಂದ, ಅಯತೊಲ್ಲಾ ಖೊಮೇನಿಯವರ ಅಜ್ಜ ಸೈಯದ್ ಅಹ್ಮದ್ ಮುಸಾವಿ ಹಿಂದಿ 19ನೇ ಶತಮಾನದಲ್ಲಿ ಇರಾನ್‌ಗೆ ವಲಸೆ ಬಂದಿದ್ದರು.

ಈಗ ಗ್ರಾಮದಲ್ಲಿ ವಾಸಿಸುತ್ತಿರುವ ಐದು ಶಿಯಾ ಕುಟುಂಬಗಳಲ್ಲಿ, ಕಾಜ್ಮಿಗಳು ಮುಸಾವಿಯೊಂದಿಗೆ ದೂರದ ರಕ್ತಸಂಬಂಧವನ್ನು ಹೊಂದಿದ್ದಾರೆ ಎಂದು ಹೇಳಿಕೊಳ್ಳುತ್ತಾರೆ. ಈಗಲೂ ಉತ್ತರ ಪ್ರದೇಶದಲ್ಲಿರುವ ಸೈಯದ್ ನಿಹಾಲ್ ಕಾಜ್ಮಿ ಅವರ ಕೋಣೆಯ ಗೋಡೆಯಲ್ಲಿ ಖೊಮೇನಿಯವರ ಭಾವಚಿತ್ರವನ್ನು ಅಲಂಕರಿಸಲಾಗಿದೆ. ಅವರು ತಮ್ಮ ಮುತ್ತಜ್ಜ ಮುಫ್ತಿ ಮೊಹಮ್ಮದ್ ಕುಲಿ ಮುಸಾವಿ ಮತ್ತು ಸೈಯದ್ ಅಹ್ಮದ್ ಮುಸಾವಿ ಹಿಂದಿ ಸೋದರ ಸಂಬಂಧಿಗಳಾಗಿದ್ದರು ಎಂದು ಹೇಳಿಕೊಳ್ಳುತ್ತಾರೆ.

ಕಾಜ್ಮಿಗಳ ಪ್ರಕಾರ, ಸೈಯದ್ ಅಹ್ಮದ್ ಮುಸಾವಿ ಹಿಂದಿ 1790ರಲ್ಲಿ ಕಿಂಟೂರಿನಲ್ಲಿ ಶಿಯಾ ವಿದ್ವಾಂಸರ ಪ್ರಸಿದ್ಧ ಕುಟುಂಬದಲ್ಲಿ ಜನಿಸಿದರು. 1830ರಲ್ಲಿ, 40ನೇ ವಯಸ್ಸಿನಲ್ಲಿ, ಅವರು ಅವಧ್ನ ನವಾಬನೊಂದಿಗೆ ತೀರ್ಥಯಾತ್ರೆ ಕೈಗೊಂಡರು. ಇರಾಕ್‌ನ ನಜಾಫ್ ಮತ್ತು ಕರ್ಬಲಾ ಎಂಬ ಗೌರವಾನ್ವಿತ ಇಸ್ಲಾಮಿಕ್ ನಗರಗಳಿಗೆ ಭೇಟಿ ನೀಡಿದ ನಂತರ, ಅವರು ಅಂತಿಮವಾಗಿ ಇರಾನ್‌ನ ಖೊಮೇನ್ ತಲುಪಿದರು, ಅಲ್ಲಿ ಮುಸಾವಿ ಶಾಶ್ವತವಾಗಿ ನೆಲೆಸಿದರು.

ಮುಸಾವಿ ಹೆಮ್ಮೆಪಡುತ್ತಿದ್ದ ತಮ್ಮ ಭಾರತೀಯ ಬೇರುಗಳನ್ನು ಪ್ರತಿಬಿಂಬಿಸಲು ತಮ್ಮ ಹೆಸರಿನೊಂದಿಗೆ ಹಿಂದಿ ಪದವನ್ನು ಸೇರಿಸಿದ್ದಾರೆ ಎಂದು ಕಾಜ್ಮಿಗಳು ಹೇಳಿಕೊಳ್ಳುತ್ತಾರೆ. ತನ್ನ ಗುರುತಿನಲ್ಲಿ ಹಿಂದೂಸ್ತಾನವನ್ನು ಜೀವಂತವಾಗಿಡಲು ಅವರು ತಮ್ಮ ಹೆಸರಿಗೆ 'ಹಿಂದಿ'



ಸೇರಿಸಿಕೊಂಡರು ಎಂದು ಸೈಯದ್ ಆದಿಲ್ ಕಾಜ್ಮಿ ಹೇಳಿದರು.

1839ರಲ್ಲಿ, ಮುಸಾವಿ ತಮ್ಮ ಸ್ನೇಹಿತನ ಸಹೋದರಿ ಸಕೀನೆಹ್ ಅಹ್ಮದ್ ಅವರನ್ನು ವಿವಾಹವಾದರು. ಅವರು ಅವರ ಮೂರನೇ ಪತ್ನಿಯಾಗಿದ್ದು, ಅಯೋತೊಲ್ಲಾ ರುಹೊಲ್ಲಾ ಖೊಮೇನಿ ಅವರ ತಂದೆ ಸೈಯದ್ ಮುಸ್ತಫಾ ಅವರಿಗೆ ಜನ್ಮ ನೀಡಿದರು. ಮುಸಾವಿ 1869 ರಲ್ಲಿ ನಿಧನರಾದರು ಮತ್ತು ಅವರನ್ನು ಕರ್ಬಲಾದಲ್ಲಿ ಸಮಾಧಿ ಮಾಡಲಾಯಿತು. ಆದಾಗ್ಯೂ, ಮುಸಾವಿಗಳು ಮೂಲತಃ ಇರಾನ್‌ನ ನಿಶಾಪುರಕ್ಕೆ ಸೇರಿದವರು ಮತ್ತು 1700ರ ದಶಕದ ಆರಂಭದಲ್ಲಿ ಭಾರತಕ್ಕೆ ವಲಸೆ ಬಂದು ಕಿಂಟೂರಿನಲ್ಲಿ ನೆಲೆಸಿದರು ಎಂದು ಕಾಜ್ಮಿಗಳು ಹೇಳಿಕೊಳ್ಳುತ್ತಾರೆ.

ವಾಸ್ತವವಾಗಿ, ಏಳನೇ ಶಿಯಾ ಇಮಾಮ್ -ಮುಸಾ-ಅಲ್-ಕಾಜಿಮ್ ಮೂಲಕ ಮುಸಾವಿಗಳು ಪ್ರವಾದಿಯವರ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಕಿಂಟೂರಿನಲ್ಲಿರುವ ಕಾಜ್ಮಿಗಳು ಹೇಳುವಂತೆ ಇದು ಮುಸಾವಿಗಳು ಇರಾನ್ನ ನಿಶಾಪುರದಿಂದ ಕಿಂಟೂರಿಗೆ ಪ್ರಯಾಣಿಸಿ ನಂತರ ಮತ್ತೆ ಇರಾನ್ ಹಿಂತಿರುಗುವ ಕುಟುಂಬವಾಗಿದೆ.

ಕಿಂಟೂರಿನಲ್ಲಿರುವ ಮುಸಾವಿ ಕುಟುಂಬದ ಪೂರ್ವಜರ ನಿವಾಸವಾದ 'ಸೈಯದ್ ವಾಡಾ'ದ ಅವಶೇಷಗಳನ್ನು ಸ್ಥಳೀಯ ನಿವಾಸಿಗಳು ಇನ್ನೂ ಸೂಚಿಸುತ್ತಾರೆ. ಒಂದು ಕಾಲದಲ್ಲಿ ವಿಸ್ತಾರವಾದ ರಚನೆಯು ಕಾಲಾನಂತರದಲ್ಲಿ ಶಿಥಿಲಗೊಂಡಿದೆ ಆದರೆ ಜನರು ಇನ್ನೂ ಅದನ್ನು ಪವಿತ್ರ ಗುರುತು ಎಂದು ಪರಿಗಣಿಸುತ್ತಾರೆ.

ಸೈಯದ್ ವಾಡಾ, ಮನೆ, ಶಿಥಿಲಗೊಂಡಿದ್ದರೂ, ಇರಾನ್ ನಲ್ಲಿ ಇಸ್ಲಾಮಿಕ್ ಗಣರಾಜ್ಯವನ್ನು ರೂಪಿಸಲು ಸಹಾಯ ಮಾಡಿದ ಪ್ರಯಾಣಕ್ಕೆ ಸಾಕ್ಷಿಯಾಗಿದೆ. ಲಕ್ನೋ ಮತ್ತು ಅದಕ್ಕಿಂತ ಹೆಚ್ಚಿನ ಸ್ಥಳಗಳಿಂದ ಭೇಟಿ ನೀಡುವವರು ಈ ಸ್ಥಳವನ್ನು ನೋಡಲು ಇಲ್ಲಿಗೆ ಬರುತ್ತಾರೆ ಎಂದು ಸ್ಥಳೀಯ ನಿವಾಸಿ ಸಜ್ಜದ್ ರಿಜ್ವಿ ಹೇಳಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವಾಗ, ಕಿಂತೂರಿನ ಅನೇಕ ಗ್ರಾಮಸ್ಥರು ಇರಾನ್‌ನೊಂದಿಗೆ ಬಹಿರಂಗವಾಗಿ ಒಗ್ಗಟ್ಟನ್ನು ವ್ಯಕ್ತಪಡಿಸುತ್ತಾರೆ.

ನಾವು ಭಾರತೀಯರು, ಆದರೆ ನಮ್ಮ ಭಾವನೆಗಳು ಇರಾನ್‌ನೊಂದಿಗೆ ಇವೆ. ನಮ್ಮ ರಕ್ತಸಂಬಂಧವು ಈಗ ನಡೆಯುವ ಭೂಮಿ ಅದಾಗಿದೆ. ಪಶ್ಚಿಮ ಮತ್ತು ಇಸ್ರೇಲ್ ಮುಗ್ಧ ರಕ್ತವನ್ನು ಸುರಿಸುತ್ತಿವೆ. ನಾವು ಅನ್ಯಾಯದ ವಿರುದ್ಧ ನಿಲ್ಲುತ್ತೇವೆ ಎಂದು ಸ್ಥಳೀಯ ಯುವಕ ಇಮ್ರಾನ್ ನಖ್ವಿ ಹೇಳಿದ್ದಾರೆ. ಮುಸಾವಿಯ ಪರಂಪರೆ 1902ರಲ್ಲಿ ಇರಾನಿನ ನಗರವಾದ ಖೋಮಿನ್‌ನಲ್ಲಿ ಜನಿಸಿದ ಅವರ ಮೊಮ್ಮಗ ಖೋಮಿನಿಯ ಮೂಲಕ ಜೀವಂತವಾಗಿದೆ. ಅವರ ತಾಯಿಯಿಂದ ಬೆಳೆದ ಖೊಮೇನಿ ಇಸ್ಲಾಮಿಕ್ ಕಾನೂನು, ಮತ್ತು ತತ್ವಶಾಸ್ತ್ರ ವಿದ್ವಾಂಸರಾಗಿದ್ದರು. ಕ್ರಾಂತಿಕಾರಿ ವಿಶ್ವದೃಷ್ಟಿಕೋನವನ್ನು ರೂಪಿಸಿದ ಪಾಶ್ಚಿಮಾತ್ಯ ಚಿಂತಕರ ಕೃತಿಗಳನ್ನು ಒಳಗೊಂಡಂತೆ ಅವರು ವ್ಯಾಪಕವಾಗಿ ಅಧ್ಯಯನ ನಡೆಸಿದ್ದರು.

1979ರಲ್ಲಿ, ಖೋಮಿನಿ ಇಸ್ಲಾಮಿಕ್ ಕ್ರಾಂತಿಯನ್ನು ಮುನ್ನಡೆಸಿ, ಅಲ್ಲಿನ ಆಡಳಿತದ ನೇತೃತ್ವ ವಹಿಸಿದ್ದ ಶಾ ಮೊಹಮ್ಮದ್ ರೆಜಾ ಪಹ್ಲವಿಯನ್ನು ಪದಚ್ಯುತಗೊಳಿಸಿತು ಮತ್ತು ಇರಾನ್‌ನ ರಾಜಪ್ರಭುತ್ವವನ್ನು ಕೊನೆಗೊಳಿಸಿತು ಮತ್ತು ದೇವಪ್ರಭುತ್ವ ಗಣರಾಜ್ಯವನ್ನು ಸ್ಥಾಪಿಸಿತು. ಖಮೇನಿ ಅದರ ಮೊದಲ ಸರ್ವೋಚ್ಚ ನಾಯಕರಾದರು.

1989ರಲ್ಲಿ ಖೊಮೇನಿಯವರ ಮರಣದ ನಂತರ, ಅಯತೊಲ್ಲಾ ಅಲಿ ಖೊಮೇನಿ ಸರ್ವೋಚ್ಚ ನಾಯಕರಾಗಿ ಅಧಿಕಾರ ವಹಿಸಿಕೊಂಡರು. ಇಂದು, ಇರಾನ್ ಮತ್ತೊಂದು ಪ್ರಮುಖ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಅವರು ಚುಕ್ಕಾಣಿ ಹಿಡಿದಿದ್ದಾರೆ. ☯

12 ☞

ಮಿಯಾವೊ ಹುವಾ ಅವರೊಂದಿಗಿನ ಲಿ ಅವರ ಅಧಿಕಾರಾವಧಿಯು ಸಮಾನಾಂತರವಾಗಿ ನಡೆಯಿತು ಎನ್ನಲಾಗಿದೆ.




**ಲಿಯು ಶೆಪೆಂಗ್ ಅವರನ್ನು ಶಿಕ್ಷಿಸಿದ್ದು ಏಕೆ?**

ಮತ್ತೊಂದೆಡೆ, ಲಿಯು ಶಿಪೆಂಗ್ ಅತ್ಯಂತ ಗೌಪ್ಯ ಮತ್ತು ಕಾರ್ಯತಂತ್ರದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಜಿನ್ಪಿಂಗ್ ಅವರನ್ನು ಏಕೆ ಶಿಕ್ಷಿಸಿದರು ಎಂಬುದರ ಕುರಿತು ಯಾರಿಗೂ ಸ್ಪಷ್ಟ ಮಾಹಿತಿ ಇಲ್ಲ. ಅವರು ಚೀನಾದ ನಾಗರಿಕ ಮತ್ತು ಮಿಲಿಟರಿ ಪರಮಾಣು ಯೋಜನೆಗಳನ್ನು ನೋಡಿಕೊಳ್ಳುವ ಚೀನಾ ರಾಷ್ಟ್ರೀಯ ಪರಮಾಣು ನಿಗಮದಲ್ಲಿ (CNNC) ಉಪ ಮುಖ್ಯ ಎಂಜಿನಿಯರ್ ಆಗಿದ್ದರು. ಅವರು ಗನ್ಸುನಲ್ಲಿರುವ CNNC ಯ 404 ಬೇಸ್‌ನ ಅಧ್ಯಕ್ಷ ಮತ್ತು ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯೂ ಆಗಿದ್ದರು. ಅವರ ಶ್ರಮದಿಂದಲೇ ಚೀನಾದಲ್ಲಿ ಮಹತ್ತರ ಬೆಳವಣಿಗೆಗಳಾಗಿವೆ ಎನ್ನಲಾಗುತ್ತಿದೆ.

1,000 ಚದರ ಕಿಲೋಮೀಟರ್‌ಗಳಿಗಿಂತ ಹೆಚ್ಚು ವಿಸ್ತೀರ್ಣವನ್ನು ಹೊಂದಿರುವ 404 ನೆಲೆಯನ್ನು 1958 ರಲ್ಲಿ ಸ್ಥಾಪಿಸಲಾಯಿತು. ಇದು ಚೀನಾದ ಮೊದಲ ಮತ್ತು ಅತಿದೊಡ್ಡ ಪರಮಾಣು ಸಂಶೋಧನಾ ಕೇಂದ್ರವಾಗಿದೆ. 1964ರಲ್ಲಿ ಚೀನಾದ ಮೊದಲ ಪರಮಾಣು ಬಾಂಬ್ ಅನ್ನು ಮತ್ತು 1967ರಲ್ಲಿ ಮೊದಲ ಹೈಡ್ರೋಜನ್ ಬಾಂಬ್ ಅನ್ನು ಅಭಿವೃದ್ಧಿಪಡಿಸಲಾಯಿತು ಎಂಬ ಮಾಹಿತಿ ಇದೆ. ☯

## ಕ್ಸಿಗೆ ಮುಳುವಾದ ಶೃಂಗಸಭೆ! ಗೃಹಬಂಧನದಲ್ಲಿದ್ದಾರ ಕ್ಸಿ??!



ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯಲ್ಲಿ ಭಾಗವಹಿಸಿ ಉಜ್ಬೇಕಿಸ್ತಾನದ ಸಮರ್ಖಂಡ್‌ನಿಂದ ಬಂದಿಳಿಯುತ್ತಿದ್ದಂತೆಯೇ ಕ್ಸಿ ಜಿನ್ ಪಿಂಗ್ ಅವರನ್ನು ವಿಮಾನ ನಿಲ್ದಾಣದಲ್ಲಿಯೇ ಬಂಧಿಸಲಾಗಿದೆ. ಕಳೆದ ಹತ್ತು ದಿನಗಳಿಂದ ಸಿಜಿಬಿ ಗುಪ್ತ ಸಭೆಗಳನ್ನು ನಡೆಸಿದೆ. ಇದು ಕ್ಸಿ ಅವರಿಂದ ಅಧಿಕಾರ ಕಿತ್ತುಕೊಳ್ಳುವ ಗುರಿಯೊಂದಿಗೆ ನಡೆದಿದೆ ಎಂದು ವರದಿಗಳು ತಿಳಿಸಿವೆ.

ಕ್ಸಿ ಜಿನ್ಪಿಂಗ್ ಅವರು ಸಮರ್ಖಂಡ್‌ನಲ್ಲಿದ್ದಾಗ ಮಾಜಿ ಪ್ರಧಾನಿ ಮತ್ತು ಮಾಜಿ ಅಧ್ಯಕ್ಷ ಸೇರಿಕೊಂಡು ಹಾಲಿ ಅಧ್ಯಕ್ಷರ ವಿರುದ್ಧ ಸಂಚು ರೂಪಿಸಿದ್ದಾರೆ. ಸತತ ಮೂರನೇ ಅವಧಿಗೆ ಜಿನ್ ಪಿಂಗ್ ಅವರು ಚೀನಾ ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಇದ್ದಿದ್ದರ ಪರಿಣಾಮ ಇದು ಎನ್ನಲಾಗಿದೆ.

ಕ್ಸಿ ಅವರ ಗೃಹಬಂಧನ ಹಾಗೂ ಬೀಜಿಂಗ್ ಅನ್ನು ಸೇನೆ ನಿಯಂತ್ರಣಕ್ಕೆ ಪಡೆದುಕೊಂಡಿರುವ ಬಗ್ಗೆ ಸ್ವತಃ ಚೀನಾ ಪ್ರಜೆಗಳೇ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಲಿ ಖಿಯೋಮಿಂಗ್ ಅವರನ್ನು ಚೀನಾದ ಮುಂದಿನ ಅಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದೂ ಕೆಲವರು ಹೇಳಿದ್ದಾರೆ! ಈ ನಡುವೆ ನಮ್ಮ ಬಿಜೆಪಿ ಧುರೀಣ ಸುಬ್ರಮಣಿಯನ್ ಸ್ವಾಮಿ ಒಂದು ಮಹತ್ತರ ಟ್ವೀಟ್ ಮಾಡಿದ್ದಾರೆ!

ಕ್ಸಿ ಅವರು ಇತ್ತೀಚೆಗೆ ಸಮರ್ಖಂಡ್‌ನಲ್ಲಿದ್ದಾಗ ಚೀನಾದ ಕಮ್ಯುನಿಸ್ಟ್ ಪಕ್ಷದ ನಾಯಕರು ಸೇನೆಯ ಪಕ್ಷದ ಉಸ್ತುವಾರಿ ಸ್ಥಾನದಿಂದ ಕ್ಸಿ ಅವರನ್ನು ಕಿತ್ತುಹಾಕಿದ್ದಾರೆ, ಬಳಿಕ ಗೃಹಬಂಧನ ನಡೆದಿದೆ ಎಂದು ಬಿಜೆಪಿ ಸಂಸದ ಸುಬ್ರಮಣಿಯನ್ ಸ್ವಾಮಿ ಟ್ವೀಟ್ ಮಾಡಿದ್ದಾರೆ!! ☯

# ಮಧ್ಯರಾತ್ರಿ ಎರಡು ಅಸ್ಥಿಪಂಜರ ಹಿಡಿದು ಪೊಲೀಸ್ ಠಾಣೆಗೆ ಬಂದ ಯುವಕ!

**ಆಗ ವಿವಾಹ ಪೂರ್ವ ಲೈಂಗಿಕತೆ, ವಿವಾಹಪೂರ್ವ ಮಕ್ಕಳ ಜನನದ ಸ್ಟೋರಿ ಬಿಚ್ಚಿಕೊಂಡಿದೆ. ವಿವಾಹ ಪೂರ್ವ ಹುಟ್ಟಿದ ಮಕ್ಕಳನ್ನು ಕೊಂದು ಸ್ಮಶಾನ ಹಾಗೂ ಖಾಸಗಿ ಭೂಮಿಯಲ್ಲಿ ಹೂತಿಟ್ಟಿದ್ದು ಗೊತ್ತಾಗಿದೆ. ಇಲ್ಲೊಂದು ಟ್ವಿಸ್ಟ್ ಅಂಡ್ ಟರ್ನ್ ಕೂಡ ಇದೆ. ನವಜಾತ ಶಿಶುವಿನ ಶವ ಹೂತಿಟ್ಟ ಬಳಿಕ ಅದರ ಮೂಳೆಗಳನ್ನು ಯುವಕ ಭವಿನ್, ಮಕ್ಕಳಿಗೆ ಜನ್ಮ ಕೊಟ್ಟ ತನ್ನ ಗರ್ಲ್ ಫ್ರೆಂಡ್ ಅನಿಶಾಗೆ ನೀಡಿದ್ದಾನೆ. ಹೀಗಾಗಿ ಮಾಟಮಂತ್ರದ ಪೂಜೆಯನ್ನು ನಡೆಸಲು ಹೀಗೆ ವಿವಾಹಪೂರ್ವ ಮಕ್ಕಳಿಗೆ ಜನ್ಮ ಕೊಟ್ಟು, ನವಜಾತ ಶಿಶುಗಳ ಮೂಳೆಗಳನ್ನು ಪೂಜೆಗೆ ಬಳಕೆ ಮಾಡಿದ್ದಾರಾ ಎಂಬ ಅನುಮಾನ ಪೊಲೀಸರಿಗೆ ಬಂದಿದೆ!**




ಕೇರಳದಲ್ಲಿ ಯುವಕನೊಬ್ಬ ಮಧ್ಯರಾತ್ರಿ ಎರಡು ಮಕ್ಕಳ ಅಸ್ತಿಪಂಜರಗಳನ್ನು ಹಿಡಿದುಕೊಂಡು ಪೊಲೀಸ್ ಠಾಣೆಗೆ ಬಂದಿದ್ದಾನೆ. ಅದನ್ನು ನೋಡಿದ ಪೊಲೀಸರು ಕ್ಷಣಕಾಲ ಗಾಬರಿಗೊಳಗಾಗಿದ್ದಾರೆ. ಬಳಿಕ ವಿಚಾರಿಸಿದಾಗ ತನ್ನ ಹಾಗೂ ಯುವತಿಯ ಪ್ರೇಮ ಸಂಬಂಧ, ಲೈಂಗಿಕ ಸಂಬಂಧದಿಂದ ಎರಡು ಮಕ್ಕಳು ಹುಟ್ಟಿದ್ದವು. ಎರಡನ್ನೂ ಸಾರ್ವಜನಿಕ ಸ್ಮಶಾನ, ಖಾಸಗಿ ಭೂಮಿಯಲ್ಲಿ ಹೂತು ಹಾಕಿದ್ದೆ ಎಂದು 24 ವರ್ಷದ ಯುವಕ ಭವಿನ್ ಹೇಳಿದ್ದಾನೆ. ಕೇರಳದ ತ್ರಿಶೂರ್ ಜಿಲ್ಲೆಯ ಪುದುಕಾಡ್ ಪೊಲೀಸ್ ಠಾಣೆಗೆ ಬಂದ ಯುವಕ ಭವಿನ್‌ನನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ.



ಆಗ ವಿವಾಹ ಪೂರ್ವ ಲೈಂಗಿಕತೆ, ವಿವಾಹಪೂರ್ವ ಮಕ್ಕಳ ಜನನದ ಸ್ಟೋರಿ ಬಿಚ್ಚಿಕೊಂಡಿದೆ. ವಿವಾಹ ಪೂರ್ವ ಹುಟ್ಟಿದ ಮಕ್ಕಳನ್ನು ಕೊಂದು ಸ್ಮಶಾನ ಹಾಗೂ ಖಾಸಗಿ ಭೂಮಿಯಲ್ಲಿ ಹೂತಿಟ್ಟಿದ್ದು ಗೊತ್ತಾಗಿದೆ.

ಇಲ್ಲೊಂದು ಟ್ವಿಸ್ಟ್ ಅಂಡ್ ಟರ್ನ್ ಕೂಡ ಇದೆ. ನವಜಾತ ಶಿಶುವಿನ ಶವ ಹೂತಿಟ್ಟ ಬಳಿಕ ಅದರ ಮೂಳೆಗಳನ್ನು ಯುವಕ ಭವಿನ್, ಮಕ್ಕಳಿಗೆ ಜನ್ಮ ಕೊಟ್ಟ ತನ್ನ ಗರ್ಲ್ ಫ್ರೆಂಡ್ ಅನಿಶಾಗೆ ನೀಡಿದ್ದಾನೆ. ಹೀಗಾಗಿ ಮಾಟಮಂತ್ರದ ಪೂಜೆಯನ್ನು ನಡೆಸಲು ಹೀಗೆ ವಿವಾಹ ಪೂರ್ವ ಮಕ್ಕಳಿಗೆ ಜನ್ಮ ಕೊಟ್ಟು, ನವಜಾತ ಶಿಶುಗಳ ಮೂಳೆಗಳನ್ನು ಪೂಜೆಗೆ ಬಳಕೆ ಮಾಡಿದ್ದಾರಾ ಎಂಬ ಅನುಮಾನ ಪೊಲೀಸರಿಗೆ ಬಂದಿದೆ. ಈ ಬಗ್ಗೆ ಮಕ್ಕಳಿಗೆ ಜನ್ಮ ಕೊಟ್ಟಿದ್ದ 23 ವರ್ಷದ ಅನಿಶಾಳನ್ನು ಈಗ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

2020ರಲ್ಲಿ ಫೇಸ್‌ಬುಕ್‌ನಲ್ಲಿ ಭವಿನ್‌ಗೆ ಅನಿಶಾ ಪರಿಚಯವಾಗಿದೆ. ಅನಂತರ ಪ್ರೀತಿ, ಪ್ರೇಮದಲ್ಲಿ ಮುಳುಗಿ, ವಿವಾಹಪೂರ್ವ ಲೈಂಗಿಕತೆ ನಡೆಸಿದ್ದಾರೆ. ಇದರ ಪರಿಣಾಮ 2021 ರಲ್ಲಿ ತನ್ನ ಮನೆಯ ಬಾತ್ ರೂಮಿನಲ್ಲಿ ಮೊದಲ ಮಗುವಿಗೆ ಅನಿಶಾ ಜನ್ಮ ನೀಡಿದ್ದಾರೆ. ತಾನು ಜನ್ಮ ಕೊಟ್ಟ ಗಂಡು ಮಗು ಸಾವನ್ನಪ್ಪಿದೆ ಎಂದು ಅನಿಶಾ, ಭವಿನ್‌ಗೆ ಹೇಳಿದ್ದಾಳೆ. ಬಳಿಕ ಭವಿನ್ ಆ ನವಜಾತ ಶಿಶುವನ್ನು ಅನಿಶಾ ಮನೆಯ ಬಳಿ ಖಾಲಿ ಜಾಗದಲ್ಲಿ ಹೂತು ಹಾಕಿದ್ದಾನೆ. ನವಜಾತ ಶಿಶುವಿನ ಸಾವಿನ ಬಳಿಕ ಅನಿಶಾ, ಶಿಶುವಿನ ಮೂಳೆಗಳನ್ನು ಪಡೆದಿದ್ದಾಳೆ. ಅದೇ ರೀತಿ ಭವಿನ್ ಕೂಡ ಶಿಶುವಿನ ಮೂಳೆ ತೆಗೆದುಕೊಂಡಿದ್ದ.




2024 ರಲ್ಲಿ ಅನಿಶಾ-ಭವಿನ್ ವಿವಾಹಪೂರ್ವ ಸಂಬಂಧದಿಂದ ಮತ್ತೊಂದು ಮಗು ಹುಟ್ಟಿದೆ. ಈ ಬಾರಿ ಅನಿಶಾ, ಭವಿನ್ ಪತ್ನಿಯ ಮನೆಯಲ್ಲಿ ಮಗುವಿಗೆ ಜನ್ಮ ನೀಡಿದ್ದಾಳೆ. ಈ ಬಾರಿಯ ಹುಟ್ಟಿದ ಗಂಡು ಮಗು ಸಾವನ್ನಪ್ಪಿದೆ ಎಂದು ಅನಿಶಾ, ಭವಿನ್‌ಗೆ ಹೇಳಿದ್ದಾಳೆ. ಬಳಿಕ ಮಗುವಿನ ಶವದೊಂದಿಗೆ ಭವಿನ್ ಮನೆಗೆ ಬಂದಿದ್ದಾಳೆ. ಬಳಿಕ ಇಬ್ಬರು ಸೇರಿ ಮಗುವಿನ ಅಂತ್ಯಸಂಸ್ಕಾರ ಮಾಡಿದ್ದಾರೆ.



ಈಗ ಭವಿನ್ ತಾನಾಗಿಯೇ ಪೊಲೀಸ್ ಠಾಣೆಗೆ ಬಂದು ಎರಡು ನವಜಾತ ಶಿಶುಗಳ ಹತ್ಯೆ, ಮಣ್ಣಿನಲ್ಲಿ ಹೂತು ಹಾಕಿದ್ದನ್ನು ಪೊಲೀಸರ ಬಳಿ ಹೇಳಲು ಕಾರಣವೇನು ಎಂಬ ಪ್ರಶ್ನೆಯೂ ಉದ್ಭವವಾಗಿದೆ. ಇದಕ್ಕೆ ಉತ್ತರವೂ ಇದೆ. ಅನಿಶಾ, ಭವಿನ್‌ನನ್ನು ಬಿಟ್ಟು ಬೇರೊಬ್ಬನನ್ನು ಮದುವೆಯಾಗಲು ಮುಂದಾಗಿದ್ದಳು. ಇದರಿಂದ ಕೋಪಗೊಂಡ ಭವಿನ್, ನವಜಾತ ಶಿಶುಗಳ ಅಸ್ಥಿಪಂಜರವನ್ನು ತಗೊಂಡು ಭಾನುವಾರ ಮಧ್ಯರಾತ್ರಿ ಪುದುಕಾಡ್ ಪೊಲೀಸ್ ಠಾಣೆಗೆ ಬಂದಿದ್ದಾನೆ.

ಮಧ್ಯರಾತ್ರಿ ಚೀಲದಲ್ಲಿ ನವಜಾತ ಶಿಶುಗಳ ಅಸ್ಥಿಪಂಜರ ತಗೊಂಡು ಭವಿನ್ ಪೊಲೀಸ್ ಠಾಣೆಗೆ ಬಂದಿದ್ದ ಎಂದು ಪೊಲೀಸರು ಹೇಳಿದ್ದಾರೆ. ಈ ಹಂತದಲ್ಲಿ ಇದನ್ನು ನರಹತ್ಯೆ ಎಂದು ಪರಿಗಣಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಅನಿಶಾಳನ್ನು ಕೂಡ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇನ್ನೂ ನವಜಾತ ಶಿಶುಗಳನ್ನು ಹೂತು ಹಾಕಿದ್ದ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸುವುದಾಗಿ ಪೊಲೀಸರು ಹೇಳಿದ್ದಾರೆ. ಈ ಕೇಸ್ ಎಲ್ಲ ಆ್ಯಂಗಲ್ ನಲ್ಲೂ ತನಿಖೆ ನಡೆಸುವುದಾಗಿ ಪೊಲೀಸರು ಹೇಳಿದ್ದಾರೆ. ಮನೆಯವರಿಗೆ ಹೆದರಿ ಅನಿಶಾ, ನವಜಾತ ಶಿಶುಗಳನ್ನು ಹತ್ಯೆ ಮಾಡಿರಬಹುದೇ ಎಂಬ ಅನುಮಾನವೂ ಇದೆ. ಮಾಟಮಂತ್ರ ನಡೆಸಲು ನವಜಾತ ಶಿಶುಗಳ ಅಸ್ಥಿಪಂಜರ, ಮೂಳೆಯನ್ನು ಬಳಕೆ ಮಾಡಿರಬಹುದೆ ಎಂಬ ಅನುಮಾನವೂ ಇದೆ. ಈ ಎಲ್ಲ ಆ್ಯಂಗಲ್‌ಗಳಲ್ಲೂ ತ್ರಿಶೂರ್ ಜಿಲ್ಲೆಯ ಪೊಲೀಸರು ಈಗ ತನಿಖೆ ನಡೆಸುತ್ತಿದ್ದಾರೆ. ☯

---

10 ☞

ಯಾಗಿದೆಯೋ ಅಲ್ಲಿಯೂ ಸಹ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕು. ಜಲಮೂಲಗಳನ್ನು ರಕ್ಷಣೆ ಮಾಡಬೇಕು ಎಂದು ಸೂಚಿಸಿದರು. ಸಾರ್ವಜನಿಕ ಹಿತಾಸಕ್ತಿಯ ಯಾವುದೇ ಸಮಸ್ಯೆಯಾಗಲೀ ಲೋಕಾಯುಕ್ತ ಸಂಸ್ಥೆಗೆ ದೂರು ನೀಡಿ, ಮೊದಲು ಜಿಲ್ಲಾ ವ್ಯಾಪ್ತಿಯ ಅಧೀಕ್ಷಕರು, ಪ್ರಾಥಮಿಕ ತನಿಖೆ ನಡೆಸಿ ಪರಾಮರ್ಶೆ ಮಾಡುತ್ತಾರೆ. ನಂತರ ದೂರು ದಾಖಲಿಸಿಕೊಂಡು ಸಮಸ್ಯೆ ಸರಿಪಡಿಸಲು ಪ್ರಯತ್ನ ಮಾಡುತ್ತೇವೆ. ಅಧಿಕಾರಿಗಳ ನಿಷ್ಕ್ರಿಯತೆಯನ್ನು ನಾವು ಸಹಿಸುವುದಿಲ್ಲ.


ಡಿಸಿ ಯಶವಂತ್ ಗುರುಕರ್ ಹತ್ತಿರ ಮಾಹಿತಿ ಪಡೆಯುತ್ತಿರುವುದು

ಲಂಚ ಪಡೆಯುವ ಅಧಿಕಾರಿಗಳನ್ನು ಸುಮ್ಮನೆ ಬಿಡುವುದಿಲ್ಲ. ನೇರವಾಗಿ ನಾಲ್ಕೈದು ಮಂದಿ ಅಧಿಕಾರಿಗಳನ್ನು ಜೈಲಿಗೆ ಅಟ್ಟಿದರೆ ಅವರಿಗೆ ಬುದ್ಧಿ ಬರುತ್ತದೆ ಎಂದು ಎಚ್ಚರಿಕೆ ನೀಡಿದರು.


ಕೂಡ್ಲುರು ಶ್ರೀರಾಮ ದೇವಾಲಯಕ್ಕೆ ಭೇಟಿ ಕೊಟ್ಟ ಉಪ ಲೋಕಾಯುಕ್ತ

ಕಾರ್ಯಾಚರಣೆಯಲ್ಲಿ ಜಿಲ್ಲಾಧಿಕಾರಿಗಳಾದ ಯಶವಂತ್ ಗುರುಕರ್, ಜಿಲ್ಲಾ ಲೋಕಾಯುಕ್ತ ಎಸ್ಪಿ ಸ್ನೇಹಾ, ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೊಟ್ರೇಶ್, ಜಿಲ್ಲಾ ಪರಿಸರ ಮಾಲಿನ್ಯ ಸಹಾಯಕ ಅಧಿಕಾರಿ ಮಂಜುನಾಥ್ ಸೇರಿದಂತೆ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಚನ್ನಪಟ್ಟಣ ತಾಲ್ಲೂಕು, ನಗರಸಭೆ ಅಧಿಕಾರಿಗಳು ಪಾಲ್ಗೊಂಡಿದ್ದರು. ☯

---

# ಮೈಸೂರಿನ ಹೊರವಲಯದ ಮನೆಯಲ್ಲಿ ಮಾಂಸ ದಂಧೆ!

11 ☞

ದಂಧೆ ನಡೆಯುತ್ತಿದ್ದ ದಾಸನಕೊಪ್ಪಲುನಲ್ಲಿದ್ದ ಮನೆ ಮೇಲೆ ಜುಲೈ 5ರಂದು ಶನಿವಾರ ದಾಳಿ ಮಾಡಿದ್ದಾರೆ.

ಈ ವೇಳೆ ಆ ಮನೆಯಲ್ಲಿ ದಂಧೆಯಲ್ಲಿ ನಿರತರಾಗಿದ್ದ ಮಂಜು ಮತ್ತು ಆತನ ಸಹಚರ ಸೇರಿದಂತೆ ಆರು ಜನ ಗಿರಾಕಿಗಳು ಸಿಕ್ಕಿ ಬಿದ್ದಿದ್ದು, ಇಲ್ಲಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಮಂಜು ಮತ್ತು ಆತನ ಸಹಚರನನ್ನು ಬಂಧಿಸಲಾಗಿದ್ದರೆ, ಆರು ಜನರನ್ನು ವಶಕ್ಕೆ ಪಡೆದು ಕಾನೂನು ಕ್ರಮ ಕೈಗೊಳ್ಳಲಾಗಿದೆ. ಆರೋಪಿಗಳ ವಿರುದ್ಧ ಮಾನವ ಕಳ್ಳಸಾಗಾಣಿಕೆ ಕಾಯ್ದೆ-1956 ಹಾಗೂ ಭಾರತೀಯ ನ್ಯಾಯ ಸಂಹಿತೆ-2023 ಕಾಯ್ದೆಯಡಿ ದೂರು ದಾಖಲಾಗಿದೆ.



ಇನ್ನಾದರೂ ಹೊಸ ಬಡಾವಣೆಗಳಲ್ಲಿ ವಾಸ ಮಾಡುವವರೇ ಎಚ್ಚರವಾಗಿರಿ. ಇಂತಹವರು ನಿಮ್ಮ ಮನೆಯ ಸಮೀಪವೇ ಇದ್ದರೂ ಇರಬಹುದು. ಅದರಲ್ಲೂ ನಮನೆಯನ್ನು ಬಾಡಿಗೆ ಕೊಡುವ ಮಾಲೀಕರು ಕೂಡ ಎಚ್ಚೆತ್ತುಕೊಳ್ಳಬೇಕಿದೆ. ಬಾಡಿಗೆ ಕೊಡುವ ಮುನ್ನ ಅವರ ಪೂರ್ವಾಪರ ಅರಿತು ಮನೆಯನ್ನು ಬಾಡಿಗೆ ನೀಡಿ. ಇಲ್ಲದೆ ಹೋದರೆ ನಿಮಗೂ ದಂಧೆಕೋರರು ನೀರು ಕುಡಿಸುವುದರಲ್ಲಿ ಎರಡು ಮಾತಿಲ್ಲ. ☯

# ಅವಳಿ ಮಕ್ಕಳಿಗೆ ಅಮ್ಮ ಆಗ್ತಿದ್ದಾರೆ ಭಾವನಾ!

ಚಿತ್ರರಂಗದಲ್ಲಿ ಕೆಲ ವೈಯಕ್ತಿಕ ಕಾರಣಗಳಿಂದ ವಿವಾಹವಾಗದ ಅನೇಕ ನಟ,ನಟಿಯರಿದ್ದಾರೆ. ವೃತ್ತಿ ಬದುಕಿನಲ್ಲಿ ಉತ್ತುಂಗದಲ್ಲಿರುವಾಗ ಮದುವೆಯಾದರೆ ಅವಕಾಶಗಳು ಕಡಿಮೆಯಾಗ್ತವೆ ಎಂಬ ಕಾರಣಕ್ಕೊ ಅಥವಾ ಬೇರೆ ಬೇರೆ ಕಾರಣಗಳಿಂದ ಸಿನಿಮಾ ತಾರೆಯರು ಮದುವೆಯಾಗೋದು ತಡವಾಗುತ್ತೆ! ವಯಸ್ಸು ಮೀರಿದ ಮೇಲೆ ಸೂಕ್ತ ಜೋಡಿ ಸಿಗೋದು ಕಷ್ಟವೇ!!

ಈ ವಿಚಾರದಲ್ಲಿ ಆಗಾಗ ಗಾಸಿಪ್ ಏಟು ಬೀಳ್ತಾನೆ ಇರುತ್ತೆ! ಅವರಿವರೊಂದಿಗೆ ಮದುವೆಗಳು ಆಗ್ತಾನೆ ಇರುತ್ತವೆ! ನೀವು ಹುಡುಗನನ್ನು ನೋಡಿ, ಮದುವೆಯಾಗಲು ನಾವು ರೆಡಿ. ನಮ್ಮ ಜಾತಿ ಹುಡುಗರನ್ನೇ ನಾವು ಮದುವೆಯಾಗುತ್ತೇವೆ ಎಂದು ನಟಿಯರಾದ ರಮ್ಯಾ, ರಚಿತಾ ರಾಮ್ ಆಗಾಗ ಹೇಳ್ತಾನೆ ಇರ್ತಾರೆ. ಇಬ್ಬರೂ ಇನ್ನೂ ಮದುವೆಯಾಗಿಲ್ಲ, ಇದು ಅವರ ವೈಯಕ್ತಿಕ ವಿಷಯ ಬಿಡಿ...

"ಗಂಡಿಗಿಂತ ಹೆಣ್ಣಿಗೆ ಬಯಕೆ ಜಾಸ್ತಿ.. ಸಂಭೋಗ ಮಾಡಿದಾಕ್ಷಣ ಆಸೆ ಈಡೇರಿದಂತಲ್ಲ": ಭಾವನಾ
#sandalwood #BhavanaRamanna
#kannadafilmibeat



ಫ್ಯಾಂಟಸಿ!

kannada.filmibeat.com
"ಗಂಡಿಗಿಂತ ಹೆಣ್ಣಿಗೆ ಬಯಕೆ ಜಾಸ್ತಿ.. ಸಂಭೋಗ ಮಾಡಿದಾಕ್ಷಣ ಆಸೆ ಈಡೇರಿದಂತಲ್ಲ": ಭಾವನಾ

ಆದ್ರೆ, ಇವತ್ತಿನ ಹೊಸ ವಿಷಯ ಏನೆಂದರೆ, ಖ್ಯಾತ ನಟಿ, 'ಅವಿವಾಹಿತೆ' ಭಾವನಾ ರಾಮಣ್ಣ, ತಮ್ಮ 40ನೇ ವಯಸ್ಸಿನಲ್ಲಿ ತಾಯಿಯಾಗುವ ತೀರ್ಮಾನ ತೆಗೆದುಕೊಂಡಿದ್ದಾರೆ! ತಾಯಿಯಾಗಬೇಕೆಂಬ ಹಂಬಲ ಭಾವನಾ ಅವರಲ್ಲಿ ಬಹು ದಿನಗಳಿಂದ ಇತ್ತು. ಹೀಗಾಗಿ, ಅವರು ಇನಲು ವಿಟ್ರೊ ಫರ್ಟಿಲೈಸೇಷನ್ **(In vitro fertilization) (IVF)** ಮೂಲಕ ತಮ್ಮ ಆಸೆಯನ್ನು ಈಡೇರಿಸಿ ಕೊಳ್ಳುತ್ತಿದ್ದಾರೆ! **IVF** ಪ್ರಯೋಗಾಲಯದಲ್ಲಿ ಮೊಟ್ಟೆ ಮತ್ತು ವೀರ್ಯವನ್ನು ಸಂಯೋಜಿಸುವ ಮೂಲಕ ಗರ್ಭಧರಿಸಲು ಸಹಾಯ ಮಾಡುವ ಒಂದು ಚಿಕಿತ್ಸೆಯಾಗಿದೆ. ಇದರ ಮೂಲಕ ಭಾವನಾ ಈಗ ಆರು ತಿಂಗಳ ಗರ್ಭಿಣಿಯಾಗಿದ್ದಾರೆ!ಅವರ ಗರ್ಭದಲ್ಲಿ ಅವಳಿ ಮಕ್ಕಳು ಆರೋಗ್ಯವಾಗಿ ಬೆಳೆಯುತ್ತಿದ್ದು, ಈ ವರ್ಷದ ಕೊನೆಯಲ್ಲಿ ಅವಳಿ ಮಕ್ಕಳಿಗೆ ಜನ್ಮ ನೀಡಲಿದ್ದಾರೆ!!

ಕಾಂಗ್ರೆಸ್ ಸರ್ಕಾರದಲ್ಲಿ ಮಕ್ಕಳ ಭವನದ ಅಧ್ಯಕ್ಷೆಯಾಗಿದ್ದ ಭಾವನಾ ರಾಮಣ್ಣ, ಚಿಕ್ಕಂದಿನಿಂದಲೂ ಮಕ್ಕಳ ಜೊತೆಗಿರುವುದನ್ನು ಇಷ್ಟಪಡುತ್ತಿದ್ದರು. ತಮ್ಮ 20ನೇ ವಯಸ್ಸಿನಲ್ಲಿ ತಾಯಿಯಾಗುವ ಯೋಚನೆ ಗಂಭೀರವಾಗಿರಲಿಲ್ಲವಂತೆ. 30ನೇ ವಯಸ್ಸಿನಲ್ಲಿ ಪ್ರೀತಿಯ ಆಕಾಂಕ್ಷೆಯಿದ್ದರೂ, ತಾಯಿಯಾಗುವ ಬಗ್ಗೆ ಯೋಚನೆ ಮಾಡಿರಲಿಲ್ಲವಂತೆ.



ನಾನು ಯಾವಾಗಲೂ ಮಕ್ಕಳ ಸುತ್ತಲಿರುವ ವಾತಾವರಣದಲ್ಲಿ ಬೆಳೆದೆ. ನನ್ನ ತಂದೆ-ತಾಯಿ, ಮೂವರು ಸಹೋದರ-ಸಹೋದರಿಯರ ಮಧ್ಯೆ, ಸಂಬಂಧಿಕರು ಮತ್ತು ಸ್ನೇಹಿತರ ಜೊತೆ ತುಂಬಿದ ಮನೆಯಲ್ಲಿ ಬೆಳೆದೆ. ಆದರೆ 40ನೇ ವಯಸ್ಸಿಗೆ ತಲುಪಿದಾಗ ತಾಯಿಯಾಗಬೇಕೆಂಬ ಆಸೆಯನ್ನು ತಡೆಯಲು ಸಾಧ್ಯವಾಗಲಿಲ್ಲ' ಎಂದು ಭಾವನಾ ರಾಮಣ್ಣ ಆಂಗ್ಲ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.



ಮದುವೆಯಾಗಿ ಪತಿಯಿಂದ ಮಕ್ಕಳನ್ನು ಪಡೆಯೋದು ನಮ್ಮ ದೇಶದಲ್ಲಿ ಸಂಪ್ರದಾಯಿಕ ರೀತಿಯಲ್ಲಿ ನಡೆಯುತ್ತೆ. ಆದರೆ ಭಾವನಾ ಅವರಿಗೆ ಯಾಕೋ ಏನೋ ಮದುವೆಯಾಗಲು ಸಾಧ್ಯವಾಗಲಿಲ್ಲ! ರಾಜಕೀಯ ರಂಗದಲ್ಲಿ ಸಕ್ರಿಯವಾಗಿದ್ದರೂ, ವಿಧಾನಸಭೆ, ವಿಧಾನಪರಿಷತ್‌ಗೆ ಅವರ ಹೆಸರು ಪ್ರಬಲವಾಗಿ ಕೇಳಿ ಬಂದರೂ, ಅಂತಿಮ ಆಯ್ಕೆ ಸಾಧ್ಯವಾಗಲಿಲ್ಲ!

ಈ ಬೇಸರದಲ್ಲೇ ತಮ್ಮ ವೈಯಕ್ತಿಕ ಆಸೆಗಳನ್ನು ಈಡೇರಿಸಿಕೊಳ್ಳುವತ್ತ ಗಮನ ಹರಿಸಿದ್ದ ಭಾವನಾ ಕೊನೆಗೆ, ಐವಿಎಫ್‌ ಮೂಲಕ ಮಗುವನ್ನು ಪಡೆಯಲು ನಿರ್ಧರಿಸಿ 'ಐವಿಎಫ್' ಚಿಕಿತ್ಸೆ ಮಾಡಿಸಿಕೊಂಡಿದ್ದರು. ಇನ್ನೂ ಮೂರು ತಿಂಗಳಲ್ಲಿ ಅವಳಿ ಮಕ್ಕಳಿಗೆ ಜನ್ಮ ನೀಡಲಿದ್ದಾರೆ.

ನನ್ನ ಮಕ್ಕಳಿಗೆ ತಂದೆ ಇಲ್ಲದಿರಬಹುದು, ಆದರೇ, ದಯಾಳು ಪುರುಷರು ನನ್ನ ಮಕ್ಕಳ ಸುತ್ತ ಇರುತ್ತಾರೆ ಎಂದು ಭಾವನಾ ಭಾವನಾತ್ಮಕವಾಗಿ ಹೇಳಿಕೊಂಡಿದ್ದಾರೆ. ದಯಾಳು ಪುರುಷರು ಎಂದರೆ ಕರುಣೆ ಮತ್ತು ಸಹಾನುಭೂತಿ ಉಳ್ಳ ಪುರುಷರು ಎಂದರ್ಥ. ಅಂದಹಾಗೆ, ಭಾವನಾ ಅವರ ಮೂಲ ಹೆಸರು ನಂದಿನಿ. ಕರಾವಳಿ ಕನ್ಯೆ. ಚಿತ್ರರಂಗಕ್ಕೆ ಬಂದ ಮೇಲೆ ತಮ್ಮ ಹೆಸರನ್ನು ಭಾವನಾ ಎಂದು ಬದಲಾಯಿಸಿಕೊಂಡಿದ್ದಾರೆ.

ನಿರ್ದೇಶಕ ಕೂಡ್ಲು ರಾಮಕೃಷ್ಣ ಅವರು ನಂದಿನಿ ಎಂದಿದ್ದ ಹೆಸರನ್ನು ಭಾವನಾ ಎಂದು ಬದಲಿಸಿ ತುಳು ಚಿತ್ರರಂಗಕ್ಕೆ ಪರಿಚಯಿಸಿದ್ದರು. ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ 'ಶಾಂತಿ' ಸಿನಿಮಾದಲ್ಲಿ ಏಕ ವ್ಯಕ್ತಿ ಪ್ರದರ್ಶನವನ್ನು ನೀಡಿದ್ದರು ಭಾವನಾ. ಆ ಸಿನಿಮಾ ಜನರ ಮೆಚ್ಚುಗೆ ಮತ್ತು ಪ್ರಶಸ್ತಿ ಎರಡನ್ನೂ ಗಳಿಸಿ ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಲ್ಲಿ ದಾಖಲಾಗಿದೆ.

1996ರಿಂದಲೂ ಸಿನಿಮಾ ರಂಗದಲ್ಲಿ ಸಕ್ರಿಯವಾಗಿರುವ ಭಾವನಾ, 35ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅವರ ಅಭಿನಯದ ನಂ.1, ಕಾವ್ಯ, ಚಂದ್ರಮುಖಿ ಪ್ರಾಣಸಖಿ, ಚಿಂಗಾರಿ ಚಿತ್ರಗಳನ್ನು ಮರೆಯುವಂತಿಲ್ಲ! ತುಳು ಚಿತ್ರರಂಗದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಭಾವನಾ, 'ಚಂದ್ರಮುಖಿ ಪ್ರಾಣಸಖಿ', 'ನೀ ಮುಡಿದ ಮಲ್ಲಿಗೆ', 'ಕ್ಷಾಮ', 'ಭಾಗೀರಥಿ' ಸಿನಿಮಾಗಾಗಿ ನಾಲ್ಕು ಭಾರಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬಾಲಿವುಡ್ ಸಿನಿಮಾಗಳಲ್ಲಿ ನಟಿಸಬೇಕೆಂಬ ಆಸೆಯಿಂದ ಭಾವನಾ, ಮುಂಬೈಗೆ ಹೋಗಿದ್ದರು. 'ಫ್ಯಾಮಿಲಿ'ಯಲ್ಲಿ ಬಿಗ್ ಬಿ ಅಮಿತಾಬ್ ಬಚ್ಚನ್ ಜೊತೆ ನಟಿಸಿದ್ದರು. ಅದೇಕೋ ಮತ್ತೆ ಮುಂಬೈ ಸಹವಾಸಕ್ಕೆ ಹೋಗಲಿಲ್ಲ! ಸದ್ಯ ಭಾವನಾ ರಾಮಣ್ಣ ಅವರ ಈ ನಿರ್ಧಾರಕ್ಕೆ ನೆಟ್ಟಿಗರು ಭಾರಿ ಮೆಚ್ಚುಗೆ ಸೂಚಿಸಿದ್ದಾರೆ! ☯

ತಾಯ್ತನ ಹೆಣ್ಣಿನ ಆಜನ್ಮ ಸಿದ್ಧ ಹಕ್ಕು ನಿಜ. ಆದರೆ ಮದುವೆ ಎನ್ನುವುದು ಸಾಮಾಜಿಕ ಬದ್ಧತೆ. ಅದಿಲ್ಲದೆಯೋ ಇರಬಹುದೆಂಬುದು ಒಪ್ಪತಕ್ಕುದೇಯಾದರೂ, ತಂದೆ ಇಲ್ಲದೆ ಮಗುವನ್ನ ಪಡೆಯುವ ನಿರ್ಧಾರಗಳು ಸಮಾಜಕ್ಕೆ ನೀಡುವ ಸಂದೇಶವೇನು? ಎಂಬ ಪ್ರಶ್ನೆಯನ್ನು ಹುಟ್ಟು ಹಾಕದೇ ಇರದು. ಹೆಣ್ಣು ಗಂಡಿನ ಸಹವಾಸ ಬೇಡವೆಂದೋ, ಗಂಡು ಹೆಣ್ಣಿನ ಸಹವಾಸವೇ ಬೇಡವೆನ್ನುವ ಜಮಾನದಲ್ಲಿ ನಾವಿದ್ದೇವೆಯೇ ಎಂಬ ಆತಂಕ ಇನ್ನೊಂದು ಕಡೆ. ಕೂಡು ಕುಟುಂಬದಿಂದ ಒಡೆದು ಚೂರಾಗಿ, ವಿಭಕ್ತ ಕುಟುಂಬದತ್ತ ಸಾಗಿದ ಕಾಲಮಾನ ಕಳೆದು, ಗಂಡ ಹೆಂಡತಿ ಮಕ್ಕಳು ಕಲ್ಪನೆಯಲ್ಲಾದರೂ ಮನುಷ್ಯ ಸುಖವಾಗಿದ್ದಾನೆ ಬಿಡು ಎನ್ನುವಷ್ಟರಲ್ಲಿ, ಮಕ್ಕಳೇ ಬೇಡ ಗಂಡ ಹೆಂಡತಿ ಎನ್ನುವ ಚಿಂತನೆ ಬಂದು ನಿಂತದ್ದನ್ನು ಕಂಡೆವು. ಸಿಹಿಕಹಿ ಚಂದ್ರು ಅವರ ಮಗಳು ಮಕ್ಕಳೇ ಬೇಡ ಎಂಬ ಹೇಳಿಕೆ ನೀಡಿ ಟ್ರೋಲಾದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

## ತಂದೆ ಇಲ್ಲದೆ ಮಗುವನ್ನು ಪಡೆಯೋ ನಿರ್ಧಾರ ಎಷ್ಟು ಸರಿ?!

ಈಗ ಹೊಸ ಟ್ರೆಂಡ್ ಗಂಡಿಲ್ಲದೆ ಮಕ್ಕಳೆತ್ತು ಸಾಕುವತ್ತ ಅಭಿವೃದ್ಧಿ ಹೊಂದಿದ ಚಿಂತನೆಗಳೊಂದಿಗೆ ಸಮಾಜ ಅರಳುತ್ತಿದೆಯೇ?

ನಟಿ ಭಾವನಾ ಈ ವಿಷಯದಲ್ಲಿ ಈಗ ಸುದ್ದಿಯಲ್ಲಿರುವ ನಟಿ. ಮದುವೆಯಾಗದೆ ತಂತ್ರಜ್ಞಾನದ ಮೂಲಕ ಅವಳಿ ಮಕ್ಕಳನ್ನು ಪಡೆಯುತ್ತಿರುವುದಾಗಿ ಘೋಷಿಸಿಕೊಂಡಿದ್ದಾರೆ. ಹೀಗೆ ಕರಣ್ ಜೋಹಾರ್ ಸಹ ಮದುವೆಯಾಗದೆ ಎರಡು ಮಕ್ಕಳ ತಂದೆಯಾದರು. ಇದು ಕನ್ನಡದಲ್ಲಿ ಹೊಸ ಸುದ್ದಿ ಅಷ್ಟೆ. ಆದರೆ ಬಾಲಿವುಡ್ ಮಂದಿ ಇದನ್ನು ಸಾಕಷ್ಟು ಟ್ರೆಂಡ್ ಮಾಡಿ ಸರೋಗೆಸ್ಸಿ ಮೂಲಕ ಮಕ್ಕಳನ್ನು ಪಡೆದಿರುವುದು ತಿಳಿದೇ ಇದೆ. ಆರೋಗ್ಯದ ಕಾರಣ ಕೊಟ್ಟು, ಸೌಂದರ್ಯ ಕಾಪಾಡುವ ಹುಚ್ಚಾಟದಲ್ಲಿ ರಕ್ತ ಮಾಂಸ ಬಸಿಯದೆ ಸುಸ್ತಿಲ್ಲದೆ ಅಮ್ಮ ಅಪ್ಪ ಆದವರೇ ಹೆಚ್ಚು. ಅದರೆ ಇವೆಲ್ಲ ಎಷ್ಟು ಸರಿ? ಇವರೆಲ್ಲ ಈ ಪೀಳಿಗೆಗೆ ಅಥವಾ ಮುಂಬರುವ ಪೀಳಿಗೆಗೆ ನೀಡುತ್ತಿರುವ ಸಂದೇಶದ ಬಗ್ಗೆ ಕಳವಳವಾಗುತ್ತಿದೆ. ನಮ್ಮ ಮನೆಯ ಮಕ್ಕಳೂ ನಾಳೆ ಇಂಥದ್ದೇ ನಿರ್ಧಾರಕ್ಕೆ ಬಂದರೆ ಆಶ್ಚರ್ಯವಿಲ್ಲ. ಸಂಧಿಗ್ಧ ಪರಿಸ್ಥಿತಿಗೆ ಬಳಸಬೇಕಾದ ಇಂತಹ ತಂತ್ರಜ್ಞಾನ ಮುಖ್ಯವಾಹಿನಿಗೆ ಬಂದು ನಿಂತರೆ ಪ್ರಕೃತಿಯ ವಿರುದ್ಧ ತೊಡೆ ತಟ್ಟಿದಂತೆಯೇ!

ಇತ್ತೀಚಿನ ಅಧಿಕ ಶಿಕ್ಷಿತ ಗಂಡಿಗೆ ಹೆಣ್ಣು, ಹೆಣ್ಣಿಗೆ - ಗಂಡು ಮ್ಯಾಚ್ ಮಾಡಿ ಮದುವೆ ಮಾಡುವುದು ದೊಡ್ಡ ತಲೆನೋವಾಗಿರುವ ಸಂದರ್ಭಗಳೊಂದಿಗೆ, ಕೂಡಿ ಬಾಳುವ ಸಂಯಮ ತೂರಿ ಹೋಗುತ್ತಿರುವ ಕಾಲದಲ್ಲಿ ಇಂತಹ ನಿರ್ಧಾರಗಳು ಎಳೆಯ ಮನಸ್ಸುಗಳನ್ನು ಬೇರೆಯದೇ ಆಲೋಚನೆಗೆ ತಳ್ಳುವುದರಲ್ಲಿ ಸಂಶಯವಿಲ್ಲ. ಇವರೇನೇ ಮಾಡಿಕೊಂಡರೂ ಮಾಧ್ಯಮದ ಮೂಲಕ ಪ್ರಚಾರಕ್ಕೆ ನಿಲ್ಲದಿದಗದರೆ ಸಮಾಜ ಸುರಕ್ಷಿತವಾಗಿದ್ದೀತು. ಇದು ನನ್ನ ಖಾಸಗಿ ವಿಷಯವೆಂದು ಮೂಗು ಮುರಿಯುವುದಾದರೆ ನೀವೇಕೆ ಮಾಧ್ಯಮಗಳ ಮುಂದೆ ಢಂಗೂರ ಸಾರುತ್ತೀರೋ ಅರಿಯೆವು.

ಇನ್ನು ಕೆಲವರು ಕೇಳಬಹುದು ಗಂಡನನ್ನು/ಹೆಂಡತಿಯನ್ನು ಕಟ್ಟಿಕೊಂಡು ಯಾರು ಆರಾಮಾಗಿದ್ದಾರೆ? ಅಲ್ಲೆಲ್ಲೋ ವರದಕ್ಷಿಣೆಗೆ ಹೆಣ್ಣು ಬಲಿಯಾಗಿದ್ದಾಳೆ, ಇಲ್ಲೆಲ್ಲೋ ಮದುವೆಯಾಗಿ ಸುಖವಾಗಿರದೆ ನರಳುತ್ತಿದ್ದಾಳೆ ಇತ್ಯಾದಿ ಇತ್ಯಾದಿ ಹಲವು ಘಟನೆಗಳನ್ನು ನೆನಪಿಸಿ ಸಮರ್ಥಿಸಬಹುದು. ಆದರೆ ಇದು ಪ್ರಕೃತಿಯ ನಿಯಮ. ಗಂಡು ಹೆಣ್ಣೆಂಬ ಎರಡು ಜೀವಗಳ ಬಾಳ್ವೆಗೆ, ಸಮಾಗಮಕ್ಕೆ ನಾಂದಿಯಾಡುವ ಪದ್ಧತಿ. ಇದನ್ನೇ ನಿಮ್ಮ ಯಾವುದೋ ತಗಡು ಕಾರಣಗಳಿಗೆ ರದ್ದತಿ ಮಾಡಿಕೊಂಡು, ಸೆಲೆಬ್ರಿಟಿ ಯಾದ ನೀವೊಬ್ಬರು ಜಯಿಸಿ ಬಿಡಬಹುದು. ಆದರೆ ಮುಂದಿನ ಪೀಳಿಗೆ ಇಂಥ ಹುಚ್ಚಾಟಕ್ಕಿಳಿದರೆ ಎಲ್ಲರೂ ನೆಮ್ಮದಿ ಇಂದಿರಲು ಸಾಧ್ಯವೇ? ಜೈವಿಕ ಚಕ್ರವೇ ಹಾಳಾದೀತಲ್ಲವೇ?

ಹುಟ್ಟು ಮಕ್ಕಳನ್ನು ನೀವೇನೋ ತಂದೆ ತಾಯಿ ಇಬ್ಬರೂ ಆಗಿ ಬೆಳೆಸುವಿರಿ. ಆದರೆ ಆ ಹುಟ್ಟುವ ಮಕ್ಕಳಿಗೆ ಅಪ್ಪನ ಪ್ರೀತಿ ಬೇಡವೇ? ಸಮಾಜ ಕೇಳುವ ಪ್ರಶ್ನೆಗೆ ಉತ್ತರ ನೀಡುತ್ತಲೇ ಇರಬೇಕೆ? ಆದಾಗ್ಯೂ ಆ ಮಕ್ಕಳ ತಂದೆ ಪ್ರೀತಿ ಪಡೆಯುವ ಸ್ವಾತಂತ್ರವನ್ನು ನೀವು ಕಸಿದುಕೊಂಡಂತಲ್ಲವೇ? ದಯಮಾಡಿ ಯುವ ಪೀಳಿಗೆಯೇ ಇವರ ಈ ಹುಚ್ಚಾಟಗಳನ್ನು ಅನುಸರಿಸದಿರಿ... ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 13.7.2025

# ಮಹಾ ಸುಳ್ಳಿ ರಶ್ಮಿಕಾ ಮಂದಣ್ಣ
## ತಾನೇ ಮೊದಲ ಕೂರ್ಗ್ ಸ್ಟಾರ್ ಎಂದಳಲ್ಲ...



ಸ್ಟೈಲಲಿ ರಶ್ಮಿಕಾ ಮಂದಣ್ಣ ಸಂದರ್ಶನ ಒಂದರಲ್ಲಿ, ಕೊಡವ ಜನಾಂಗದ ಮೊದಲ ನಟಿ ನಾನೇ... ಎಂದು ಎದೆಯುಬ್ಬಿಸಿ ಹೇಳಿಕೊಂಡಿದ್ದಾಳೆ! ರಶ್ಮಿಕಾಳ ಯಶಸ್ಸಿಗೆ ಮತ್ತು ಖ್ಯಾತಿಗೆ ಭಾರಿ ಪ್ರಶಂಸೆ ಸಲ್ಲಿಸೋಣ. ಆದರೆ, ಈ ಹೇಳಿಕೆಯನ್ನು ಖಂಡಿಸಲೇಬೇಕಿದೆ ಅಲ್ವೇ. ಕೊಡಗಿನಿಂದ ಇವಳೇ ಮೊದಲಲ್ಲ, ಬಹಳಷ್ಟು ತಾರೆಯರು ಬಂದಿದ್ದಾರೆ. ಆಗಿನ ಕಾಲದ ಶಶಿಕಲಾ ಎನ್ನುವ ಕಲಾವಿದೆಯಿಂದ ಹಿಡಿದು, ಈಗಿನ ಕಾಲದ ಕೊಡವ ನಟಿಯರ ತನಕದ ಚಿತ್ರರಂಗದ ನಂಟಿನ ಇತಿಹಾಸವು ಬಹಳ ದೊಡ್ಡದಿದೆ.

ರಶ್ಮಿಕಾಗಿಂತಲೂ ಮುಂಚೆ ತೆಲುಗು ನಾಡಲ್ಲಿ ನಟಿಸಿ, ಸೂಪರ್ ಸ್ಟಾರ್ ಆಗಿದ್ದವರು ನಮ್ಮ ಕ್ರೀಡಾಪಟು ಕೊಡಗಿನ ಅಶ್ವಿನಿ ನಾಚಪ್ಪ. ಇವರು ಕೆಲವು ತೆಲುಗು ಚಲನಚಿತ್ರಗಳಲ್ಲಿ ನಟಿಸಿದ್ದು ಮಾತ್ರವಲ್ಲ, ಅವರ ಸ್ವಂತ ಜೀವನ ಚರಿತ್ರೆಯನ್ನು ಆಧರಿಸಿದ ಚಿತ್ರ 'ಅಶ್ವಿನಿ' ತೆಲುಗು ಚಿತ್ರಕ್ಕಾಗಿ ಅತ್ಯುತ್ತಮ ಚೊಚ್ಚಲ ನಟಿ ರಾಜ್ಯ ನಂದಿ ಪ್ರಶಸ್ತಿಯನ್ನು ಕೂಡ ಪಡೆದುಕೊಂಡಿದ್ದಾರೆ.

ಇನ್ನು, ಓಂ, ಉಪೇಂದ್ರ, ಯಜಮಾನ... ಚಿತ್ರಗಳ ಕಾಲದಲ್ಲಿ ಕನ್ನಡ



ಚಿತ್ರರಂಗವನ್ನು ಆಳಿದ ಪ್ರೇಮಾ, ಕೊಡಗಿನ ಮುರ್ನಾಡುವಿನ ನೆರವಂಡ ಕುಟುಂಬದ ಹುಡುಗಿ! ಆ ಕಾಲದಲ್ಲೆ, ಕನ್ನಡ, ತೆಲುಗು, ಮಲಯಾಳಂ ಮತ್ತು ತಮಿಳು ಭಾಷೆಗಳಲ್ಲಿ ನಟಿಸಿದ ದಕ್ಷಿಣ ಭಾರತದ ನಟಿ. 'ಓ' ಚಿತ್ರದ ನಟನೆಗೆ ಕರ್ನಾಟಕ ರಾಜ್ಯ ಸರ್ಕಾರ ನೀಡುವ ಅತ್ತಯ ನಟಿ ರಾಜ್ಯ ಪ್ರಶಸ್ತಿ ಕೂಡ ಪಡೆದಿದ್ದಾರೆ! ಪ್ರೇಮಾ ಅವರ ನಂತರ ಹಲವಾರು ಕೊಡಗಿನ ಹುಡುಗಿಯರು ಚಿತ್ರರಂಗ ಪ್ರವೇಶಿಸಿದ್ದಿದೆ. ಕನ್ನಡ ಮತ್ತು ಹಿಂದಿ ಭಾಷೆಯ ಚಿತ್ರಗಳಲ್ಲೂ ನಟಿಸಿರುವ ನಿಧಿ ಸುಬ್ಬಯ್ಯ, ಹರ್ಷಿಕಾ ಪೂಣಚ್ಚ, ಡೈಸಿ ಬೋಪಣ್ಣ, ನಿಧಿ ಸುಬ್ಬಯ್ಯ, ಸಣ್ಣುವಂಡ ನಯನಾ ಕಾವೇರಪ್ಪ, ಕೃಷಿ ತಾಪಂಡ, ತನಿಷಾ ಕುಪ್ಪಂಡ, ರೀಷ್ಮಾ ನಾಣಯ್ಯ, ವರ್ಷಾ ಬೊಳ್ಳಮ್ಮ, ಶ್ವೇತಾ ಚೆಂಗಪ್ಪ, ತಸ್ವಿನಿ ಕರುಂಬಯ್ಯ... ಸದ್ಯ, ನನಗೆ ನೆನಪಾದ ಹೆಸರುಗಳಿವು. ಆದರೆ ಪಟ್ಟಿ ದೊಡ್ಡದಿದೆ, ಬೆಳೆಯುತ್ತಲೇ ಹೋಗುತ್ತದೆ!! ಈಗಂತೂ ಕಿರುತೆರೆಯಲ್ಲೂ ಕೊಡಗಿನ ಕಲಾವಿದೆಯರು ಮಿಂಚುತ್ತಿದ್ದಾರೆ.

ರಶ್ಮಿಕಾ ಮಂದಣ್ಣ ಇಂದು ರಾಷ್ಟ್ರಮಟ್ಟದಲ್ಲಿ ಖ್ಯಾತಿಯನ್ನು ಗಳಿಸಿರುವುದು ಹೆಮ್ಮೆಯ ವಿಷಯ. ಆದರೆ ಯಶಸ್ಸಿನ ಅಮಲಲ್ಲಿ ನಾನೇ ಮೊದಲ ಕೊಡವ ತಾರೆ ಎಂದು ಹೇಳಿದ್ದು ದೊಡ್ಡ ತಪ್ಪು!! ಈ ಮೂಲಕ ತಾನು ದೊಡ್ಡ ಸುಳ್ಳಿ ಎಂದು ಮತ್ತೊಮ್ಮೆ ಖಚಿತಪಡಿಸಿದ್ದಾಳೆ!!!

ಈ ಮೊದಲು ಕಿರಿಕ್ ಪಾರ್ಟಿ ಟೈಮ್ ಅಲ್ಲಿ ರಕ್ಷಿತ್ ಶೆಟ್ಟಿ ಜೊತೆ ಅವಳ ಎಂಗೇಜ್‌ಮೆಂಟ್ ಆಗಿದ್ದಾಗ, ಅದನ್ನು ಮುರಕೊಂಡು ತೆಲುಗು ಚಿತ್ರರಂಗಕ್ಕೆ ಹೋದಾಗ, ಅಲ್ಲಿನ ಪತ್ರಕರ್ತರು ಈ ಸುದ್ದಿಯನ್ನು ಕೆದಕಿದಾಗ, ಅಂಥದ್ದೇನು ಆಗಿಲ್ಲ.... ನಾನು ಸಿಂಗಲ್ ಎಂದು ಮೊದಲ ಸುಳ್ಳು ಹೇಳಿ ಸಿಕ್ಕಿಬಿದ್ದಿದ್ದಳು! ಎರಡನೇ ಭಾರಿ, ಹಿಂದಿಯ 'ಚಾವಾ' ಚಿತ್ರದ ಪ್ರಚಾರದ ಸಮಯದಲ್ಲಿ ಕರ್ನಾಟಕದ ಹೆಸರು ಹೇಳದೆ, ನಾನು ಹೈದ್ರಾಬಾದ್‌ನವಳು ಎಂದು ಸುಳ್ಳು ಹೇಳಿದ್ದಳು!

ಇದೀಗ ಕೊಡಗಿನಿಂದ ಸಿನಿಮಾ ರಂಗಕ್ಕೆ ಬಂದಿರೋ ಮೊಟ್ಟ ಮೊದಲ ತಾರೆ ನಾನೇ.... ಎಂದು ದೊಡ್ಡ ಸುಳ್ಳೇ ಬೊಗಳಿದ್ದಾಳೆ! ಇಷ್ಟಕ್ಕೂ ಈವಾಗ ಈ ರಶ್ಮಿಕಾ ಕೊಡಗಿನ ಹೆಸರು ಹೇಳಲು ಕಾರಣ ಧನುಷ್! ಇತ್ತೀಚಿಗೆ 'ಕುಬೇರ' ಬಿಡುಗಡೆ ಆಯಿತಲ್ಲ, ಅದರ ಸಕ್ಸಸ್ ಮೀಟ್‌ನಲ್ಲಿ ಧನುಷ್, ರಶ್ಮಿಕಾಳನ್ನು ಹೊಗಳುತ್ತ, ರಶ್ಮಿಕಾ ಕೂರ್ಗ್‌ನಿಂದ ಬಂದ ಚಿಕ್ಕ ಹುಡುಗಿ... ದೊಡ್ಡ ಸಾಧನೆ ಮಾಡಿದ್ದಾಳೆ..... ಎಂದಿದ್ದರು. ಹೀಗಾಗಿ, ಇಷ್ಟು ದಿನವೂ ಹೈದ್ರಾಬಾದ್... ಹೈದ್ರಾಬಾದ್ ಅನ್ನುತ್ತಿದ್ದ ರಶ್ಮಿಕಾ ಇದೀಗ ಕೂರ್ಗ್ ಅಂದಿದ್ದಾಳೆ!!

ಅದಿರಲಿ, ಕೂರ್ಗ್ ಪೋರ್ಕ್ ರಶ್ಮಿಕಾಳಿಗೆ ಇದು ಅದೃಷ್ಟದ ಕಾಲ. ಒಂದೇ ಎರಡೋ ಫ್ಲಾಪ್ ಬಿಟ್ರೆ, ಮಾಡಿದ ಎಲ್ಲಾ ಸಿನಿಮಾಗಳು ಸೂಪರ್ ಹಿಟ್ ಆಗ್ತಿವೆ. ಈಕೆ ಅಲ್ಲು ಅರ್ಜುನ್ ಜೊತೆ ನಟಿಸಿದ ಪುಷ್ಪ ಅಂತೂ ಬ್ಲಾಕ್ ಬಸ್ಟರ್ ಆಗಿದೆ.ಇದರ ಮೂರನೇ ಸೀಕ್ವೆಲ್ ಬರುವ ಮುನ್ಸೂಚನೆ ಕೂಡ ಇದೆ. ಇದೀಗ ಅಟ್ಲಿ ನಿರ್ದೇಶನದಲ್ಲಿ ಅಲ್ಲು ಅರ್ಜುನ್ ನಟಿಸಲಿರೋ ಹೊಸ ಚಿತ್ರಕ್ಕೂ ರಶ್ಮಿಕಾಳೇ ನಾಯಕಿ! ಉತ್ತರ ಮತ್ತು ದಕ್ಷಿಣದಲ್ಲಿ ಸದ್ಯಕ್ಕೆ ಇವಳೇ ನಂಬರ್ ವನ್ ಸ್ಟಾರಿಣಿ!!

ಮೆಗಾಸ್ಟಾರ್ ಚಿರಂಜೀವಿ, ನಾಗಾರ್ಜುನರಿಂದ ಹಿಡಿದು ವಿಜಯ್, ಧನುಷ್, ಅಲ್ಲು ಅರ್ಜುನ್, ಕಾರ್ತಿಕ್ ಎಲ್ಲರಿಗೂ ರಶ್ಮಿಕಾಳೇ ಬೇಕು! ನಾಳೆ ರಜನಿಕಾಂತ್ ಕೂಡಾ ಇವಳನ್ನೇ ಹಾಕಿಕೊಂಡರೂ ಅಚ್ಚರಿಯಿಲ್ಲ!! ಹಿರಿ-ಕಿರಿಯರಿಗೆಲ್ಲಾ ರಶ್ಮಿಕಾಳೇ ಕ್ರಷ್ ಆಗಿದ್ದಾಳೆ!!! ಇನ್ನೇನು ಬೇಕು....

### ಹಾಗಾದರೆ ಇವರೆಲ್ಲಾ ಯಾರು...?




## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ - ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೊರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 06 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com